ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 20 ಶನಿವಾರ 2023


₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 34 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com







ಸಿದ್ದು ಪ್ರಮಾಣ ವಚನಕ್ಕೆ ವರುಣ ಅಡ್ಡಿ ಸಾಧ್ಯತೆ; ಬೆಂಗಳೂರಲ್ಲಿ ಗುಡುಗು ಸಹಿತ ಮಳೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಎರಡನೇ ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿದ್ದು, ಈ ಸಮಾರಂಭಕ್ಕೆ ವರುಣ ಅಡ್ಡಿಯಾಗುವ ಸಾಧ್ಯತೆ ಇದೆ. ಬಿಸಿಲಿನಿಂದ ಕಂಗೆಟ್ಟಿರುವ ಸಿಲಿಕಾನ್ ಸಿಟಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಶನಿವಾರ ಮತ್ತು ಭಾನುವಾರ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಸಿಎಂ ಮತ್ತು ಡಿಸಿಎಂ ಪ್ರಮಾಣ ವಚನಕ್ಕೆ ಭರದ ಸಿದ್ಧತೆ ನಡೆಯುತ್ತಿದೆ. ಆದರೆ, ಶನಿವಾರದ ಈ ಪ್ರಮಾಣ ವಚನ ಸಂಭ್ರಮಕ್ಕೆ



ವರುಣ ತಣ್ಣೀರೆರಚುವ ಸಾಧ್ಯತೆ ಇದೆ. ಮೇ 20 ಮತ್ತು ಮೇ 21 ರಂದು ದಕ್ಷಿಣ ಕರ್ನಾಟಕದ ಕೆಲವು ಭಾಗಗಳಲ್ಲಿ ಮಿಂಚು ಮತ್ತು ವೇಗವಾದ ಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಮೇ 21 ಮತ್ತು 22 ರಂದು ಬೆಂಗಳೂರಿನ ಕೆಲವು ಭಾಗಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಮತ್ತು ಮೋಡ ಕವಿದಿರುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.5.2023 ಶನಿವಾರ, ಮಳೆ ನಕ್ಷತ್ರ:
ಕೃತ್ತಿಕ, 11.05.2023 ರಿಂದ 24.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ,
ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಕೃತ್ತಿಕ, ರಾಹುಕಾಲ:
ಬೆಳಗ್ಗೆ 9 ರಿಂದ 10.30ರವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ, ಯೂನಿವರ್ಸಿಟಿ ಕೆರಿಯರ್ ಕ್ಲಬ್, ರೀಪ್ ಬೆನೆಫಿಟ್ ಫೌಂಡೇಷನ್, ಬೆಂಗಳೂರು:** ವಿಷನ್ ಇನ್ನೋವೇಷನ್ ಮೈಸೂರು ಸಮಾರೋಪ ಸಮಾರಂಭ, ಉದ್ಘಾಟನೆ: ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತರು: ಪ್ರೊ.ಎಸ್.ಜೆ.ಮಂಜುನಾಥ್, ಪ್ರೊ.ಎನ್.ನಾಗರಾಜ್, ಶ್ರೀಮತಿ ಸರಹಾ ಮಿಶ್ರಾ, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ವಿ.ಆರ್. ಶೈಲಜಾ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶ್ರೀ ಶಿರಡಿ ಸಾಯಿಬಾಬಾ ಮಂದಿರ, ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ :** ಪ್ರತಿಭಾ ಪುರಸ್ಕಾರ, ಅಭಿನಂದನಾ ಭಾಷಣ : ಪ್ರೊ ದ್ವಾರಕಿ, ಮುಖ್ಯ ಅತಿಥಿಗಳು : ಸಾಹಿತಿ ಬನ್ನೂರು ಕೆ. ರಾಜು, ವಿಶೇಷ ಆಹ್ವಾನಿತರು : ಗೋಪಾಲಸ್ವಾಮಿ, ವೆಂಕಟೇಶ್, ಮನೋಹರ್, ಎ. ಸಂಗಪ್ಪ, ಶ್ರೀಮತಿ ಕಾವೇರಿಯಮ್ಮ, ಸ್ಥಳ: ಶ್ರೀ ಶಿರಡಿ ಸಾಯಿಬಾಬಾ ಮಂದಿರ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ತೆಲುಗು ಅಧ್ಯಯನ ಮತ್ತು ಸಂಶೋಧನಾ ವಿಭಾಗ:** ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ತೆಲುಗು ಮತ್ತು ಕನ್ನಡ ಕವಿಗಳ ಪಾತ್ರ ಕುರಿತು ವಿಚಾರ ಸಂಕಿರಣ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ.

■ **ವಿಮಾ ನಿಗಮ ನೌಕರರ ಸಂಘ, ಮೈಸೂರು ವಿಭಾಗ :** ಡಾ. ಬಿ.ಆರ್. ಅಂಬೇಡ್ಕರ್ 132ನೇ ಜಯಂತಿ, ಪ್ರಮುಖ ಭಾಷಣಕಾರರು : ರಂಗಾಯಣ ಮಾಜಿ ನಿರ್ದೇಶಕ ಸಿ. ಬಸವಲಿಂಗಯ್ಯ, ಮುಖ್ಯ ಅತಿಥಿಗಳು :ಸಂಘದ ಜಂಟಿ ಕಾರ್ಯದರ್ಶಿ ಜೆ. ಸುರೇಶ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್.ಕೆ. ರಾಮು, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–776, ಕಥೆ ಹೇಳುವವರು : ರಾಜ್ಯ ಸಂಪನ್ಮೂಲ ವ್ಯಕ್ತಿ ಬಿ. ರವೀಶ್ ಕುಮಾರ್, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ – ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 7.15 ಭಾವಗೀತೆಗಳು – ಮೈಸೂರು ಅನಂತಸ್ವಾಮಿ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ–ನಡೆಸಿಕೊಡುತ್ತಾರೆ– ದಿವಾಕರ ಹೆಗಡೆ, 9.00 ಕಾಫಿ ತಿಂಡಿ, 10.00 ವಿ.ಕೆ. ರಾಮನ್ – ವೇಣುವಾದನ. **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ–ಚೆನ್ನಾಜಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ– ಸುಪ್ರಿಯಾ ಆಚಾರ್ಯ, 2.40 ಚಲನಚಿತ್ರ ಧ್ವನಿವಾಹಿನಿ– ಭಕ್ತ ಕುಂಬಾರ, 3.30 ಮಕ್ಕಳ ಮಂಟಪ, 4.00 ನಾಟಕ "ಡಿ.ಜಿ. ಸರ್ ಅಂತೂ ಹೂಂ ಅಂದ್ರು", ರಚನೆ– ಡಾ.ಬಿ.ಆರ್. ಕುಲಕರ್ಣಿ, ನಿರ್ಮಾಣ– ಹೆಚ್.ಶ್ರೀನಿವಾಸ್, 4.30 ನೆನಪಿನಂಗಳ – ಕುವೆಂಪು ಅವರ ಕಾವ್ಯಗಳನ್ನು ಕುರಿತು ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರಿಂದ ವಿಮರ್ಶಾತ್ಮಕ ಭಾಷಣ, ಸಾಹಿತ್ಯ ಲೋಕದ ಹಿರಿಯರಾದ ವಿ. ಸೀತಾರಾಮಯ್ಯನವರು ಕುರಿತು ಮಾತನಾಡುತ್ತಾರೆ ದೇಶ್ ಕುಲಕರ್ಣಿ, 6.50 ಕೃಷಿರಂಗ – ತೋರಣ ಹೂರಣ– ಪ್ರಸ್ತುತಿ– ಜಿ.ಶಾಂತಕುಮಾರ್, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ವಿ. ಮುಕುಂದ ಶರ್ಮ– ಹಾಡುಗಾರಿಕೆ

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ, ಜಯಲಕ್ಷ್ಮಿಪುರಂ:** ವಿದ್ವಾಂಸರಾದ ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮಪುರಾಣ ಕುರಿತು ಪ್ರವಚನ, ಸ್ಥಳ:ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ

■ **ನಾದಬ್ರಹ್ಮ ಸಂಗೀತ ಸಭಾ :** ಗಾನಕಲಾಭೂಷಣ ವೈಣಿಕ ವಿದ್ವಾನ್ ಎಂ.ಜೆ.ಶ್ರೀನಿವಾಸ ಅಯ್ಯಂಗಾರ್ ಅವರ ಶತಮಾನೋತ್ಸವ ಸಮಾರಂಭ, ವಿದುಷಿ ಡಾ.ಆರ್.ಎಸ್. ಜಯಲಕ್ಷ್ಮಿ ಮತ್ತು ವಿದುಷಿ ಚಾರುಲತಾ ಚಂದ್ರಶೇಖರ್ ಅವರಿಂದ ದ್ವಂದ್ವ ವೀಣಾವಾದನ, ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜನ್–ಘಟ, ಸ್ಥಳ:ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀರಾಘವೇಂದ್ರಸ್ವಾಮಿಗಳವರ ಬೃಂದಾವನ ಸನ್ನಿಧಾನ, ಕೃಷ್ಣಮೂರ್ತಿಪುರಂ:** ಶ್ರೀ ರಾಘವೇಂದ್ರ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ, ಪಂಡಿತ್ ಕಪಿಲಾಚಾರ್ಯ ಗಲಗಲಿ, ಧಾರವಾಡ ಅವರಿಂದ ಶ್ರೀಮದ್ಭಾಗವತ ಪ್ರವಚನ, ಸ್ಥಳ: ತತ್ವಜ್ಞಾನ ಮಂದಿರ, ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣ, ಸಂಜೆ 6ಕ್ಕೆ.

■ **ನಿರಂತರ ಫೌಂಡೇಷನ್:** ರಂಗ ವಸಂತ–2023, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 6.15ಕ್ಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 20 ಶನಿವಾರ 2023

ಸಂಪುಟ: 44 | ಸಂಚಿಕೆ: 34 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಖ್ಯಮಂತ್ರಿ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಪ್ರಮಾಣ ವಚನ

● ಇದೇ ಸಮಾರಂಭ ಲೋಕಸಭಾ ಚುನಾವಣೆಗೆ ಪರ್ಯಾಯ ಶಕ್ತಿ ವೇದಿಕೆ ● ಬಿಜೆಪಿಯೇತರ ಶಕ್ತಿಗಳ ಒಗ್ಗೂಡಿಸುವ ಪ್ರಯತ್ನಕ್ಕೂ ಈ ಮೂಲಕ ಚಾಲನೆ ● ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಅಲ್ಲದೆ ಬಿಹಾರ ಸಿಎಂ ನಿತೀಶ್ ಕುಮಾರ್, ತಮಿಳ್ನಾಡು ಸಿಎಂ ಸ್ಟಾಲಿನ್, ಜಾರ್ಖಂಡ್ ಸಿಎಂ ಹೇಮಂತ್ ಸೊರೇನ್, ರಾಜಸ್ತಾನ ಸಿಎಂ ಅಶೋಕ್ ಗೆಹ್ಲೋಟ್, ಛತೀಸ್ ಘಡ್ ಸಿಎಂ ಭೂಪೇಶ್ ಬಗೆಲ್, ಹಿಮಾಚಲಪ್ರದೇಶ ಸಿಎಂ ಸುಖ್ವಿಂದರ್ ಸಿಂಗ್ ಸುಖು, ಪಾಂಡಿಚೇರಿ ಸಿಎಂ ರಂಗಸ್ವಾಮಿ, ಟಿಎಂಸಿ ನಾಯಕ ಕಾಕೋಲಿ ಘೋಷ್ ದಸ್ತಿದಾರ್‌ಗೆ ಆಹ್ವಾನ

ಬೆಂಗಳೂರು, ಮೇ 19(ಕೆಎಂಶಿ)–ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ನಾಳೆ (ಶನಿವಾರ) ಮಧ್ಯಾಹ್ನ 12.30ಕ್ಕೆ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಅದ್ದೂರಿ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಈ ಸಮಾರಂಭವನ್ನೇ ಮುಂಬರುವ ಲೋಕಸಭಾ ಚುನಾವಣೆಗೆ ಪರ್ಯಾಯ ಶಕ್ತಿಯ ವೇದಿಕೆಯನ್ನಾಗಿ ಕಾಂಗ್ರೆಸ್ ಮಾಡಿಕೊಳ್ಳುತ್ತಿದೆ. ಇದರೊಂದಿಗೆ ಬಿಜೆಪಿಯೇತರ ಪಕ್ಷಗಳನ್ನು ಒಂದೇ ಸೂರಿನಡಿ ತರಲಾಗುತ್ತಿದೆ.

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಚಂಡ ಬಹುಮತದಿಂದ ಅಧಿಕಾರಕ್ಕೆ ಬಂದಿರುವ ರೀತಿಯಲ್ಲೇ ಲೋಕಸಭಾ ಚುನಾವಣೆಲ್ಲೂ ಬಿಜೆಪಿಯೇತರ ಶಕ್ತಿಗಳು ಜಯಭೇರಿ ಬಾರಿಸಲು ಈ ವೇದಿಕೆಯನ್ನು ಅಸ್ತ್ರವಾಗಿ ಬಳಕೆ ಮಾಡಿಕೊಳ್ಳುತ್ತಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯಾಗಿ

● 8ನೇ ಪುಟಕ್ಕೆ



ನಿಯೋಜಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶುಕ್ರವಾರ ನವದೆಹಲಿಯಲ್ಲಿ ಕಾಂಗ್ರೆಸ್ ನಾಯಕರಾದ ರಾಹುಲ್‌ಗಾಂಧಿ ಹಾಗೂ ಪ್ರಿಯಾಂಕ ಗಾಂಧಿಯವರನ್ನು ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು.

ಚಲಾವಣೆಯಿಂದ ₹ 2000 ನೋಟು ಹಿಂಪಡೆದ ಆರ್‌ಬಿಐ

ಸೆ.30ರವರೆಗೆ ಬದಲಾವಣೆಗೆ ಅವಕಾಶ

● ಮೇ 23 ರಿಂದ ಸೆ.30 ಬದಲಾವಣೆ ಅವಧಿ ನಿಗದಿ
● ಒಮ್ಮೆ 20,000 ಮಾತ್ರ ಬದಲಾವಣೆ/ಠೇವಣಿ ಮಿತಿ
● ಅ.1 ರಿಂದ ಈ ನೋಟು ಚಲಾವಣೆ ನಿಷಿದ್ಧ



ನವದೆಹಲಿ, ಮೇ 19– ಕೇಂದ್ರ ಸರ್ಕಾರ 500 ರೂ. ಹಾಗೂ 1,000 ರೂ. ನೋಟುಗಳ ನಿಷೇಧಿಸಿದ ಬಳಿಕ ಪರಿಚಯಿಸಲಾಗಿದ್ದ 2,000 ರೂ. ಮುಖಬೆಲೆಯ ನೋಟುಗಳನ್ನು ಸಹ ಈಗ ಚಲಾವಣೆಯಿಂದ ಹಿಂದಕ್ಕೆ ಪಡೆಯಲು ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ನಿರ್ಧರಿಸಿದೆ.

2016ರ ನವೆಂಬರ್ 8ರಂದು 500 ರೂ. ಹಾಗೂ 1000 ರೂ. ನೋಟುಗಳ ನಿಷೇಧ ನಿರ್ಧಾರ ಕೈಗೊಂಡಂತೆ, ಈಗ 2000 ರೂ. ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವ ನಿರ್ಧಾರ ಬ್ಯಾಂಕ್‌ನಿಂದ ಹೊರ ಬಿದ್ದಿದೆ. ಚಲಾವಣೆಯಲ್ಲಿ ಇರುವ 2,000 ರೂ. ನೋಟುಗಳು ಸದ್ಯಕ್ಕೆ ಕಾನೂನಾತ್ಮಕವಾಗಿ ಮುಂದುವರಿಯಲಿವೆ. ಸೆಪ್ಟೆಂಬರ್ 30ರ ಒಳಗಾಗಿ ಬ್ಯಾಂಕ್‌ಗಳಲ್ಲಿ ಠೇವಣಿ ಇಡಲು ಅಥವಾ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳಲು ಸೂಚನೆ ನೀಡಲಾಗಿದೆ. ಅ.1ರಿಂದ ಈ ನೋಟುಗಳ ಚಲಾವಣೆ ಸಂಪೂರ್ಣ ರದ್ದಾಗಲಿದೆ. ಮೇ 23ರಿಂದ ಈ ನೋಟುಗಳನ್ನು ಬದಲಾಯಿಸಿಕೊಳ್ಳಲು ಅವಕಾಶ ನೀಡಿದ್ದು, ಒಂದು ಬಾರಿಗೆ 20 ಸಾವಿರ ರೂ. ಠೇವಣಿ ಇಲ್ಲವೇ ಬದಲಾವಣೆ ಮಾಡಿಕೊಳ್ಳಬಹುದು ಎಂದು ಆರ್‌ಬಿಐ ಮಿತಿ ಹೇರಿದೆ. ಬ್ಯಾಂಕ್ ಸಿಬ್ಬಂದಿಗೆ ಒತ್ತಡವಾಗಬಾರದು ಹಾಗೂ ದಿನವಹಿ ವಹಿವಾಟಿನ ಮೇಲೆ ಪರಿಣಾಮವಾಗಬಾರದು ಎಂಬ ಕಾರಣಕ್ಕೆ ಈ ರೀತಿ ಮಿತಿ ವಿಧಿಸಲಾಗಿದೆ. ಬ್ಯಾಂಕ್ ಖಾತೆಗಳಿಗೆ ಗ್ರಾಹಕರು ಹಣ ಜಮಾ ಮಾಡುವ ರೀತಿಯಲ್ಲಿಯೇ 2 ಸಾವಿರದ ನೋಟುಗಳನ್ನೂ ಯಾವುದೇ ನಿರ್ಬಂಧ ಇಲ್ಲದೆ ಠೇವಣಿ ಇಡಬಹುದು. ಆದರೆ ಇದು ಶಾಸನಬದ್ಧ ನಿಬಂಧನೆಗಳಿಗೆ ಒಳಪಟ್ಟಿರಲಿದೆ. ನೋಟುಗಳನ್ನು ಹಿಂಪಡೆಯುವ ಪ್ರಕ್ರಿಯೆಗೆ ಸಾಕಷ್ಟು ಸಮಯ ನೀಡಲಾಗಿದೆ. ಇದು ವ್ಯವಸ್ಥಿತವಾಗಿ ನಡೆಯಲಿದ್ದು, ಜನಸಾಮಾನ್ಯರು ಯಾವುದೇ ರೀತಿಯಲ್ಲೂ ಗಾಬರಿಪಡುವ ಅಗತ್ಯವಿಲ್ಲ. ಜನರು ಬ್ಯಾಂಕ್‌ಗಳಲ್ಲಿ ನೋಟುಗಳನ್ನು ಬದಲಾಯಿಸಿಕೊಳ್ಳಲು 4 ತಿಂಗಳ ಸಮಯಾವಕಾಶ ಸಾಕಾಗುತ್ತದೆ. ಚಲಾವಣೆಯಲ್ಲಿರುವ ಹೆಚ್ಚಿನ ನೋಟುಗಳು ಸೆಪ್ಟೆಂಬರ್ 30ರ ನಿರ್ದಿಷ್ಟ ಗಡುವಿನೊಳಗೆ ಬ್ಯಾಂಕ್‌ಗಳಿಗೆ ಹಿಂತಿರುಗುತ್ತವೆ ಎಂದು ಆರ್‌ಬಿಐ ವಿಶ್ವಾಸ ವ್ಯಕ್ತಪಡಿಸಿದೆ. 2017ರಲ್ಲಿ ಚಲಾವಣೆಗೆ ಬಂದ 2000 ನೋಟುಗಳು 2018ರ ಮಾರ್ಚ್ 31ರ ವೇಳೆಗೆ 6.73 ಲಕ್ಷ ಕೋಟಿ ವಹಿವಾಟು ಇತ್ತು. ಆದರೆ 2018ರಲ್ಲಿ ಈ ನೋಟುಗಳ ಮುದ್ರಣವನ್ನು ಆರ್‌ಬಿಐ ಸ್ಥಗಿತಗೊಳಿಸಿತ್ತು. ಬ್ಯಾಂಕ್‌ಗಳು ಈ ನೋಟುಗಳನ್ನು ನಿಧಾನವಾಗಿ ಹಿಂಪಡೆಯುವ ಪ್ರಕ್ರಿಯೆ ಆರಂಭಿಸಿದ್ದವು. ಮಾರ್ಚ್ 31, 2023ರ ವೇಳೆಗೆ 2000 ನೋಟುಗಳ ಮೌಲ್ಯ

● 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಅವರು : "ನನ್ನ ಆರೋಗ್ಯದ ಬಗ್ಗೆ ನಿಗಾ ವಹಿಸೋರು ಒಬ್ಬರಾದ್ರು ಜಗತ್ತಿನಲ್ಲಿದ್ದಾರೆ"
ಇವರು : "ಯಾರು? ನಿಮ್ಮ ಹೆಂಡತೀನಾ?"
ಅವರು : "ಇಲ್ಲ, ನನ್ನ ಡಾಕ್ಟ್ರು!"

ಮೈಸೂರು ಮಿತ್ರ
ಶನಿವಾರ, 20 ಮೇ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........
ಸಂತೋಷ ಎನ್ನುವುದು ನಿಮ್ಮಲ್ಲಿ ಏನಿದೆ ಅಥವಾ ನೀವು ಯಾರು ಎನ್ನುವುದರ ಮೇಲೆ ಅವಲಂಬಿತವಾಗಿಲ್ಲ. ಅದು ನೀವು ಏನು ಯೋಚಿಸುತ್ತಿದ್ದೀರಿ ಎನ್ನುವುದನ್ನು ಅವಲಂಬಿಸಿದೆ. –ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬುದ್ಧಿವಂತನೇ ಬಲವಂತ

ನಿಮ್ಮ ಪತ್ರಗಳು

ವಿಜಯನಗರ 4ನೇ ಹಂತಕ್ಕೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರು ವಿಜಯನಗರ 4ನೇ ಹಂತಕ್ಕೆ ಹಾಗೂ ಆರ್‌ಎಂಪಿ ಬಸ್ ತಂಗುದಾಣಕ್ಕೆ ಸಿಟಿ ಬಸ್‌ಗಳ ಕೊರತೆ ಇದೆ. ಅದರಲ್ಲೂ ಭಾನುವಾರದ ದಿನಗಳಲ್ಲಿ ಸಿಟಿ ಬಸ್‌ಗಳು ಬರುವುದೇ ಇಲ್ಲ. ಭಾನುವಾರದ ದಿನಗಳಲ್ಲಿ ಬೇರೆ ಬೇರೆ ಊರುಗಳಿಗೆ ಹಾಗೂ ಕಾರ್ಯಕ್ರಮಗಳಿಗೆ ಹೋಗುವವರು ಇರುತ್ತಾರೆ. ಅವರಿಗೆ ತುಂಬಾ ತೊಂದರೆಯಾಗುತ್ತಿದೆ.

ವಿಜಯನಗರ 4ನೇ ಹಂತಕ್ಕೆ ಬರುವ ಕೆಲವು ಸಿಟಿ ಬಸ್‌ಗಳಿಗೆ ಈಗಲೂ ನಗರ ಬಸ್ ನಿಲ್ದಾಣ –ಹಿನಕಲ್ ಎಂಬ ಬೋರ್ಡ್‌ಗಳನ್ನೇ ಹಾಕಿಕೊಂಡು ಸಂಚರಿಸುತ್ತವೆ. ಇದರ ಬಗ್ಗೆ ಮನವಿ ಸಲ್ಲಿಸಿದ್ದೇನೆ. ಆದರೂ ಕೂಡ ಬೋರ್ಡ್‌ಗಳು ಬದಲಾಗಿಲ್ಲ. ವಿಜಯನಗರ 4ನೇ ಹಂತ ಎಂದು ಬೋರ್ಡ್ ಇಲ್ಲದಿದ್ದರೆ ಈ ಭಾಗದ ಜನ ಹಿನಕಲ್ ಬಸ್‌ಗೆ ಯಾಕೆ ಹತ್ತುತ್ತಾರೆ. ಕೇಳಿದರೆ ವಿಜಯನಗರ 4ನೇ ಹಂತದಲ್ಲಿ ಕಲೆಕ್ಷನ್ ಇಲ್ಲ ಎನ್ನುತ್ತಾರೆ. ಕಲೆಕ್ಷನ್ ಹೇಗೆ ಆಗುತ್ತದೆ. ಮೊದಲು ಬೋರ್ಡ್ ಬದಲಾಯಿಸಿ. ವಿಜಯನಗರ 4ನೇ ಹಂತಕ್ಕೆ ಬರುವ ಮತ್ತು ಹೊರಡುವ ಸಿಟಿ ಬಸ್ ವೇಳಾಪಟ್ಟಿಯನ್ನು ಬಸ್ ತಂಗುದಾಣಗಳಲ್ಲಿ ಅಳವಡಿಸಬೇಕು. ವಿಜಯನಗರ 4ನೇ ಹಂತಕ್ಕೆ ಬರುವ ಕೆಲವು ಸಿಟಿ ಬಸ್‌ಗಳು ಬಸವನಹಳ್ಳಿವರೆಗೆ ಹೋಗುವುದೇ ಇಲ್ಲ. ಮರಿಮಲ್ಲಪ್ಪ ಸ್ಕೂಲ್ ಹತ್ತಿರವೇ ವಾಪಸ್ ಹೋಗುತ್ತಾರೆ. ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ವಿಜಯನಗರ 4ನೇ ಹಂತಕ್ಕೆ ಸಂಜೆ 5 ಗಂಟೆ ಮೇಲೆ ಸಿಟಿಗೆ ಹೋಗಲು ಬಸ್‌ಗಳೇ ಇಲ್ಲ. ಆದಕಾರಣ ಸಂಜೆ 5 ರಿಂದ ರಾತ್ರಿ 9 ರವರೆಗೆ ಅಗತ್ಯವಿರುವಷ್ಟು ಸಿಟಿ ಬಸ್‌ಗಳು ಸಂಚರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಳ್ಳಬೇಕೆಂದು ಮನವಿ.

–ಬಿ.ಜಿ. ರಂಗೇಗೌಡ, ಮೈಸೂರು.

ಸಂದಿಗ್ಧತೆಯ ರಾಜಕೀಯ ವ್ಯವಸ್ಥೆಗೆ ಸಮಾಜಮುಖಿ ನಾಯಕತ್ವ ಅನಿವಾರ್ಯ

ಮಾನ್ಯರೆ,

ಅತ್ಯಂತ ಶ್ರೇಷ್ಠ ಸಮಾಜವಾದಿಗಳಾದ ರಾಮ್ ಮನೋಹರ್ ಲೋಹಿಯಾ, ಜಯಪ್ರಕಾಶ್ ನಾರಾಯಣ್, ರೈತ ನಾಯಕ ಪ್ರೊಫೆಸರ್ ನಂಜುಂಡಸ್ವಾಮಿ ಹಾಗೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಸುಮಾರು 45 ವರ್ಷಗಳಿಂದ ಗಟ್ಟಿಯಾಗಿ ನಂಬಿರುವ ಹಾಗೂ ನೈತಿಕ ರಾಜಕಾರಣಕ್ಕೆ ನಮ್ಮೊಂದಿಗಿನ ಶ್ರೇಷ್ಠ ಉದಾರಣೆಯಾಗಿರುವ ಅವರು ಅಂತವರು ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕಾರ ಮಾಡುತ್ತಿರುವುದು ಸಮಾಜಕ್ಕೆ ಅನಿವಾರ್ಯ.

ಕಾರಣ ಇತ್ತೀಚಿನ ವರ್ಷಗಳಲ್ಲಿ ಮಾರುಕಟ್ಟೆ ಹಾಗೂ ದಲ್ಲಾಳಿ ರಾಜಕಾರಣ ಕದಂಬ ಬಾವುಗಳ ರೀತಿ ಬೆಳೆಯುತ್ತಿರುವ ಸಂದರ್ಭದಲ್ಲಿ ಚುನಾವಣಾ ವ್ಯವಸ್ಥೆ ಹಾಗೂ ಮತದಾರ ಕೂಡ ದಿನದಿಂದ ದಿನಕ್ಕೆ ಮಲಿನವಾಗುತ್ತಿರುವ ಹೊಸ್ತಿಲಲ್ಲಿ ಆಶಾಭಾವನೆ ಹುಟ್ಟಿಸುವಂತಹ ಸಮಾಜಮುಖಿ ರಾಜಕೀಯದ ವ್ಯವಸ್ಥೆಯ ಅನಿವಾರ್ಯತೆ ಈ ದೇಶಕ್ಕೆ ಇದೆ.

ಹಾಗೆಯೇ ರಾಜ್ಯದಲ್ಲಿ ರೈತ ಸಂಘಟನೆ, ದಲಿತ ಸಂಘರ್ಷ ಸಮಿತಿ ಹಾಗೂ ಇನ್ನಿತರ ಸಮಾಜಮುಖಿ ಸಾರ್ವಜನಿಕ ಸಂಘಟನೆಗಳು ಕಾಂಗ್ರೆಸ್ ಪಕ್ಷದ ಸಂವಿಧಾನದತ್ತ ಸಿದ್ಧಾಂತವನ್ನು ಸಂಪೂರ್ಣವಾಗಿ ನಂಬಿ ಬೆಂಬಲ ನೀಡಿವೆ. ಇದು ಕೇವಲ ಕಾಂಗ್ರೆಸ್ ಪಕ್ಷದ ಗೆಲುವಲ್ಲ ಇದು ಪ್ರಜಾಸತ್ಯಯ ಸಾರ್ವಭೌಮತ್ವದ ಗೆಲುವು.

–ಬಿ.ಜೆ.ವಿಜಯ್‌ಕುಮಾರ್, ಮೈಸೂರು.

ಮತ ಚಲಾಯಿಸದೆ ನಿರ್ಲಕ್ಷ್ಯ ವಹಿಸಿದ ಮೈಸೂರು ಜನತೆ

ಮಾನ್ಯರೆ,

ಇತ್ತೀಚೆಗೆ ವಿಧಾನಸಭಾ ಚುನಾವಣೆ ನಡೆದಿದ್ದು, ಮೈಸೂರು ನಗರದ ಚಾಮರಾಜ ಕ್ಷೇತ್ರದಲ್ಲಿ ಶೇ. 61.12, ಚಾಮುಂಡೇಶ್ವರಿಯಲ್ಲಿ ಶೇ. 74.27, ಕೃಷ್ಣರಾಜದಲ್ಲಿ ಶೇ. 59.24, ನರಸಿಂಹರಾಜ ಕ್ಷೇತ್ರದಲ್ಲಿ ಶೇ. 63.44 ಮತದಾನವಾಗಿದ್ದು, ಮೈಸೂರಿನ ಜನತೆ ತಲೆ ತಗ್ಗಿಸುವಂತಹ ವಿಚಾರವಾಗಿದೆ. ಪ್ರತಿಯೊಬ್ಬರೂ ಮತ ಚಲಾಯಿಸಲು ಅನುಕೂಲವಾಗಲೆಂದು ವೇತನ ಸಹಿತ ರಜೆಯನ್ನು ನೀಡಿದ್ದರೂ ಸಹ ಮತ ಚಲಾಯಿಸದೆ ಅಪ್ರಬುದ್ಧ ಅನಾಗರಿಕರಂತೆ ನಡೆದುಕೊಂಡಿರುವ ಜನತೆಯನ್ನು ಯಾರೂ ಕ್ಷಮಿಸಲಾರರು. ಇಂತಹ ಜನರಿಂದ ಮೈಸೂರು ನಗರ ವಾಸಿಗಳಿಗೆ ನೋವು ಉಂಟಾಗಿದ್ದು, ಹೆಸರುವಾಸಿಯಾದ ಮೈಸೂರು ನಗರಕ್ಕೆ ಕಪ್ಪು ಚುಕ್ಕೆಯನ್ನು ಇಟ್ಟಂತಾಗುತ್ತದೆ.

–ಎನ್.ಆರ್. ವಿಜಯಕುಮಾರ್, ಮಾನಸೀನಗರ, ಮೈಸೂರು.

ರಾಜಕೀಯ ನಿವೃತ್ತಿ ಸ್ವಾಗತಾರ್ಹ

ಮಾನ್ಯರೆ,

ಇತ್ತೀಚೆಗೆ ನಡೆದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಪರಾಭವಗೊಂಡ ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದ ಮುಖಂಡರು ಚುನಾವಣಾ ರಾಜಕೀಯದಿಂದ ನಿವೃತ್ತರಾಗುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ.

ಹೊನ್ನಾಳಿ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡ ಬಿಜೆಪಿಯ ರೇಣುಕಾಚಾರ್ಯ, ಕಡೂರು ಕ್ಷೇತ್ರದಿಂದ ಪರಾಭವಗೊಂಡ ಜೆಡಿಎಸ್‌ನ ವೈ.ಎಸ್.ವಿ ದತ್ತಾ, ಬಂಟ್ವಾಳ ಕ್ಷೇತ್ರದಿಂದ ಪರಾಭವಗೊಂಡ ಕಾಂಗ್ರೆಸ್‌ನ ರಮಾನಾಥ ರೈ ಚುನಾವಣಾ ರಾಜಕೀಯದಿಂದ ನಿವೃತ್ತರಾಗುವ ಬಗ್ಗೆ ಹೇಳಿಕೆ ನೀಡಿದ್ದಾರೆ. ಇನ್ನು ಹಿರಿಯ ನಾಯಕರಾದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮಾಜಿ ಕೇಂದ್ರ ಸಚಿವ ಶ್ರೀನಿವಾಸ ಪ್ರಸಾದ್ ಚುನಾವಣಾ ರಾಜಕೀಯದಿಂದ ಈಗಾಗಲೇ ನಿವೃತ್ತರಾಗಿದ್ದಾರೆ. ಪ್ರಸ್ತುತ ಸಿದ್ದರಾಮಯ್ಯ ಸಹ ಇದೇ ತಮ್ಮ ಕಡೆಯ ಚುನಾವಣೆ ಎಂದು ಘೋಷಿಸಿದ್ದಾರೆ. ರಾಜಕೀಯದಿಂದ ನಿವೃತ್ತರಾಗುವವರ ಪಟ್ಟಿ ಹೀಗೆ ಬೆಳೆಯುತ್ತಲೇ ಹೋಗಬಹುದು. ಗಟ್ಟಿಮುಟ್ಟಾಗಿರುವಾಗಲೇ ರಾಜಕೀಯದಿಂದ ನಿವೃತ್ತರಾಗಿ ಹೊಸಬರಿಗೆ ಅವಕಾಶ ಕಲ್ಪಿಸುವುದು ಒಂದು ಒಳ್ಳೆಯ ನಡೆಯಾಗಿದೆ. ಎಲ್ಲಾ ಕ್ಷೇತ್ರಗಳಲ್ಲಿ ಇರುವ ಹಾಗೆ ರಾಜಕೀಯ ಕ್ಷೇತ್ರದಲ್ಲಿ ಸಹ ನಿವೃತ್ತಿ ಇರಬೇಕು. ರಾಜಕೀಯ ನಿಂತ ನೀರಾಗದೇ ನಿರಂತರವಾಗಿ ಹರಿಯುತ್ತಿರುವ ನೀರಾಗಬೇಕು. ಹೊಸ ಪೀಳಿಗೆಯ ಯುವಕ ಯುವತಿಯರು, ರಾಜಕೀಯದಲ್ಲಿ ಆಸಕ್ತಿ ಬೆಳೆಸಿಕೊಂಡು, ದೇಶ ಕಟ್ಟುವ ಕಾಯಕಕ್ಕೆ ಮುಂದಾಗಬೇಕು. ರಾಜಕೀಯವನ್ನು ಹಣ ಮಾಡುವ ದಂಧೆಯನ್ನಾಗಿಸದೇ, ಜನ ಸೇವೆಗೆ ಮುಡಿಪಾದ ಕ್ಷೇತ್ರ ಎಂಬ ಭಾವನೆಯನ್ನು ಮೂಡಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಕಾರ್ಕಳ ಆನಂದ ಭಟ್
ಫ್ಲಾಟ್ ನಂ. 204, 3ನೇ ಮಹಡಿ, ಏಕದಂತ
ಅಪಾರ್ಟ್‌ಮೆಂಟ್, ಪೆರ್ವಾಜೆ ರಸ್ತೆ, ಕಾರ್ಕಳ–574 104
ಮೊ. 7676554198

ದಿಕ್ಕುದೆಸೆ

ಗಣ್ಯಾತಿಗಣ್ಯರಿಗೆ ಪಹರೆ: ದೇಶದ ಬೊಕ್ಕಸಕ್ಕೆ ಹೊರೆ

ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಬ್ಯೂರೋ (ಬಿಪಿಆರ್ ಅಂಡ್ ಡಿ) ಮಾಹಿತಿಯಂತೆ 2019ರಲ್ಲಿ ದೇಶದ ಸುಮಾರು 19000 ಹಾಲಿ ಮತ್ತು ಮಾಜಿ ಮಂತ್ರಿಗಳು, ಸಂಸದರು, ಶಾಸಕರು, ನ್ಯಾಯಾಧೀಶರು, ಉನ್ನತ ಸರಕಾರಿ ಅಧಿಕಾರಿಗಳು ಹಾಗೂ ಇನ್ನಿತರ ವಿಐಪಿಗಳಿಗಾಗಿ 60,000 ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲಾಯಿತು. ಈ ಸಂಖ್ಯೆ ಕಳೆದ ಕೆಲವು ವರ್ಷಗಳಲ್ಲಿ ಗಮನಾರ್ಹ ಏರಿಕೆ ದಾಖಲಿಸಿದೆ. ಸಿಬ್ಬಂದಿಗಳೊಂದಿಗೆ ಸುಮಾರು 30000 ವಾಹನಗಳು ರಕ್ಷಣೆ ನೀಡುವ ಕಾರ್ಯದಲ್ಲಿವೆ. ವಿಐಪಿಗಳ ರಕ್ಷಣೆಗಾಗಿ ಸರಕಾರವು ಸುಮಾರು 12 ಸಾವಿರ ಕೋಟಿ ರೂ. ಖರ್ಚು ಮಾಡುತ್ತಿದೆ. ಇದಲ್ಲದೇ ರಕ್ಷಾ ಸಿಬ್ಬಂದಿಗಳ ಆಹಾರ, ವಸತಿ, ಆರೋಗ್ಯ, ಸಾರಿಗೆ ಮೊದಲಾದವುಗಳಿಗಾಗಿ ಪ್ರತ್ಯೇಕವಾಗಿ ಹೆಚ್ಚುವರಿ ಖರ್ಚು ಮಾಡುತ್ತಿದೆ. ಈ ವಿಐಪಿ ರಕ್ಷಣೆಯು ಆರ್ಥಿಕ ಹೊರೆಯ ಜತೆಗೆ ಜನಸಾಮಾನ್ಯರಿಗೂ ಪೀಡೆಯಾಗಿದೆ.

ಭಾರತ ಸಹಿತ ವಿಶ್ವದ ಅನೇಕ ಭಾಗಗಳಲ್ಲಿ ಗಣ್ಯಾತಿಗಣ್ಯರಿಗೆ (VIP) ವಿಶೇಷ ಸ್ಥಾನಮಾನ, ಸೌಕರ್ಯ, ಭದ್ರತೆ ನೀಡುವಂತಹ ಸಂಸ್ಕೃತಿ ರೂಢಿಯಲ್ಲಿದೆ. ಈ ವಿಐಪಿಗಳು ಆಡಳಿತದ ಮೇಲೆ ಭಾರೀ ಪ್ರಭಾವ ಹೊಂದಿರುತ್ತಾರೆ. ಆಡಳಿತಯಂತ್ರದ ಉನ್ನತ ಸ್ತರದಿಂದ ಕೆಳಹಂತದವರೆಗೆ ಪ್ರತಿ ಹಂತದಲ್ಲೂ ವಿಐಪಿ ಸಂಸ್ಕೃತಿ ರಾರಾಜಿಸುತ್ತಿದೆ. ರಾಜಪ್ರಭುತ್ವ, ನಿರಂಕುಶ ದೊರೆಗಳ ಕಾಲ ಮುಗಿದ ನಂತರವೂ ವಿಐಪಿ ಸಂಸ್ಕೃತಿ ಮುಂದುವರಿದಿದೆ, ಇನ್ನೂ ಬೆಳೆಯುತ್ತಿದೆ.

ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್‌ರವರು ಪ್ರಧಾನಿ ಜವಾಹರಲಾಲ್ ನೆಹರೂರವರಿಗೆ ವಿಐಪಿ ಸಂಸ್ಕೃತಿಯಿಂದ ಉದ್ಭವಿಸುವ ಅನಿಷ್ಟಗಳನ್ನು ಮನವರಿಕೆ ಮಾಡಿ, ಕೇಂದ್ರ ಸಚಿವರ ನಿವಾಸಗಳಿಗೆ ಎರಡು ಭದ್ರತಾ ಸಿಬ್ಬಂದಿ ಪರ್ಯಾಪ್ತವೆಂದು ತಿಳಿಸಿದ್ದರು. ಆದರೆ ಪಟೇಲ್ ನಿಧನಾನಂತರ ಇಂತಹ ಸೂಕ್ಷ್ಮ ವಿಷಯದತ್ತ ಸರ್ಕಾರ ಗಮನಹರಿಸಲಿಲ್ಲ. ಪರಿಣಾಮ ದೇಶದಲ್ಲಿಂದು ವಿಐಪಿ ಸಂಸ್ಕೃತಿ ಹೆಚ್ಚುತ್ತಿದ್ದು, ರಾಜಕಾರಣಿಗಳು ತಮ್ಮ ಗೌರವ, ಪ್ರತಿಷ್ಠೆ ತಮ್ಮ ಸುತ್ತ ಭದ್ರತಾ ಸಿಬ್ಬಂದಿಗಳಿದ್ದಷ್ಟು ಹೆಚ್ಚುವುದೆಂದು ಭಾವಿಸಿ ರಕ್ಷಣೆ ನೀಡಬೇಕೆಂದು ಸರಕಾರಕ್ಕೆ ದುಂಬಾಲು ಬೀಳುತ್ತಿದ್ದಾರೆ. ಸರಕಾರವು ಘೋಷಿಸಿದ ವಿಐಪಿಗಳಿಗೆ, ಪ್ರಾಣಾಪಾಯವಿರುವ ವಿವಿಐಪಿಗಳಿಗೆ ನಿಗದಿತ ಸಂಖ್ಯೆಯಲ್ಲಿ ಸುರಕ್ಷಾ ಸಿಬ್ಬಂದಿಗಳನ್ನು ನೀಡುತ್ತದೆ. ಪ್ರಧಾನಿಗಳಿಗೆ ವಿಶೇಷ ರಕ್ಷಾ ಪಡೆಯಿರುವ (ಎಸ್‌ಪಿಜಿ) ಝಡ್+ಭದ್ರತೆ ಹಾಗೂ ಇತರರಿಗೆ ಝಡ್, ವೈ+, ವೈ, ಎಕ್ಸ್ ವರ್ಗದ ಭದ್ರತೆ ನೀಡಲಾಗುತ್ತದೆ. ಕೇಂದ್ರ, ರಾಜ್ಯ ಸರಕಾರಗಳ ಶಿಫಾರಸ್ಸಿನ ಮೇರೆಗೆ ಕೆಲವರನ್ನು ವಿಐಪಿಗಳೆಂದು ಪರಿಗಣಿಸಿ ಓರ್ವ ಅಥವಾ ಇಬ್ಬರು ಪೊಲೀಸ್ ಸಿಬ್ಬಂದಿಯನ್ನು ರಕ್ಷಣೆಗೆಂದು ನಿಯೋಜಿಸಲಾಗುತ್ತದೆ. ಕೇಂದ್ರೀಯ ಕಾದಿಟ್ಟ ಪೊಲೀಸ್ ಪಡೆ (ಸಿಆರ್‌ಪಿಎಫ್) ಮತ್ತು ಕೇಂದ್ರಿಯ ಕೈಗಾರಿಕಾ ಭದ್ರತಾ ಪಡೆಗಳಿಗೆ (ಸಿಐಎಸ್‌ಎಫ್) ವಿಐಪಿಗಳಿಗೆ ಭದ್ರತೆ ನೀಡುವ ಹೊಣೆ ವಹಿಸಿಕೊಡಲಾಗಿದೆ.

ರಕ್ಷಣೆ ಪಡೆಯುತ್ತಿರುವ ವಿಐಪಿಗಳ ಪ್ರಮಾಣ

ಭಯೋತ್ಪಾದನೆ, ಅಶಾಂತಿ, ಕೋಮು ಸಂಘರ್ಷಗಳಿಂದ ಸೂಕ್ಷ್ಮ ಪ್ರದೇಶಗಳು ಹೆಚ್ಚಿರುವ ಪಶ್ಚಿಮ ಬಂಗಾಳ, ಬಿಹಾರ್, ಪಂಜಾಬ್ ಮೊದಲಾದ ರಾಜ್ಯಗಳಲ್ಲಿ ಭಾರಿ ಸಂಖ್ಯೆಯ ವಿಐಪಿಗಳಿಗೆ ರಕ್ಷಣೆ ನೀಡಲಾಗುತ್ತಿದೆ. ಅದೇ ರೀತಿ ಅನೇಕ ವರ್ಷಗಳಿಂದ ಭಯೋತ್ಪಾದನೆಗೆ ಬಲಿಯಾಗಿರುವ ರಾಜ್ಯಗಳಾದ ಜಮ್ಮು–ಕಾಶ್ಮೀರ, ಅಸ್ಸಾಂ, ಮಣಿಪುರ, ಛತ್ತೀಸ್‌ಗಡಗಳಲ್ಲಿ ತುಲನಾತ್ಮಕವಾಗಿ ರಕ್ಷಣೆ ಪಡೆವ ವಿಐಪಿಗಳ ಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದು ಗಮನಿಸಬೇಕಾದ ಅಂಶವಾಗಿದೆ. ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಬ್ಯೂರೋ (ಬಿಪಿಆರ್ ಅಂಡ್‌ಡಿ) ಮಾಹಿತಿಯಂತೆ 2019ರಲ್ಲಿ ದೇಶದ ಸುಮಾರು 19000 ಹಾಲಿ ಮತ್ತು ಮಾಜಿ ಮಂತ್ರಿಗಳು, ಸಂಸದರು, ಶಾಸಕರು, ನ್ಯಾಯಾಧೀಶರು, ಉನ್ನತ ಸರಕಾರಿ ಅಧಿಕಾರಿಗಳು ಹಾಗೂ ಇನ್ನಿತರ ವಿಐಪಿಗಳಿಗಾಗಿ 60,000 ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲಾಯಿತು. ಈ ಸಂಖ್ಯೆ ಕಳೆದ ಕೆಲವು ವರ್ಷಗಳಲ್ಲಿ ಗಮನಾರ್ಹ ಏರಿಕೆ ದಾಖಲಿಸಿದೆ. ಸಿಬ್ಬಂದಿಗಳೊಂದಿಗೆ ಸುಮಾರು 30000 ವಾಹನಗಳು ರಕ್ಷಣೆ ನೀಡುವ ಕಾರ್ಯದಲ್ಲಿವೆ. ವಿಐಪಿಗಳ ರಕ್ಷಣೆಗಾಗಿ ಸರಕಾರವು ಸುಮಾರು 12 ಸಾವಿರ ಕೋಟಿ ರೂ. ಖರ್ಚು ಮಾಡುತ್ತಿದೆ. ಇದಲ್ಲದೇ ರಕ್ಷಾ ಸಿಬ್ಬಂದಿಗಳ ಆಹಾರ, ವಸತಿ, ಆರೋಗ್ಯ, ಸಾರಿಗೆ ಮೊದಲಾದವುಗಳಿಗಾಗಿ ಪ್ರತ್ಯೇಕವಾಗಿ ಹೆಚ್ಚುವರಿ ಖರ್ಚು ಮಾಡುತ್ತಿದೆ. ಈ ವಿಐಪಿ ರಕ್ಷಣೆಯು ಆರ್ಥಿಕ ಹೊರೆಯ ಜತೆಗೆ ಜನಸಾಮಾನ್ಯರಿಗೂ ಪೀಡೆಯಾಗಿದೆ. ವಿಐಪಿಗಳ ವಾಹನಗಳು ಜನಸಾಮಾನ್ಯರ ವಾಹನಗಳ ಸಂಚಾರ, ಆಂಬ್ಯುಲೆನ್ಸ್‌ಗಳ ಸಂಚಾರ, ಪಾದಚಾರಿಗಳಿಗೆ ಸಮಸ್ಯೆಯಾಗುತ್ತಿವೆ. ಕೆಲವು ಸಂದರ್ಭಗಳಲ್ಲಿ ಭದ್ರತಾ ಸಿಬ್ಬಂದಿಯ ಒರಟುತನ ಜನಸಾಮಾನ್ಯರ ಸಂಕಷ್ಟಗಳನ್ನು ಹೆಚ್ಚಿಸಿದೆ.

ವಿಐಪಿಗಳಿಗೆ ರಕ್ಷಣೆ ನೀಡುವ ಹೊಣೆಗಾರಿಕೆ

ಕೇಂದ್ರ ಗೃಹ ಸಚಿವಾಲಯ, ಕೇಂದ್ರೀಯ ಗುಪ್ತಚರ ಮಂಡಳಿ (ಐಬಿ) ಮತ್ತು ರಿಸರ್ಚ್ ಮತ್ತು ಅನಾಲಿಸಿಸ್ ವಿಂಗ್ (ಆರ್‌ಎಡಬ್ಲ್ಯು) ಈ ಮೂರು ವಿಭಾಗಗಳು ಒಟ್ಟಾಗಿ ವಿಐಪಿಗಳಿಗೆ ರಕ್ಷಣೆ ನೀಡುವ ಹೊಣೆಗಾರಿಕೆ ಹೊಂದಿವೆ. ಈ ಮೂರು ಸಂಸ್ಥೆಗಳು ಸೇರಿ ಸಂಗ್ರಹಿಸಿದ ವರದಿಗಳು, ಮಾಹಿತಿಗಳ ಆಧಾರದಲ್ಲಿ ಯಾವ ವ್ಯಕ್ತಿಗೆ ಯಾವ ಸ್ತರದ ರಕ್ಷಣೆ ನೀಡಬೇಕೆಂದು ನಿರ್ಧರಿಸುತ್ತವೆ. ರಾಜ್ಯಗಳಲ್ಲಿ ರಾಜ್ಯ ತನಿಖಾ ಸಂಸ್ಥೆಗಳು ರಾಜ್ಯ ಸರಕಾರಗಳೊಂದಿಗೆ ಸಮಾಲೋಚಿಸಿ ರಕ್ಷಣೆಗೆ ಅರ್ಹವಿರುವ ವ್ಯಕ್ತಿಗಳನ್ನು ಗುರುತಿಸುತ್ತಾರೆ.

ಭದ್ರತಾ ಸ್ತರಗಳು ಮತ್ತು ರಕ್ಷಣೆ

ಸರಕಾರಿ ಸೂತ್ರದಂತೆ ಝಡ್+ ಸುರಕ್ಷತೆಯಲ್ಲಿ 55 ಭದ್ರತಾ ಸಿಬ್ಬಂದಿಗಳಿದ್ದು ಇವರಲ್ಲಿ ಹತ್ತು ಕಮಾಂಡೋಗಳು ಮತ್ತು ಐದು ಗುಂಡು ನಿರೋಧಕ ವಾಹನಗಳಿರುತ್ತವೆ. ಝಡ್ ವರ್ಗದಲ್ಲಿ 22 ಭದ್ರತಾ ಸಿಬ್ಬಂದಿಗಳಿದ್ದು ಇವರಲ್ಲಿ ರಾಷ್ಟ್ರೀಯ ಸುರಕ್ಷಾ ಗಾರ್ಡ್‌ಗಳ ಕಮಾಂಡೋಗಳು ಇರುತ್ತಾರೆ. ವೈ ಪ್ಲಸ್‌ನಲ್ಲಿ ಹನ್ನೊಂದು ಸಿಬ್ಬಂದಿಗಳಿದ್ದು, ಓರ್ವ ಸಿಆರ್‌ಪಿಎಫ್ ಕಮಾಂಡರ್ ಮತ್ತು ನಾಲ್ವರು ಕಾನ್ಸ್‌ಟೇಬಲ್‌ಗಳು ನಿವಾಸಕ್ಕೆ ರಕ್ಷಣೆ ಮತ್ತು ಆರು ಭದ್ರತಾ ಅಧಿಕಾರಿಗಳು ಮೂರು ಶಿಫ್ಟ್‌ನಲ್ಲಿ ವಿಐಪಿಗೆ ಭದ್ರತೆ ನೀಡುತ್ತಾರೆ. ವೈ ವರ್ಗದಲ್ಲಿ ಎಂಟು ಸಿಬ್ಬಂದಿಗಳಿದ್ದು ಓರ್ವ ಕಮಾಂಡರ್ ಮತ್ತು ನಾಲ್ವರು ಕಾನ್ಸ್‌ಟೇಬಲ್‌ಗಳು ವಿಐಪಿ ನಿವಾಸಕ್ಕೆ ಮತ್ತು ಮೂವರು ಸಿಬ್ಬಂದಿ ಮೂರು ಶಿಫ್ಟ್‌ನಲ್ಲಿ ರಕ್ಷಣೆ ನೀಡುತ್ತಾರೆ. ಎಕ್ಸ್ ವರ್ಗದಲ್ಲಿ ಮೂರು ಪಿಎಸ್‌ಐಗಳು ಮೂರು ಶಿಫ್ಟ್‌ನಲ್ಲಿ ವಿಐಪಿಗೆ ಭದ್ರತೆ ನೀಡುತ್ತಾರೆ.

ವಿಐಪಿ ಎನ್ನುವವರಿಗೆ ರಕ್ಷಣೆ ನೀಡಬೇಕೇ?

ಪ್ರಸ್ತುತ ವಿಐಪಿಗಳಿಗೆ ನೀಡುತ್ತಿರುವ ಭದ್ರತೆ ಕೇವಲ ಪ್ರತಿಷ್ಠೆಯ ಸಂಕೇತವಾಗಿದೆ. ವಿಐಪಿಗಳು ದೇಶದ ಕಾನೂನಿಗೆ ಅತೀತರಲ್ಲ. ತಮ್ಮ ಪ್ರತಿಷ್ಠೆಗಾಗಿ ಜನಸಾಮಾನ್ಯರಿಗೆ ಸಮಸ್ಯೆ, ತೊಂದರೆ ಸೃಷ್ಟಿಸುವ ಯಾವ ಹಕ್ಕೂ ಇವರಿಗಿಲ್ಲ. ಆದ್ದರಿಂದ ಈ ರೀತಿಯ ಭದ್ರತೆ ಕೋರುವವರಿಗೆ ಭದ್ರತಾ ವೆಚ್ಚ ಅವರೇ ನೀಡಬೇಕೆಂದು ನಿಯಮ ರೂಪಿಸುವುದು ಸೂಕ್ತವಾಗಿದೆ.

ಎಸ್‌ಪಿಜಿ ಭದ್ರತೆ ಹಿಂದೆಗೆದ ಸರಕಾರ

1984ರಲ್ಲಿ ಭಯೋತ್ಪಾದನೆ ವಿರುದ್ಧ ಅಸ್ತಿತ್ವಕ್ಕೆ ಬಂದ ಬ್ಲ್ಯಾಕ್‌ಕ್ಯಾಟ್ ಕಮಾಂಡೋ ಘಟಕಗಳನ್ನು, ಆನಂತರ ವಿವಿಐಪಿಗಳ ಭದ್ರತೆಗೆ ನಿಯೋಜಿಸಲಾಯಿತು. ವಾಸ್ತವವಾಗಿ ಎಸ್‌ಪಿಜಿ ಸನದಿನಲ್ಲಿರುವಂತೆ (ಚಾರ್ಟರ್) ವಿಶೇಷವಾಗಿ ಸಜ್ಜುಗೊಳಿಸಿದ ಮತ್ತು ವಿಶೇಷ ಪರಿಸ್ಥಿತಿಯನ್ನು ಎದುರಿಸುವ ತರಬೇತಿ ಪಡೆದ ಈ ಕಮಾಂಡೋಗಳು ಭೀಕರ ಭಯೋತ್ಪಾದಕ ಕೃತ್ಯಗಳ ಸಂದರ್ಭದಲ್ಲಿ ಮಾತ್ರ ಉಪಯೋಗಿಸಬೇಕು ಎನ್ನುತ್ತದೆ. ಈ ಹಿನ್ನೆಲೆಯಲ್ಲಿ 2020, ಜನವರಿಯಲ್ಲಿ ಕೇಂದ್ರ ಸರಕಾರವು ಒಂದು ಮಹತ್ವದ ನೀತಿ ಸಂಬಂಧಿ ನಿರ್ಣಯದಲ್ಲಿ ವಿಐಪಿಗಳಿಗೆ ನೀಡುವ ಎಸ್‌ಪಿಜಿ ರಕ್ಷಣೆ ಹಿಂತೆಗೆದುಕೊಂಡಿತು. ಈ ನಿರ್ಣಯದಂತೆ ಗಾಂಧಿ ಪರಿವಾರಕ್ಕೆ ನೀಡಿದ್ದ ಎಸ್‌ಪಿಜಿ ರಕ್ಷಾ ಕವಚ ಹಿಂತೆಗೆಯಲಾಯಿತು. ಇದೇ ರೀತಿ ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್, ಯೋಗಿ ಆದಿತ್ಯ ನಾಥರಿಗೆ ನೀಡಿದ್ದ ಬ್ಲ್ಯಾಕ್‌ಕ್ಯಾಟ್‌ಗಳ ರಕ್ಷಣೆ ಹಿಂತೆಗೆದು ಪ್ಯಾರಾ ಮಿಲಿಟರಿ ಪಡೆಗಳಿಗೆ ವರ್ಗಾಯಿಸಲಾಯಿತು. ಮಾಜಿ ಮುಖ್ಯಮಂತ್ರಿಗಳಾದ ಮಾಯಾವತಿ, ಮುಲಾಯಂ ಸಿಂಗ್ ಯಾದವ್, ಚಂದ್ರಬಾಬು ನಾಯ್ಡು, ಪ್ರಕಾಶ್ ಸಿಂಗ್ ಬಾದಲ್, ಫರೂಕ್ ಅಬ್ದುಲ್ಲಾ ಹಾಗೂ ಅಸ್ಸಾಂನ ಸೋನಾವಾಲಾ, ಹಿಮಂತ್ ಶರ್ಮ ಹಾಗೂ ಆದ್ವಾನಿಯವರಿಗೆ ನೀಡಿದ್ದ ಬ್ಲ್ಯಾಕ್‌ಕ್ಯಾಟ್ ಸುರಕ್ಷೆ ಹಿಂತೆಗೆಯಲಾಯಿತು. ಗೃಹ ಸಚಿವಾಲಯವು ಈ ವಿಚಾರಕ್ಕೆ ಸಂಬಂಧಿಸಿದಂತೆ ಎನ್‌ಎಸ್‌ಜಿಗಳು ಇನ್ನು ಮುಂದೆ ತಮ್ಮ ಮೂಲ ಕಾರ್ಯವಾದ ಭಯೋತ್ಪಾದನೆ ನಿಗ್ರಹಿಸುವತ್ತ ಗಮನ ಕೇಂದ್ರೀಕರಿಸಲಿದೆ ಎಂದು ಪ್ರಕಟಿಸಿತು. ಈ ನಿರ್ಣಯದಿಂದ ಸುಮಾರು 450 ಕಮಾಂಡೋಗಳು ತಮ್ಮ ಬ್ಯಾರಕ್‌ಗಳಿಗೆ ಮರಳಿದ್ದಾರೆ.

ಪ್ರಸ್ತುತ ಸಿಆರ್‌ಪಿಎಫ್ ಸಿಬ್ಬಂದಿಗಳು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಮತ್ತವರ ಪತ್ನಿ, ಸೋನಿಯಾ ಗಾಂಧಿ ಪರಿವಾರ ಹಾಗೂ ಲೋಕಸಭಾಧ್ಯಕ್ಷ ಓಂ ಬಿರ್ಲಾರಿಗೆ ರಕ್ಷಣೆ ನೀಡುತ್ತಿದ್ದಾರೆ. ಸಿಐಎಸ್‌ಎಫ್ ಪಡೆಗಳು ರಾಷ್ಟ್ರೀಯ ಸುರಕ್ಷಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ಧೋವಲ್ ಹಾಗೂ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತರಿಗೆ ರಕ್ಷಣೆ ನೀಡುತ್ತಿವೆ. ಈ ಹಿಂದೆ ಮೋದಿಯವರ ಎರಡನೇ ಅವಧಿಯಲ್ಲಿ ಒಂದು ಪ್ರಮುಖ ಭದ್ರತಾ ಸಿಬ್ಬಂದಿ ನಿರ್ಧಾರದಲ್ಲಿ 2019ರ ಜುಲೈನಲ್ಲಿ ಸರಕಾರವು ಸುಮಾರು 350 ರಾಜಕಾರಣಿಗಳು ಹಾಗೂ ಇನ್ನಿತರ ಪ್ರಮುಖರಿಗೆ ನೀಡಿದ್ದ 1300 ಕಮಾಂಡೋಗಳನ್ನು ರಕ್ಷಣೆಯಿಂದ ಹಿಂದಕ್ಕೆ ಕರೆಸಿ, ಅವರನ್ನು ಮೂಲ ಬ್ಯಾರಕ್‌ಗೆ ಕಳಿಸಲಾಯಿತು. ಕೇಂದ್ರ ಸರಕಾರದಂತೆ ಕಳೆದ ವರ್ಷ ಪಂಜಾಬ್ ಸರಕಾರವು ಈ ವಿಷಯದಲ್ಲಿ ಒಂದು ಉತ್ತಮ ನಿರ್ಣಯ ಕೈಗೊಂಡಿತು. ಪಂಜಾಬ್ ಸರಕಾರವು ರಾಜ್ಯದ 429 ವಿಐಪಿಗಳಿಗೆ ನೀಡಿದ್ದ ಭದ್ರತೆಯನ್ನು ಹಿಂತೆಗೆದುಕೊಂಡಿತು. ಈ ನಿರ್ಣಯಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದು ಯಥಾಸ್ಥಿತಿ ಮುಂದುವರಿದಿದೆ. ವಿಐಪಿ ಎಂದು ಕರೆಸಿಕೊಳ್ಳುವವರ ಅನಿಷ್ಟ ಅಭಿರುಚಿಗಳನ್ನು ಕೊನೆಗಾಣಿಸಬೇಕಿದೆ. ಈ ಉದ್ದೇಶಕ್ಕಾಗಿ ಸರಕಾರ, ನ್ಯಾಯಾಲಯಗಳು ಹಾಗೂ ದೇಶದ ಜನತೆ ವಿಐಪಿ ಸಂಸ್ಕೃತಿ ವಿರೋಧಿ ಜನಾಭಿಪ್ರಾಯ ರೂಪಿಸಬೇಕಾಗಿದೆ.

ನಮ್ಮ ದೇಶದಲ್ಲಿ ವೈಯಕ್ತಿಕ ಸ್ವಾರ್ಥ, ಮಹತ್ವಾಕಾಂಕ್ಷೆ, ದುರಾಸೆ, ಅಧಿಕಾರದಾಹವಿರುವ ಪ್ರಬುದ್ಧರು, ಬುದ್ಧಿಜೀವಿಗಳು, ವಿದ್ವಾಂಸರೆನಿಸಿದವರು, ರಾಜಕಾರಣಿಗಳು ಇದ್ದಾರೆ. ಇವರು ದೇಶದ ಹಿತಾಸಕ್ತಿಯನ್ನು ಬಲಿಕೊಡಲು ಹಿಂಜರಿಯುವುದಿಲ್ಲ. ಇವರೆಲ್ಲ ಶತ್ರುಗಳಿಗೆ ಬೇಕಾದವರಾಗಿದ್ದಾರೆ. ಸಮಾಜಘಾತುಕ, ದೇಶದ್ರೋಹಿ ಶಕ್ತಿಗಳು ಇವರೊಂದಿಗಿದ್ದಾರೆ. ಇವರಿಗೆ ಪ್ರಾಣಾಪಾಯವಿದೆ ಎಂದರೆ ಕೇವಲ ಎನ್‌ಎಸ್‌ಜಿ ಪಡೆವ ಶೋಕಿಗಾಗಿ ಮಾತ್ರ ಆದ್ದರಿಂದ ಸರಕಾರಗಳು ವಿಐಪಿಗಳಿಗೆ ರಕ್ಷಣೆ ನೀಡುವುದನ್ನು ನಿಲ್ಲಿಸಬೇಕಾಗಿದೆ.

ಅಕ್ಟೋಬರ್‌ಗೆ ಮೈಸೂರು ಪಾಲಿಕೆ ಸದಸ್ಯರ ಅಧಿಕಾರ ಅವಧಿ ಅಂತ್ಯ

ನಾಲ್ವರು ಮಹಿಳೆಯರು, ಓರ್ವ ಪುರುಷ ಮೇಯರ್ ಅಧಿಕಾರ ನಿರ್ವಹಣೆ, ಉಪ ಮೇಯರ್ ಅನ್ವರ್ ಬೇಗ್ ಅವರಿಗೆ 3 ತಿಂಗಳ ಪ್ರಭಾರ ಮೇಯರ್ ಅವಕಾಶ





ಪುಷ್ಪಲತಾ ಜಗನ್ನಾಥ್



ತಸ್ನೀಂ



ರುಕ್ಮಿಣಿ ಮಾದೇಗೌಡ



ಸುನಂದಾ ಪಾಲನೇತ್ರ



ಶಿವಕುಮಾರ್

■ ಎಸ್.ಟಿ.ರವಿಕುಮಾರ್

ಮೈಸೂರು, ಮೇ 19–ಮೈಸೂರು ಮಹಾನಗರ ಪಾಲಿಕೆಯ 65 ಕಾರ್ಪೊರೇಟರ್‌ಗಳ 5 ವರ್ಷದ ಅಧಿಕಾರಾವಧಿ 2023ರ ಅಕ್ಟೋಬರ್‌ನಲ್ಲಿ ಅಂತ್ಯಗೊಳ್ಳಲಿದೆ. 2018ರ ಆಗಸ್ಟ್ 31ರಂದು ಮೈಸೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆದು ಸೆಪ್ಟೆಂಬರ್ 3ರಂದು ಮತ ಎಣಿಕೆ ನಡೆದಿತ್ತು. ಆಯ್ಕೆಯಾಗಿದ್ದ ಕಾರ್ಪೊರೇಟರ್‌ಗಳು 2018ರ ಅಕ್ಟೋಬರ್ 5ರಂದು ಪ್ರಮಾಣ ವಚನ ಸ್ವೀಕರಿಸಿ, ತಮ್ಮ ವಾರ್ಡ್‌ಗಳಲ್ಲಿ ಸೇವೆ ಆರಂಭಿಸಿದ್ದರು. ನಂತರ 2018ರ ನವೆಂಬರ್ 17ರಂದು ನಡೆದ ಚುನಾವಣೆಯಲ್ಲಿ ಈ ಅವಧಿಯ ಮೊದಲ ಮಹಾಪೌರರಾಗಿ ಸಾಮಾನ್ಯ ಮಹಿಳಾ ವರ್ಗದಿಂದ ಶ್ರೀಮತಿ ಪುಷ್ಪಲತಾ ಜಗನ್ನಾಥ್ ಆಯ್ಕೆಯಾಗಿದ್ದರು.

2018ರ ನವೆಂಬರ್ 17ರಿಂದ 2020ರ ಜನವರಿ 18ರವರೆಗೆ ಪುಷ್ಪಲತಾ ಜಗನ್ನಾಥ್ ಅವರು ಮೈಸೂರು ಮೇಯರ್ ಆಗಿ ಕಾರ್ಯ ನಿರ್ವಹಿಸಿದರೆ, ಆ ಅವಧಿಯಲ್ಲಿ ಶಫಿ ಅಹಮದ್ ಉಪ ಮಹಾಪೌರರಾಗಿದ್ದರು. ಎರಡನೇ ವರ್ಷ ಬಿಸಿಎ ಮಹಿಳಾ ಮೀಸಲಾತಿಯಡಿ 2020ರ ಜನವರಿ 18ರಂದು ತಸ್ನೀಂ ಪ್ರಥಮ ಪ್ರಜೆಯಾಗಿ, ಸಿ.ಶ್ರೀಧರ್ ಉಪ ಮೇಯರ್ ಆಗಿ ಆಯ್ಕೆಯಾಗಿ 2021ರ ಫೆಬ್ರವರಿ 24ರವರೆಗೆ ಅಧಿಕಾರದಲ್ಲಿದ್ದರು.

ಮೂರನೇ ವರ್ಷ ಸಾಮಾನ್ಯ ಮಹಿಳಾ ವರ್ಗದಡಿ ರುಕ್ಮಿಣಿ ಮಾದೇಗೌಡ 2021ರ ಫೆಬ್ರವರಿ 24ರಂದು ಮೇಯರ್ ಆಗಿ ಆಯ್ಕೆಯಾದರಾದರೂ, ಪಾಲಿಕೆ ಚುನಾವಣೆ ವೇಳೆ ಸಲ್ಲಿಸಿದ್ದ ದಾಖಲೆಗಳು ಅಸಿಂಧುವಾದ ಹಿನ್ನೆಲೆಯಲ್ಲಿ ರಾಜ್ಯ ಹೈಕೋರ್ಟ್ ಅವರ ಆಯ್ಕೆಯನ್ನು ರದ್ದುಪಡಿಸಿದಾಗ ರುಕ್ಮಿಣಿ ಮಾದೇಗೌಡ ಅವರ ಮೇಯರ್ ಅಧಿಕಾರ ಅವಧಿ 2021ರ ಮೇ 26ಕ್ಕೆ ಅಂತ್ಯಗೊಂಡಿತು. ಆದರೆ, ಈ ಅವಧಿಯಲ್ಲಿ 2021ರ ಫೆಬ್ರವರಿ 24ರಿಂದ 2022ರ ಸೆಪ್ಟೆಂಬರ್ 6ರವರೆಗೂ ಅನ್ವರ್ ಬೇಗ್ ಉಪ ಮೇಯರ್ ಆಗಿದ್ದರಲ್ಲದೆ, ರುಕ್ಮಿಣಿ ಮಾದೇಗೌಡರ ಆಯ್ಕೆ ಅನೂರ್ಜಿತಗೊಂಡಿದ್ದರಿಂದ ತೆರವಾಗಿದ್ದ ಮೇಯರ್ ಸ್ಥಾನದಲ್ಲಿ ಪ್ರಭಾರಿ ಮೇಯರ್ ಆಗಿ ಅನ್ವರ್ ಬೇಗ್ 2021ರ ಮೇ 26ರಿಂದ ಆಗಸ್ಟ್ 25ರವರೆಗೆ ಮೂರು ತಿಂಗಳ ಕಾಲ ಜವಾಬ್ದಾರಿ ನಿಭಾಯಿಸಿದ್ದರು. ತದ ನಂತರ ಸಾಮಾನ್ಯ ಮಹಿಳಾ ಮೀಸಲಾತಿಯಡಿ ಸುನಂದಾ ಪಾಲನೇತ್ರ ಅವರು 2021ರ ಆಗಸ್ಟ್ 25ರಿಂದ 2022ರ ಸೆಪ್ಟೆಂಬರ್ 6ರವರೆಗೆ ಮಹಾಪೌರರಾಗಿದ್ದರು. 2022ರ ಸೆಪ್ಟೆಂಬರ್ 6ರಂದು ನಡೆದ ಮೇಯರ್ ಚುನಾವಣೆಯಲ್ಲಿ ಸಾಮಾನ್ಯ ವರ್ಗದಡಿ ಶಿವಕುಮಾರ್ ಮೇಯರ್ ಹಾಗೂ ಡಾ. ಜಿ.ರೂಪಾ ಉಪ ಮೇಯರ್ ಆಗಿ ಆಯ್ಕೆಯಾಗಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ಈ ಐದು ವರ್ಷಗಳ ಅವಧಿಯಲ್ಲಿ ನಾಲ್ವರು ಮಹಿಳಾ ಕಾರ್ಪೊರೇಟರ್‌ಗಳಿಗೆ ಮೇಯರ್‌ಗಾದಿ ಲಭಿಸಿದರೆ, ಕಡೇ 5ನೇ ವರ್ಷ ಶಿವಕುಮಾರ್‌ಗೆ ಈ ಹುದ್ದೆ ಲಭಿಸಿದೆ. ಪ್ರಸಕ್ತ ಸಾಲಿನ ಮೇಯರ್, ಉಪ ಮೇಯರ್ ಅಧಿಕಾರಾವಧಿ 2023ರ ಸೆಪ್ಟೆಂಬರ್ 6ಕ್ಕೆ ಅಂತ್ಯಗೊಳ್ಳುತ್ತದೆಯಾದರೂ, ಪಾಲಿಕೆ ಆಡಳಿತದ ಅಧಿಕಾರ 2023ರ ಅಕ್ಟೋಬರ್ 5ರವರೆಗೂ ಇರುವುದರಿಂದ ಕಡೇ 70 ದಿನಗಳವರೆಗೆ (3 ತಿಂಗಳೊಳಗಿರುವ ಕಾರಣ) ಶಿವಕುಮಾರ್ ಹಾಗೂ ಡಾ. ಜಿ.ರೂಪಾ ಅವರೇ ಅಧಿಕಾರದಲ್ಲಿ ಮುಂದುವರೆಯುವ ಸಾಧ್ಯತೆ ಇದೆ ಎಂದು ಪೌರಾಡಳಿತ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಒಂದು ವೇಳೆ ಅಧಿಕಾರದಲ್ಲಿ ಮುಂದುವರೆಯಬಹುದೆಂದಾದರೆ, ಶಿವಕುಮಾರ್ ಅವರಿಗೆ 2ನೇ ಬಾರಿ ದಸರಾ ಮಹೋತ್ಸವದಲ್ಲಿ ಚಿನ್ನದ ಅಂಬಾರಿಯಲ್ಲಿ ಆಸೀನಳಾದ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಹಾಗೂ ಕುದುರೆ ಸವಾರಿ ಮಾಡುವ ಯೋಗ ಲಭಿಸಿದಂತಾಗುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com











WANTED

Graduates / Undergraduates

Trainers / Teachers

with good English.

Salary: 10K to 15K

8553855535, 9241217283

ನಾವು ಸಾಂಸ್ಕೃತಿಕ ಕೇಂದ್ರವನ್ನು ನಿರ್ಮಿಸಲು 10,000 ರಿಂದ 20,000 ಚದರ ಅಡಿ ಸೈಟ್/ ಭೂಮಿಯನ್ನು ಹುಡುಕುತ್ತಿದ್ದೇವೆ/ ವಿಜಯನಗರ ಹಂತ 1 & 2, ಬೋಗಾದಿ ರಸ್ತೆ ಅಥವಾ ಯಾವುದೇ ಕೇಂದ್ರ ಪ್ರದೇಶಗಳಿಗೆ ಆದ್ಯತೆ

ಇದಕ್ಕೆ ವ್ಯಾಟ್ಸ್‌ಆಪ್ ಮೂಲಕ ಉತ್ತರಿಸಿ

9448457323

krr22@konarengineering.com



ಪಟ್ಟಣ ಪಂಚಾಯಿತಿ ಕಾರ್ಯಾಲಯ, ಶ್ರೀರಾಂಪುರ

ಮೈಸೂರು ಜಿಲ್ಲೆ – 570 008

ದೂರವಾಣಿ ಸಂಖ್ಯೆ: 0821–2330109

ಇ–ಮೇಲ್: itstaff_ulb_srirampur@yahoo.com ದಿನಾಂಕ: 19–5–2023

ಪ್ರಕಟಣೆ

ಕರ್ನಾಟಕ ಮುನ್ಸಿಪಲ್ ಅಧಿನಿಯಮ 1964ರ ಕಾಯಿದೆ ಅನ್ವಯ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಗುರೂರು ಗ್ರಾಮದ ಸರ್ವೆ ನಂ. 92/4ರ 0.10 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಶೈಕ್ಷಣಿಕ (ಪೂರ್ವ ಪ್ರಾಥಮಿಕ, PKG, LKG, UKG) ಉದ್ದೇಶಕ್ಕೆ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಅನುಮೋದನೆ ಮಾಡುವಂತೆ ಶ್ರೀಮತಿ ಸುಷ್ಮಾಸುದರ್ಶನ್ ಕೆ.ಎಸ್. ಮತ್ತು ಶ್ರೀ ಚಂದ್ರಬೋಸ್ ತವಕ್ಕಣೆ ಇವರು ಅರ್ಜಿ ಸಲ್ಲಿಸಿರುತ್ತಾರೆ. ಈ ಶೈಕ್ಷಣಿಕ ಕಟ್ಟಡ ನಿರ್ಮಾಣದಿಂದ ಈ ಪ್ರದೇಶದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಪೂರ್ವ ಪ್ರಾಥಮಿಕ ವಿದ್ಯಾಭ್ಯಾಸದ ಸೌಲಭ್ಯಗಳು ದೊರೆಯುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಕಟ್ಟಡ ನಿರ್ಮಾಣದ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಮುಖ್ಯಾಧಿಕಾರಿ, ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಛೇರಿ, ಮೈಸೂರು–570 008 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಶ್ರೀರಾಂಪುರ, ಮೈಸೂರು



ಸೊಡರು ಮೂಲಕ ಅಜ್ಞಾನ ತೊಡೆದುಹಾಕಿ

ಬಿ.ಜಿ. ಅನಂತಶಯನ ಅವರ 'ಸೊಡರು' ಪುಸ್ತಕ ವಿಮರ್ಶೆ, ಉಚಿತ ಪುಸ್ತಕ ವಿತರಣೆ ಕಾರ್ಯಕ್ರಮದಲ್ಲಿ ಕೊಡಗು ವಿವಿ ಉಪ ಕುಲಪತಿ

ಮಡಿಕೇರಿ, ಮೇ 19– ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 4ನೇ ಅಂಗವಾಗಿರುವ ಪತ್ರಿಕಾರಂಗ ಸಮಾಜದ ಕೈಗನ್ನಡಿಯಂತೆ ಕಾರ್ಯನಿರ್ವಹಿಸುವ ದಿಟ್ಟತನವನ್ನು ಹೊಂದಿದೆ. ಪತ್ರಕರ್ತರಾದವರಿಗೆ ವಿವೇಚನಾ ಶಕ್ತಿಯ ಅಗತ್ಯವಿದೆ ಎಂದು ಕೊಡಗು ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ.ಅಶೋಕ್ ಸಂಗಪ್ಪ ಅಭಿಪ್ರಾಯಪಟ್ಟಿದ್ದಾರೆ.

ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ನಡೆದ ಶಕ್ತಿ ಪತ್ರಿಕೆಯ ಸಲಹಾ ಸಂಪಾದಕ ಬಿ.ಜಿ.ಅನಂತಶಯನ ರಚಿತ 'ಸೊಡರು' ಪುಸ್ತಕ ವಿಮರ್ಶೆ ಮತ್ತು ಉಚಿತ ಪುಸ್ತಕ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪತ್ರಕರ್ತರಿಗೆ ಭಾಷಾ ಕೌಶಲ್ಯ, ವಿಷಯದ ಆಳವಾದ ಜ್ಞಾನ, ಅಧ್ಯಯನ, ವಿಷಯವನ್ನು ವಿಶ್ಲೇಷಿಸುವ ಅರಿವು ಇರಬೇಕು, ವಿವೇಚನಾತ್ಮಕ ಶಕ್ತಿಯನ್ನು ಹೊಂದಿರಬೇಕು ಮತ್ತು ಸನ್ನಿವೇಶದ ಗಾಂಭೀರ್ಯತೆ ತಿಳಿದಿರಬೇಕು ಎಂದರು.

ವಿದ್ಯಾರ್ಥಿಗಳಿಗಾಗಿ ಪತ್ರಿಕೋದ್ಯಮದ ಬಗ್ಗೆ ಕಾರ್ಯಾಗಾರ ಮತ್ತು ಸಮಾಜದ ಅಂಕುಡೊಂಕುಗಳನ್ನು ಸರಿಪಡಿಸುವ ಕುರಿತು ಹಿರಿಯರ ಮಾರ್ಗದರ್ಶನದಲ್ಲಿ ಚಿಂತನ–ಮಂಥನ ಕಾರ್ಯಕ್ರಮ ನಡೆಸುವುದಾಗಿ ತಿಳಿಸಿದರು.

ಸೊಡರು ಎಂದರೆ ದೀಪ ಎಂದರ್ಥ, ಸೊಡರು ಎಂಬ ಜ್ಞಾನದ ಜ್ಯೋತಿಯ ಮೂಲಕ ನಮ್ಮಲ್ಲಿರುವ ಅಜ್ಞಾನವನ್ನು ತೊಡೆದು ಹಾಕಬೇಕು. ಸತ್ಯವನ್ನು ಎಂದೂ ಅಸತ್ಯ ಎಂದು ಹೇಳಲು ಸಾಧ್ಯವಿಲ್ಲ. ಜೀವನದಲ್ಲಿ ಸತ್ಯವನ್ನು ಮರೆಮಾಚುವ ಪ್ರಯತ್ನ ಮಾಡಬಾರದು. ಸತ್ಯ ಎಂಬುವುದು ಅತ್ಯಂತ ಪವಿತ್ರವಾದ ದಾರಿ ಎಂದು ಪ್ರೊ.ಅಶೋಕ್ ಸಂಗಪ್ಪ ತಿಳಿಸಿದರು.

ಶಕ್ತಿ ದಿನಪತ್ರಿಕೆಯ ಪ್ರಧಾನ ಸಂಪಾದಕ ಜಿ.ರಾಜೇಂದ್ರ ಮಾತನಾಡಿ, ಸೊಡರು ಪುಸ್ತಕ ಮಾರ್ಗದರ್ಶಿ ಕೈಪಿಡಿಯಂತಿದೆ, ನೈಜ ಅನುಭವವನ್ನು ವಿವರಿಸಲಾಗಿದೆ, ವಿದ್ಯಾರ್ಥಿಗಳು ಓದುವ ಅಗತ್ಯವಿದೆ ಎಂದರು.



ಯಾವುದೇ ಪರಿಸ್ಥಿತಿಯಲ್ಲೂ ಪತ್ರಕರ್ತರು ಎದೆಗುಂದದೆ ಮುನ್ನುಗ್ಗಿ ಕಾರ್ಯ ನಿರ್ವಹಿಸುವಂತಿರಬೇಕು. ಸತ್ಯಕ್ಕೆ ಸಮೀಪದ ವರದಿಗಳನ್ನು ಮಾಡಬೇಕು, ನೀಡುವ ಸುದ್ದಿ ಸಂಶಯಾಸ್ಪದವಾಗಿರಬಾರದು. ಪತ್ರಕರ್ತರು ಜನರು ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಸೇತುವೆಯಿದ್ದಂತೆ, ಆದ್ದರಿಂದ ಅತಿ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಶಕ್ತಿ ಪತ್ರಿಕೆಯ ಸಲಹಾ ಸಂಪಾದಕ ಹಾಗೂ ಸೊಡರು ಪುಸ್ತಕದ ಲೇಖಕ ಬಿ.ಜಿ.ಅನಂತಶಯನ ಮಾತನಾಡಿ, ಬ್ರಿಟಿಷ್ ಸಾಮ್ರಾಜ್ಯದ ದುರಾಡಳಿತವನ್ನು ಜನತೆಗೆ ಮುಟ್ಟಿಸುವ ಮೂಲಕ ಸ್ವಾತಂತ್ರ್ಯ ಪಡೆಯುವ ನಿಟ್ಟಿನಲ್ಲಿ ಅಂದು ಪತ್ರಿಕೋದ್ಯಮ ಹುಟ್ಟಿಕೊಂಡಿತು. ಆದರೆ ಸ್ವಾತಂತ್ರ್ಯಾನಂತರ ಪತ್ರಿಕೋದ್ಯಮ ತನ್ನ ಮೂಲ ಉದ್ದೇಶವನ್ನೇ ಮರೆತು ಹೋಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಉತ್ತಮ ಪತ್ರಕರ್ತರಾಗಲು ಪ್ರಯತ್ನಿಸಬೇಕು. ಪತ್ರಿಕೋದ್ಯಮ ಸವಾಲಿನ ಕೆಲಸವಾಗಿದ್ದು, ಪತ್ರಕರ್ತನಿಗೆ ಸಮಯಪಾಲನೆ ಬಹಳ ಮುಖ್ಯ. ಸೊಡರು ಪುಸ್ತಕದಲ್ಲಿ ಪತ್ರಿಕೋದ್ಯಮದ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗಿದೆ ಎಂದು ಪತ್ರಿಕೋದ್ಯಮದಲ್ಲಿ ಬರುವ ಸವಾಲುಗಳ ಕುರಿತು ಅವರು ವಿವರಿಸಿದರು.

ಕಾಲೇಜು ಪ್ರಾಂಶುಪಾಲ ಡಾ.ಮೇಜರ್ ರಾಘವ ಬಿ. ಪ್ರಾಸ್ತವಿಕವಾಗಿ ಮಾತನಾಡಿ, ಪತ್ರಕರ್ತರು ಸಾಕಷ್ಟು ಏಳು ಬೀಳುಗಳ ನಡುವೆ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಒಂದು ದೋಣಿ ಮುಂದೆ ಸಾಗಲು ನಾವಿಕ ಹೇಗೆ ಮುಖ್ಯವೋ ಅದೇ ರೀತಿ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪತ್ರಕರ್ತರು ಮುಖ್ಯ. 'ಸೊಡರು' ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕೃತಿಯಾಗಿದೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ 'ಸೊಡರು' ಪುಸ್ತಕವನ್ನು ಉಚಿತವಾಗಿ ವಿತರಿಸಲಾಯಿತು.

ಪ್ಲಾಸ್ಟಿಕ್ ಬಳಸುತ್ತಿದ್ದ ವಾಣಿಜ್ಯ ಮಳಿಗೆಗಳಿಗೆ ದಂಡ

ಮಡಿಕೇರಿ, ಮೇ 19– ಕೊಡಗು ಜಿಲ್ಲಾ ಪಂಚಾಯಿತಿಯ 5 ತಾಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪ್ಲಾಸ್ಟಿಕ್ ಬಳಕೆ ಮಾಡುತ್ತಿದ್ದ ವಾಣಿಜ್ಯ ಮಳಿಗೆಗಳಿಂದ ಪ್ಲಾಸ್ಟಿಕ್ ವಶಪಡಿಸಿ ಕೊಂಡು ಅವರಿಗೆ ದಂಡ ವಿಧಿಸಲಾಗಿದೆ. ಪ್ಲಾಸ್ಟಿಕ್ ಅನಾಹುತದ ಕುರಿತು ಮುಂದಿನ ದಿನಗಳಲ್ಲಿ ವಾಣಿಜ್ಯ ಮಳಿಗೆಗಳಲ್ಲಿ ಏಕ ಬಳಕೆಯ ಪ್ಲಾಸ್ಟಿಕ್‌ಗಳನ್ನು ಸಂಪೂರ್ಣವಾಗಿ ನಿಷೇಧ ಮಾಡಿ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವಂತೆ ಗ್ರಾಹಕರಿಗೆ ಈ ಕುರಿತು ಜಾಗೃತಿ ಮೂಡಿಸಲಾಯಿತು. ಪ್ಲಾಸ್ಟಿಕ್ ಬಳಕೆಯನ್ನು ಮಾಡಿದ್ದಲ್ಲಿ ದಂಡದ ಮೊತ್ತ ದುಪ್ಪಟ್ಟು ಆಗುವ ಬಗ್ಗೆ ತಿಳಿಸಿ, ಈ ಬಗ್ಗೆ ಗ್ರಾಮ ಪಂಚಾಯಿತಿಗಳಲ್ಲಿ ವ್ಯಾಪಕ ಜಾಗೃತಿ ನೀಡಲು ಕ್ರಮವಹಿಸಲಾಗಿದೆ ಎಂದು ಸ್ವಚ್ಛ ಭಾರತ ಅಭಿಯಾನದ ಜಿಲ್ಲಾ ನೋಡಲ್ ಅಧಿಕಾರಿ ಜಗದೀಶ್ ಅವರು ತಿಳಿಸಿದ್ದಾರೆ.



ಮಳೆಗೆ ಉರುಳಿ ಬಿದ್ದಿದ್ದ ವಿದ್ಯುತ್ ಕಂಬಗಳು, ಕತ್ತಲೆಯಲ್ಲಿ ಮುಳುಗಿದ್ದ ಮೈತಾಡಿ ಗ್ರಾಮ

ವಿರಾಜಪೇಟೆ ಸೆಸ್ಕಾಂ ಅಧಿಕಾರಿಗಳಿಗೆ ಗ್ರಾಮಸ್ಥರ ದೂರು



ವಿರಾಜಪೇಟೆ, ಮೇ 19– ಕಳೆದ ವಾರ ಭಾರಿ ಮಳೆ ಮತ್ತು ಬಿರುಗಾಳಿಯಿಂದಾಗಿ ವಿರಾಜಪೇಟೆ ಸಮೀಪದ ಮೈತಾಡಿ ಗ್ರಾಮದಲ್ಲಿ ವಿದ್ಯುತ್ ಕಂಬಗಳು ಮುರಿದು ಬಿದ್ದ ಕಾರಣದಿಂದ ಗ್ರಾಮದಲ್ಲಿ ಕಳೆದ ಒಂದು ವಾರದಿಂದ ಕತ್ತಲು ಆವರಿಸಿತ್ತು.

ಅಧಿಕಾರಿಗಳಿಗೆ ದೂರು ನೀಡಿದ ಬಳಿಕ ಗುರುವಾರ ಸಂಜೆ ವಿದ್ಯುತ್ ಬೆಳಕು ನೋಡುವಂತಾಗಿದೆ ಎಂದು ಮೈತಾಡಿ ಗ್ರಾಮದ ಚಪ್ಪಂಡ ಹರೀಶ್ ತಿಳಿಸಿದ್ದಾರೆ.

ಮೈತಾಡಿ ಗ್ರಾಮ ಸೇರಿದಂತೆ ಸುತ್ತು ಮುತ್ತಲಿನ ಅನೇಕ ಗ್ರಾಮಗಳಿಗೆ ಎಂಟು ದಿನಗಳು ವಿದ್ಯುತ್ ಸಮಸ್ಯೆ ಉಂಟಾಗಿದ್ದರಿಂದ ವಿರಾಜಪೇಟೆ ವಿಭಾಗದ ಸೆಸ್ಕಾಂ ಕಚೇರಿಯಲ್ಲಿ ಅಧಿಕಾರಿ ಗಳೊಂದಿಗೆ ಗ್ರಾಮಸ್ಥರು ಚರ್ಚೆ ನಡೆಸಿದ ಸಂದರ್ಭದಲ್ಲಿ ಈ ಅವಾಂತರಗಳನ್ನು ವಿವರಿಸಲಾಯಿತು.

ನಂತರ ಮಾತನಾಡಿದ ಚಪ್ಪಂಡ ಹರೀಶ್, ಕೊಡಗಿನಲ್ಲಿ ಹೆಚ್ಚು ಮಳೆ ಬೀಳುವ ಕಾರಣದಿಂದ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸಮಸ್ಯೆಯಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು. ಮಳೆಗಾಲದಲ್ಲಿ ಮರಗಳು ವಿದ್ಯುತ್ ಕಂಬದ ಮೇಲೆ ಉರುಳಿ ಬಿದ್ದಿವೆ. ಸೆಸ್ಕಾಂ ಹೆಚ್ಚುವರಿ ಸಿಬ್ಬಂದಿ ನೇಮಿಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಗ್ರಾಮದ ಹಿರಿಯರಾದ ಪಿ.ಜಿ.ಅಯ್ಯಪ್ಪ ಮಾತನಾಡಿ, ಮೈತಾಡಿ ಗ್ರಾಮದಲ್ಲಿ ವಿದ್ಯುತ್ ಕಂಬಗಳು ಸಾಲಾಗಿದೆ ಮುರಿದು ಬಿದ್ದಿವೆ. ಇದರಿಂದ ವಿದುತ್ ಇಲ್ಲದೇ ಸಮಸ್ಯೆಯಾಗಿತ್ತು. ಈ ಬಗ್ಗೆ ಕೇಳಿದರೆ ಅಧಿಕಾರಿಗಳು ಸೂಕ್ತ ಉತ್ತರ ನೀಡುತ್ತಲೇ ಇರಲಿಲ್ಲ ಎಂದು ದೂರಿದರು.

ಮೈಸೂರಿನ ಮುಖ್ಯ ಕಚೇರಿಯಿಂದ ಮಳೆಗಾಲದಲ್ಲಿ ಕೊಡಗಿಗೆ ಹೆಚ್ಚು ಲೈನ್‌ಮೆನ್‌ಗಳು, ಸಿಬ್ಬಂದಿಗಳು ಹಾಗೂ ಕಾರ್ಮಿಕರನ್ನು ಕೆಲಸಕ್ಕೆ ನೇಮಕ ಮಾಡಿಕೊಂಡು ಗ್ರಾಮಗಳಿಗೆ ವಿದ್ಯುತ್ ಸಮಸ್ಯೆಯಾಗದಂತೆ ನೋಡಿಕೊಳ್ಳುವಂತಾಗಬೇಕು ಎಂದರು. ಮೊನ್ನೆ ಸಣ್ಣ ಮಳೆ ಬಂದಾಗಲೇ ಒಂದು ವಾರ ವಿದ್ಯುತ್ ಇಲ್ಲದೆ ಗ್ರಾಮವೇ ಕಗ್ಗತ್ತಲೆಯಲ್ಲಿತ್ತು ಇನ್ನು ಮುಂದೆ ಈ ರೀತಿ ಆಗದಂತೆ ಅಧಿಕಾರಿಗಳು ಎಚ್ಚರವಹಿಸಬೇಕು ಎಂದರು.

ವಿರಾಜಪೇಟೆ ಸೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರ ಸುರೇಶ್ ಮಾತನಾಡಿ ಕಳೆದವಾರ ಮಳೆ–ಬಿರುಗಾಳಿಗೆ ವಿರಾಜಪೇಟೆ ವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿ 50ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಉರುಳಿಬಿದ್ದಿವೆ. ಇದರಿಂದ ವಿದ್ಯುತ್ ಇಲ್ಲದೇ ಸಮಸ್ಯೆಯಾಯಿತು. ಕಾರ್ಮಿಕರ ಕೊರತೆಯಿಂದ ಇದನ್ನು ಸರಿಪಡಿಸಲು ವಿಳಂಬವಾಯಿತು. ಕೆಲವರು ದಿನಗೂಲಿ ಕೇಳುತ್ತಾರೆ, ಇಲಾಖೆಯಿಂದ ತಿಂಗಳಿಗೊಮ್ಮೆ ಸಂಬಳ ಇರುವುದರಿಂದ ತೊಂದರೆಯಾಗಿದೆ ಎಂದರು. ಮೈತಾಡಿ ಗ್ರಾಮಸ್ಥರಾದ ಅಯ್ಯಮಂಡ ವೇಣು, ಕಾವೇರಪ್ಪ, ಕೆ.ಮಂಜು, ಎ. ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು.

ಮಂಡ್ಯ: ರಾಮಚಂದ್ರ ನೇತೃತ್ವದಲ್ಲಿ ದೇವೇಗೌಡರ ಹುಟ್ಟುಹಬ್ಬ ಆಚರಣೆ



ಮಂಡ್ಯ, ಮೇ 19– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಮಿಮ್ಸ್ ಒಳ ರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಹುಟ್ಟುಹಬ್ಬವನ್ನು ಅರ್ಥ ಪೂರ್ಣವಾಗಿ ಆಚರಿಸಲಾಗಿದೆ ಎಂದು ಮನಮುಲ್ ಮಾಜಿ ಅಧ್ಯಕ್ಷ ರಾಮಚಂದ್ರ ತಿಳಿಸಿದರು.

ಇಲ್ಲಿನ ವಿದ್ಯಾನಗರದಲ್ಲಿರುವ ಶ್ರೀವಿದ್ಯಾ ಗಣಪತಿ ದೇವಾಲಯದಲ್ಲಿ ಜಿಲ್ಲಾ ಜೆಡಿಎಸ್ ಘಟಕ ಆಯೋಜಿಸಿದ್ದ ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರ ಜನ್ಮ ದಿನಾಚರಣೆ ಪ್ರಯುಕ್ತ ದೀರ್ಘಾಯುಷ್ಯವೃದ್ದಿಗಾಗಿ ವಿಶೇಷ ಪೂಜೆ ಮತ್ತು ಹಣ್ಣು ಹಂಪಲು ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ಜೆಡಿಎಸ್ ವರಿಷ್ಠರ ನಾಯಕತ್ವ ಮತ್ತು ಮಾರ್ಗ ದರ್ಶನದಲ್ಲಿ ರಾಜ್ಯ ಮತ್ತು ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷವನ್ನು ಸಂಘಟಿಸಿ, ರಾಜ್ಯದಲ್ಲಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಸಂಕಲ್ಪ ಮಾಡೋಣ. ಕಾರ್ಯತತ್ಪರತೆ ಮೆರೆಯೋಣ ಎಂದರು.

ರಾಜೀನಾಮೆ ಅಂಗೀಕಾರ: ಮನ್‌ಮುಲ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೆ. ಇಂದು ಅಂಗೀಕಾರವಾಗಿದೆ. ಪಕ್ಷ ಸಂಘಟನೆ ಹಿತದೃಷ್ಟಿಯಿಂದ ಈ ಕಾರ್ಯ ಮಾಡಲಾಗಿದೆ. ನಮ್ಮ ದೃಢ ನಿರ್ಧಾರ ಮುಂದಿನ ದಿನಗಳಲ್ಲಿ ಜೆಡಿಎಸ್ ಪಕ್ಷವನ್ನು ಸಂಘಟಿಸಿ ಅಧಿಕಾರಕ್ಕೆ ತರುವುದಾಗಿದೆ. ಎಲ್ಲರ ಸಹಕಾರ ಮತ್ತು ಬೆಂಬಲ ಕೊರುತ್ತೇವೆ ಎಂದರು.

ಇದೇ ಸಂದರ್ಭ ದೊಡ್ಡಾಸ್ಪತ್ರೆಯ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಒಳ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸಿದರು. ವಿವಿಧ ಅನಾಥ ಆಶ್ರಮಗಳ ವಾಸಿಗಳಿಗೆ ಸೇವಾ ಕಾರ್ಯ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ನಗರಸಭಾ ಸದಸ್ಯರಾದ ರಜಿನಿ, ನಾಗೇಶ್ ಮಾಜಿ ಸದಸ್ಯ ಬೋರೇಗೌಡ, ಜೆಡಿಎಸ್ ಎಸ್ಸಿ ಘಟಕ ಅಧ್ಯಕ್ಷ ಜಯರಾಮ್, ಮುಖಂಡರಾದ ನವೀನ್ ಮತ್ತಿತರರಿದ್ದರು.

ಕೆ.ಆರ್.ಪೇಟೆ ಅಭಿವೃದ್ಧಿಗೆ ಶಾಸಕರಿಗೆ ಸಹಕಾರ ನೀಡಲು ಸಿದ್ಧ: ಕೆಸಿಎನ್

ಕೆ.ಆರ್.ಪೇಟೆ, ಮೇ 19– ನನ್ನ ಅವಧಿಯಲ್ಲಿ ಕೆ.ಆರ್.ಪೇಟೆ ಕ್ಷೇತ್ರಕ್ಕೆ ಹಲವು ಅಭಿವೃದ್ಧಿ ಯೋಜನೆಗಳನ್ನು ತಂದಿದ್ದು, ನೂತನ ಸರ್ಕಾರದ ಮೇಲೆ ಒತ್ತಡ ಹೇರಿ ಅವುಗಳನ್ನು ಪೂರ್ಣಗೊಳಿಸಲು ಕ್ಷೇತ್ರದ ನೂತನ ಶಾಸಕರಿಗೆ ಸಹಕಾರ ನೀಡಲು ನಾನು ಸಿದ್ಧನಿದ್ದೇನೆ ಎಂದು ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ತಿಳಿಸಿದರು.

ಶುಕ್ರವಾರ ಪಟ್ಟಣದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಆತ್ಮಾವಲೋಕನಾ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಆದ ಸೋಲಿಗೆ ನಾನು ಹೆದರಿ ಕೆ.ಆರ್.ಪೇಟೆ ಕ್ಷೇತ್ರ ಬಿಟ್ಟು ಎಲ್ಲಿಯೂ ಓಡಿ ಹೋಗುವವನಲ್ಲ. ಜನರ ತೀರ್ಪಿಗೆ ನಾನು ಬದ್ಧನಾಗಿದ್ದೇನೆ. ನನ್ನ ಅಳಿವು ಉಳಿವು ಏನಿದ್ದರೂ ನನ್ನ ಜನ್ಮಭೂಮಿಯಾದ ಕೆ.ಆರ್.ಪೇಟೆಯಲ್ಲಿ ಮಾತ್ರ ಎಂದರು.

ನನ್ನ ರಾಜಕೀಯ ಜೀವನದಲ್ಲಿ ಸೋಲು– ಗೆಲುವನ್ನು ನಾನು ಸಮಾನವಾಗಿ ಕಂಡಿದ್ದೇನೆ. ಸತತ 3 ಅವಧಿಗೆ ಗೆದ್ದು ಶಾಸಕನಾಗಿ, ಸಚಿವನಾಗಿಯೂ ಕೆಲಸ ಮಾಡಿದ್ದೇನೆ. ಕ್ಷೇತ್ರದ ಶಾಸಕನಾಗಿ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಅನುಷ್ಠಾನಗೊಳಿಸಿರುವ ಕೆಲಸ–ಕಾರ್ಯಗಳ ಬಗ್ಗೆ ನನಗೆ ಆತ್ಮ ತೃಪ್ತಿಯಿದೆ ಎಂದರು. ಚುನಾವಣೆಯಲ್ಲಿ ನಾನು ಕಾರ್ಯಕರ್ತರ ಖರ್ಚಿಗಾಗಿ ನೀಡಿದ್ದ ಲಕ್ಷಾಂತರ ರೂ.ಗಳನ್ನು ಮುಖಂಡರು ಕಾರ್ಯಕರ್ತರಿಗೆ ವಿತರಿಸದೇ ತಮ್ಮ ಬಳಿಯೇ ಇಟ್ಟುಕೊಂಡಿರುವ ಬಗ್ಗೆ ನನಗೆ ಕಾರ್ಯಕರ್ತರಿಂದ ವ್ಯಾಪಕವಾಗಿ ದೂರುಗಳು ಬಂದಿವೆ. ದಯಮಾಡಿ ಬಿಜೆಪಿ ಪಕ್ಷದ ಸಂಘಟನೆಗಾಗಿ ತಂದಿದ್ದ ಹಣವನ್ನು ದುರುಪಯೋಗಪಡಿಸಿಕೊಳ್ಳುವುದು ಬೇಡ. ಯಾರು ಹಣ ವಿತರಣೆ ಮಾಡದೇ ತಮ್ಮ ಬಳಿಯಲ್ಲಿಯೇ ಇಟ್ಟುಕೊಂಡಿದ್ದಾರೆಯೋ ಅವರು ಗೌರವಯುತವಾಗಿ ಹಣ ಹಿಂದಿರುಗಿಸುವ ಮೂಲಕ ಪಕ್ಷದ ಸಂಘಟನೆಗೆ ಬಳಸಲು ಅನುವು ಮಾಡಿಕೊಡಬೇಕು ಎಂದು ಮನವಿ ಮಾಡಿದರು.



ತಾಲೂಕಿನಾದ್ಯಂತ ನನ್ನ ವಿರುದ್ಧ ಏಕವಚನದಲ್ಲಿ ಮಾತನಾಡಿ ಸುಳ್ಳು ಆರೋಪಗಳನ್ನು ಮಾಡುತ್ತಿರುವ ಮಂಡ್ಯ ಹಾಲು ಒಕ್ಕೂಟದ ನಿರ್ದೇಶಕ ಡಾಲುರವಿ ತನ್ನ ವರ್ತನೆ ಬದಲಿಸಿಕೊಳ್ಳದಿದ್ದರೆ, ಆತನಿಗೆ ಬುದ್ಧಿ ಕಲಿಸುವುದು ಹೇಗೆಂದು ನನಗೆ ಗೊತ್ತಿದೆ. ನನಗೆ ಯಾವುದರಲ್ಲಿಯೂ ಸಮನಲ್ಲದ ಡಾಲು ರವಿಯಂತಹ ಹತ್ತು ಜನ ಪ್ರಾಮಾಣಿಕ ಕಾರ್ಯಕರ್ತರನ್ನು ಹುಟ್ಟು ಹಾಕುವ ಸಾಮರ್ಥ್ಯ ನನಗಿದೆ ಎಂದು ಕಿಡಿಕಾರಿದರು.

ಕೆ.ಆರ್.ಪೇಟೆಯಲ್ಲಿ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸಹೋದರರು ಹಾಗೂ ಅವರ ಮಕ್ಕಳ ಅಟ್ಟಹಾಸ ಮಟ್ಟ ಹಾಕಿದ್ದೇನೆ. ನಾನಿಲ್ಲಿ ಇರುವವರೆಗೂ ಕ್ಷೇತ್ರದಲ್ಲಿ ಗೂಂಡಾಗಿರಿ, ಗಲಾಟೆ, ಗದ್ದಲ ನಡೆಯಲು ನಾನು ಬಿಡಲ್ಲ. ನನ್ನ ಜೀವನದ ಕೊನೆ ಉಸಿರಿನವರೆಗೂ ಕ್ಷೇತ್ರದ ಜನತೆಯ ಸೇವಕನಂತೆ ಬದ್ಧತೆಯಿಂದ ಕೆಲಸ ಮಾಡುತ್ತೇನೆ. ನಾನು ಕೆ.ಆರ್.ಪೇಟೆ ಬಿಟ್ಟು ಎಲ್ಲಿಗೂ ಹೋಗುವುದಿಲ್ಲ. ನಾನು ಸತ್ತಾಗ ನನ್ನ ದೇಹ ಮಣ್ಣಾಗುವುದು ನನ್ನ ಜನ್ಮಭೂಮಿ ಕೆ.ಆರ್.ಪೇಟೆ ಮಣ್ಣಿನಲ್ಲಿ ಎಂದರು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಅಂಬರೀಶ್,ಪ್ರಭಾಕರ್, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೆ.ಶ್ರೀನಿವಾಸ್, ಪುರಸಭಾ ಸದಸ್ಯ ಬಸ್ ಸಂತೋಷ್ ಕುಮಾರ್, ತಾಪಂ ಮಾಜಿ ಅಧ್ಯಕ್ಷ ಜವರಾಯಿಗೌಡ, ಪುರಸಭೆ ಅಧ್ಯಕ್ಷೆ ಮಹಾದೇವಿ ನಂಜುಂಡ, ಪುರಸಭಾ ಸದಸ್ಯರಾದ ಕೆ.ಎಸ್.ಪ್ರಮೋದ್, ಶುಭ, ಶೋಭಾ, ಮಂಜು, ನಾರಾಯಣ, ಕುಮಾರ್, ಪುಟ್ಟಣ್ಣ, ಶೇಖರ್, ಚಂದ್ರಮೋಹನ್, ಜಿಲ್ಲಾ ಹಾಪ್ ಕಾಮ್ಸ್ ಮಾಜಿ ಅಧ್ಯಕ್ಷ ಕೆ.ಜಿ.ತಮ್ಮಣ್ಣ ಇತರರಿದ್ದರು.

ಪಿ.ಎಂ.ನರೇಂದ್ರಸ್ವಾಮಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಮಳವಳ್ಳಿ, ಮೇ 19– ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಪೂರ್ಣ ಅಧಿಕಾರ ಕಳೆದುಕೊಂಡಿದ್ದ ವೇಳೆ 2 ವಿಧಾನ ಪರಿಷತ್ ಹಾಗೂ 6 ಶಾಸಕ ಸ್ಥಾನಗಳನ್ನು ಗೆಲ್ಲಲು ಕಾರಣರಾದ ಪಿ.ಎಂ. ನರೇಂದ್ರಸ್ವಾಮಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಬ್ಲಾಕ್ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಬಿ.ಮಲ್ಲಯ್ಯ ಮನವಿ ಮಾಡಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಭದ್ರಕೋಟೆಯಾಗಿದ್ದ ಮಂಡ್ಯ ಜಿಲ್ಲೆಯಲ್ಲಿ ಹಿರಿಯ ನಾಯಕರಾದ ಚಲುವರಾಯಸ್ವಾಮಿ ಜೊತೆಗೂಡಿ ಕಾಂಗ್ರೆಸ್ ಪಕ್ಷ ಸಂಘಟಿಸಿ ಇಬ್ಬರು ಎಂಎಲ್‌ಸಿಗಳನ್ನು ಆಯ್ಕೆ ಮಾಡುವ ಮೂಲಕ ವಿಧಾನಸಭಾ ಚುನಾವಣೆಯಲ್ಲಿ 6 ಕ್ಷೇತ್ರಗಳನ್ನು ಗೆಲ್ಲಿಸಿರುವುದರಿಂದ ಜಿಲ್ಲೆಯ ಜೋಡೆತ್ತುಗಳೆಂದು ಗುರುತಿಸಿಕೊಂಡಿರುವ ಚಲುವರಾಯಸ್ವಾಮಿ ಅವರ ಜೊತೆ ಪಿ.ಎಂ.ನರೇಂದ್ರಸ್ವಾಮಿ ಅವರಿಗೂ ಸಚಿವ ಸ್ಥಾನ ಕೊಡಬೇಕೆಂದು ಆಗ್ರಹಿಸಿದರು.

ಚುನಾವಣೆಯಲ್ಲಿ ಜೆಡಿಎಸ್ ಭದ್ರಕೋಟೆ ಛಿದ್ರಗೊಳಿಸಿ ಕಾಂಗ್ರೆಸ್‌ನ ಐವರು ಹಾಗೂ ಓರ್ವ ರೈತ ಸಂಘದ ಅಭ್ಯರ್ಥಿ ಸೇರಿದಂತೆ 6 ಮಂದಿ ಗೆಲುವಿಗೆ ನರೇಂದ್ರಸ್ವಾಮಿ ಹಾಗೂ ಚಲುವರಾಯಸ್ವಾಮಿ ಅವರು ಶ್ರಮಿಸಿದ್ದಾರೆ. ಜಿಲ್ಲೆಯ ಅಭಿವೃದ್ಧಿ ಬಗ್ಗೆ ಹಲವು ಚಿಂತನೆಗಳನ್ನು ಒಳಗೊಂಡಿರುವ ಪಿ.ಎಂ.ನರೇಂದ್ರಸ್ವಾಮಿ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕೆಂದು ಪಕ್ಷದ ಹೈಕಮಾಂಡನ್ನು ಆಗ್ರಹಿಸಿದರು. ಪುರಸಭೆ ಮಾಜಿ ಅಧ್ಯಕ್ಷ ದೊಡ್ಡಯ್ಯ ಮಾತನಾಡಿ, ಜಿಲ್ಲೆಯಲ್ಲಿ ಚಲುವರಾಯಸ್ವಾಮಿ ಹಾಗೂ ನರೇಂದ್ರಸ್ವಾಮಿ ಅವರು ಜೋಡೆತ್ತುಗಳಾಗಿ ಕಾಂಗ್ರೆಸ್ ಪಕ್ಷವನ್ನು ಸದೃಢವಾಗಿ ಕಟ್ಟುತ್ತಿದ್ದಾರೆ. ಜಿಲ್ಲೆಯ ಅಭಿವೃದ್ಧಿಗಾಗಿ ಇಬ್ಬರಿಗೂ ಸಚಿವ ಸ್ಥಾನ ನೀಡಿ ಪಕ್ಷ ಉಳಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿ ಯಲ್ಲಿ ದ್ಯಾಪೇಗೌಡ, ಲಿಂಗರಾಜು, ಕಿರಣ್ ಶಂಕರ್, ಧನಂಜಯ, ಮುಖಂಡರಾದ ಗಂಗೇರಾಜೇ ಅರಸ್, ಶಿವಣ್ಣ, ಕೃಷ್ಣಮೂರ್ತಿ ಸೇರಿದಂತೆ ಇತರರಿದ್ದರು.

ಪಟಾಕಿ ಮದ್ದು ತಿಂದು ಬಾಲಕ ಸಾವು

ಹಲಗೂರು, ಮೇ 19– ಪಟಾಕಿಯಲ್ಲಿದ್ದ ಮದ್ದಿನ ಚೂರುಗಳನ್ನು ತಿಂದು 3 ವರ್ಷದ ಬಾಲಕ ಮೃತಪಟ್ಟಿರುವ ಘಟನೆ ಸಮೀಪದ ಧನಗೂರು ಹೊರವಲಯದ ತೋಟದ ಮನೆಯೊಂದರಲ್ಲಿ ನಡೆದಿದೆ.

ನೇಪಾಳ ಮೂಲದ ಕಮಲ್‌ನಾಥ್ ಮತ್ತು ಮೀನಾದೇವಿ ದಂಪತಿ ಉದ್ಯೋಗ ಅರಸಿ ಮೂರು ವರ್ಷದ ಹಿಂದೆ ಬೆಂಗಳೂರಿಗೆ ಬಂದಿದ್ದರು. ಕಳೆದ ಒಂದು ವರ್ಷದಿಂದ ಹಲಗೂರು ಸಮೀಪದ ಧನಗೂರು ಗ್ರಾಮದ ಅಯೂಬ್ ಪಾಷಾ ಅವರಿಗೆ ಸೇರಿದ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದರು. ಮೇ 16 ರಂದು ತೋಟಕ್ಕೆ ಬಂದಿದ್ದ ಮಂಗಗಳನ್ನು ಬೆದರಿಸಿ ಹೊರಹಾಕಲು ಕಮಲ್ ನಾಥ್ ಪಟಾಕಿ ಸಿಡಿಸಿದ್ದರು. ಈ ಪಟಾಕಿಯಲ್ಲಿದ್ದ ಮದ್ದು ಮಿಶ್ರಿತ ಕಾಗದದ ತುಣುಕುಗಳನ್ನು ಕಮಲ್ ನಾಥ್ ಪುತ್ರ ಸರೋಜ್ ನಾಥ್ (3) ತಿಂದು ಅಸ್ವಸ್ಥನಾಗಿದ್ದ. ತಕ್ಷಣ ಜಾಗೃತರಾದ ದಂಪತಿಗಳು ಚಿಕಿತ್ಸೆಗಾಗಿ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಮೇ 17 ರಂದು ಮಗು ಮೃತಪಟ್ಟಿದೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅಪಮಾನ ಆರೋಪ

ಪೊಲೀಸರ ವಶದಲ್ಲಿ ಸಿಮ್ಸ್ ನಿರ್ದೇಶಕ ಡಾ.ಸಂಜೀವ್

ಚಾಮರಾಜನಗರ, ಮೇ 19– ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ (ಡೀನ್) ಡಾ.ಜಿ.ಎಂ. ಸಂಜೀವ್ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ನಿಂದಿಸಿದ್ದಾರೆ ಹಾಗೂ ಜಾತಿ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ನಗರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ಪೊಲೀಸರು ಡೀನ್ ಸಂಜೀವ್ ಅವರನ್ನು ತಮ್ಮ ವಶಕ್ಕೆ ಪಡೆದಿದ್ದಾರೆ. ಬಿಎಸ್‌ಪಿ ಜಿಲ್ಲಾಧ್ಯಕ್ಷ ನಾಗಯ್ಯ ಅವರು ಸಂಜೀವ್ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಿದ ಹಿನ್ನೆಲೆಯಲ್ಲಿ ಶುಕ್ರವಾರ ಸಂಜೆ ಪೊಲೀಸರು ಸಂಜೀವ್‌ರನ್ನು ವಶಕ್ಕೆ ಪಡೆದರು.

ದಲಿತ ಸಂಘಟನೆಗಳಿಂದ ಪ್ರತಿಭಟನೆ: ನಗರದಲ್ಲಿ ಶುಕ್ರವಾರ ದಲಿತ ಸಂಘಟನೆಗಳ ಕಾರ್ಯಕರ್ತರು, ಬಿಎಸ್‌ಪಿ ಕಾರ್ಯಕರ್ತರು ಹಾಗೂ ಆಸ್ಪತ್ರೆಯ ಹೊರಗುತ್ತಿಗೆ ನೌಕರರು ಡೀನ್ ಸಂಜೀವ್ ವಿರುದ್ಧ ಪ್ರತಿಭಟನೆ ನಡೆಸಿ, ಅವರ ಕಾರನ್ನು ತಡೆದು, ಜಖಂಗೊಳಿಸಿ, ಅವರ ಮೇಲೆ ಕೊಳಚೆ ನೀರು ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಸಿಮ್ಸ್ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಕೆಲವು ತಿಂಗಳಿನಿಂದ ವೇತನ ಆಗಿರಲಿಲ್ಲ. ಈ ಬಗ್ಗೆ ಹೊರಗುತ್ತಿಗೆ ನೌಕರರು ಗುರುವಾರ ಸಿಮ್ಸ್ ಆವರಣದಲ್ಲಿ ಪ್ರತಿಭಟನೆ ನಡೆಸಿದ್ದರು. ನಂತರ ಈ ಕುರಿತು ವಿಚಾರಿಸಲು ನೌಕರರು ಡೀನ್ ಕಚೇರಿಗೆ ತೆರಳಿದ್ದರು ಎನ್ನಲಾಗಿದೆ. ಈ ವೇಳೆ ಡೀನ್ ಅವರು ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದರು ಎಂದು ಆರೋಪಿಸಲಾಗಿದೆ. ಈ ಸಂಬಂಧ ಆಸ್ಪತ್ರೆಯ ಮೂಳೆ ಮತ್ತು ಕೀಲು ವಿಭಾಗದ ಮುಖ್ಯಸ್ಥ ಡಾ. ಮಾರುತಿ ಅವರು, ಶುಕ್ರವಾರ ಬೆಳಗ್ಗೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಡಾ.ಸಂಜೀವ್ ಅವರ ವಿರುದ್ಧ ಲಿಖಿತವಾಗಿ ದೂರು ನೀಡಿದ್ದಾರೆ ಎನ್ನಲಾಗಿದೆ.

ಈ ವಿಚಾರ ದಲಿತ ಸಂಘಟನೆಗಳಿಗೆ, ಬಿಎಸ್‌ಪಿ ಕಾರ್ಯಕರ್ತರು ಹಾಗೂ ಆಸ್ಪತ್ರೆಯ ಹೊರಗುತ್ತಿಗೆ ನೌಕರರಿಗೆ ತಿಳಿದು, ನಂತರ ಯಡಬೆಟ್ಟದಲ್ಲಿರುವ ಸಿಮ್ಸ್‌ಗೆ ತೆರಳಿದರು. ಈ ವೇಳೆ ಡಾ.ಸಂಜೀವ್ ಅವರು ಪತ್ನಿ ಜೊತೆ ಕಾರಿನಲ್ಲಿ ಬರುತ್ತಿದ್ದಾಗ ಕಾರನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಂತರ ಕಾರನ್ನು ಜಖಂಗೊಳಿಸಿದಲ್ಲದೇ, ಡೀನ್ ಅವರಿಗೆ ಕೊಳಚೆ ನೀರು ಎರಚಿ ಆಕ್ರೋಶ ವ್ಯಕ್ತಪಡಿಸಿದ್ದರು ಎನ್ನಲಾಗಿದೆ.

ಈ ವಿಷಯ ತಿಳಿದ ಪೊಲೀಸರು ಕೂಡಲೇ ಸ್ಥಳಕ್ಕೆ ಆಗಮಿಸಿ ಡೀನ್ ಸಂಜೀವ್ ಅವರನ್ನು ಗ್ರಾಮಾಂತರ ಪೊಲೀಸ್ ಠಾಣೆಗೆ ಕರೆ ತಂದರು. ಸಿಮ್ಸ್ ಆಸ್ಪತ್ರೆಯಿಂದ ಸಂಜೆ ನಗರದ ಭುವನೇಶ್ವರಿ ವೃತ್ತಕ್ಕೆ ಆಗಮಿಸಿದ ಪ್ರತಿಭಟನಾಕಾರರು ಟೈರ್‌ಗೆ ಬೆಂಕಿ ಹಚ್ಚಿ ಡೀನ್ ಸಂಜೀವ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಡೀನ್ ಕಾರಿಗೆ ಮುತ್ತಿಗೆ, ಕೊಳಚೆ ನೀರು ಹಾಕಿ ಆಕ್ರೋಶ



ಇಂದಿನಿಂದ 'ನನ್ನ ಜೀವನ ನನ್ನ ಸ್ವಚ್ಛ ನಗರ ಯೋಜನೆ' ಜಾರಿ

- ತ್ಯಾಜ್ಯ ವಸ್ತು ನೀಡಿದವರಿಗೆ, ಪ್ರೋತ್ಸಾಹಕ ವಸ್ತುಗಳು ಉಡುಗೊರೆ
- ಚಾ.ನಗರ ನಗರಸಭೆಯಿಂದ ವಿನೂತನ ಕಾರ್ಯಕ್ರಮ
- ಪಟ್ಟಣದ 5 ಸ್ಥಳಗಳಲ್ಲಿ ಪುನರ್ ಬಳಕೆ ಕೇಂದ್ರ ಸ್ಥಾಪನೆ



ಚಾಮರಾಜನಗರ, ಮೇ 19– ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಮೇ 20ರಿಂದ ಜೂನ್ 5ರವರೆಗೆ 'ನನ್ನ ಜೀವನ, ನನ್ನ ಸ್ವಚ್ಛ ನಗರ ಯೋಜನೆಯ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನಗರ ವ್ಯಾಪ್ತಿಯ 5 ಸ್ಥಳಗಳಲ್ಲಿ ಪುನರ್ ಬಳಕೆ ಕೇಂದ್ರಗಳನ್ನು ತೆರೆಯಲಾಗಿದೆ.


ಸಾರ್ವಜನಿಕರು, ಎನ್‌ಜಿಒ, ಸ್ವ ಸಹಾಯ ಸಂಘಗಳು ಮತ್ತು ಸ್ವಯಂ ಸೇವಕರು ಹಾಗೂ ಎಲ್ಲಾ 31 ವಾರ್ಡ್ ಸಾರ್ವಜನಿಕರು 6 ವಿವಿಧ ತ್ಯಾಜ್ಯ ವಸ್ತುಗಳನ್ನು (ಖಖಖ) ಕೇಂದ್ರಕ್ಕೆ ದೇಣಿಗೆ ನೀಡುವುದರ ಮೂಲಕ ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. ಅಲ್ಲದೇ ಪ್ರಮಾಣ ಪತ್ರವನ್ನು ಪಡೆಯುವುದರ ಜೊತೆಗೆ ಪರ್ಯಾಯವಾಗಿ ಪ್ರೋತ್ಸಾಹ ವಸ್ತುಗಳನ್ನು ಪಡೆಯಬಹುದಾಗಿದೆ. ತ್ಯಾಜ್ಯ ವಸ್ತುಗಳಾದ ಆಟಿಕೆ ವಸ್ತುಗಳನ್ನು ನೀಡಿ ಸ್ಟೇಷನರಿ ವಸ್ತು (ಪರಿಸರ ಸ್ನೇಹಿ ಪೆನ್, ಮರುಬಳಕೆಯ ಪುಸ್ತಕ) ಪಡೆಯಬಹುದು. ಬಟ್ಟೆ–ಹಳೆಯ ಜೀನ್ಸ್, ಸಮವಸ್ತ್ರ ಸೀರೆಗಳು (ಮರು ಬಳಕೆ ಮಾಡಬಹುದಾದ ಬಟ್ಟೆಗಳು, ಹಳೆಯ ಚಪ್ಪಲಿಗಳು) ಗಳಿಗೆ ಕಪ್ಪು ಚಿನ್ನ(ಸಾವಯುವ ಗೊಬ್ಬರ) ನೀಡಲಾಗುವುದು. ದಿನಪತ್ರಿಕೆ, ಮಾಸ ಪತ್ರಿಕೆಗಳನ್ನು ನೀಡಿ ಲೇಖನ ಸಾಮಗ್ರಿಗಳು (ಪರಿಸರ ಸ್ನೇಹಿ ಪೆನ್ ಮರುಬಳಕೆ ಪುಸ್ತಕ) ನೀಡಲಾಗುವುದು. ಹಳೆಯ ಪುಸ್ತಕಗಳಿಗೆ ಲೇಖನ ಸಾಮಗ್ರಿಗಳನ್ನು, ಪ್ಲಾಸ್ಟಿಕ್ ಚೀಲಗಳು, ಕ್ಯಾರಿ ಬ್ಯಾಗ್‌ಗಳಿಗೆ ಪ್ರತಿ 250ಗ್ರಾಂ, ಪ್ಲಾಸ್ಟಿಕ್ ಚೀಲಗಳಿಗೆ ಒಂದು ಕೆಜಿ ಸಾಮರ್ಥ್ಯದ ಬಟ್ಟೆಯ ಚೀಲ ನೀಡಲಾಗುವುದು. ಎಲೆಕ್ಟ್ರಾನಿಕ್ ವಸ್ತುಗಳಿಗೆ ಪ್ರತಿಯಾಗಿ ಡಿಜಿಟಲ್ ಪ್ರಮಾಣಪತ್ರ ನೀಡಲಾಗುವುದು.

ನಗರಸಭಾ ಕಚೇರಿ ಆವರಣ (ಪ್ರಸಾದ್ ಮೇಲ್ವಿಚಾರಕರು ಮೊ. 984446031), ಕರಿನಂಜನಪುರ ರಸ್ತೆಯಲ್ಲಿರುವ ವಾರ್ಡ್ ನಂ.9ರಲ್ಲಿರುವ ಶೂನ್ಯ ತ್ಯಾಜ್ಯ ನಿರ್ವಹಣಾ ಘಟಕ (ಸುಂದ್ರ ಮೇಲ್ವಿಚಾರಕರು ಮೊ. 9844495559), ನಗರದ ಸಂತೇಮರಹಳ್ಳಿ ರಸ್ತೆಯ ಪುಟ್ಟಮ್ಮಣಿ ಪಾರ್ಕ್ (ವೆಂಕಟೇಶ್ ಮೇಲ್ವಿಚಾರಕರು ಮೊ. 9980368353), ನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದ ಪಕ್ಕದಲ್ಲಿರುವ ಖಾಸಗಿ ಬಸ್ ನಿಲ್ದಾಣ ಆವರಣ (ಮಣಿಕಂಠ ಮೇಲ್ವಿಚಾರಕರು ಮೊ. 9743500610), ನಗರದ ರಾಮಸಮುದ್ರದ ಪಂಪ್‌ಹೌಸ್ ಆವರಣ (ಚೇತನ್ ಮೇಲ್ವಿಚಾರಕರು ಮೊ. 9113027150)ದಲ್ಲಿ ಆರ್‌ಆರ್‌ಆರ್ ಕೇಂದ್ರಗಳು ಇವೆ.

ಮೇ 20ರಿಂದ ಜೂನ್ 5ರವರೆಗೆ ಬೆಳಗ್ಗೆ 7 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಆರ್‌ಆರ್‌ಆರ್ ಕೇಂದ್ರಗಳು ತೆರೆದಿರುತ್ತದೆ ಎಂದು ಚಾಮರಾಜನಗರ ನಗರಸಭೆ ಪ್ರಕಟಣೆ ತಿಳಿಸಿದೆ.

ಸುಬ್ಬಮ್ಮ ನಿಧನ


ಚಾಮರಾಜನಗರ, ಮೇ 19– ತಾಲೂಕು ದೊಡ್ಡರಾಯಪೇಟೆ ಗ್ರಾಮದ ದಿವಂಗತ ಪುಟ್ಟಮಾದಪ್ಪ ಮಲ್ಲಪ್ಪನವರ ಧರ್ಮಪತ್ನಿ ಸುಬ್ಬಮ್ಮ (95) ಇಂದು ರಾತ್ರಿ ನಿಧನರಾದರು.



ಮೃತರು ಪುತ್ರರಾದ ಲಿಂಗಣ್ಣ, ಪಿಗ್ಮಿ ಸ್ವಾಮಿ, ಸಾವಂಯುವ ಮಹದೇವಸ್ವಾಮಿ (ಗ್ರಾ.ಪಂ.ಸ) ಹಾಗೂ ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ ಸ್ವಗ್ರಾಮ ದೊಡ್ಡರಾಯಪೇಟೆಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೇ 22ರಂದು ಗ್ರಾಮಾಂತರ ಬಸವ ಜಯಂತಿ

ಚಾಮರಾಜನಗರ, ಮೇ 19– ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದಲ್ಲಿ ಮೇ 22ರಂದು ಗ್ರಾಮಾಂತರ ಬಸವ ಜಯಂತೋತ್ಸವ, ಶ್ರೀಮಠದ ಲಿಂಗೈಕ್ಯ ಪರಮ ಪೂಜ್ಯರ ಸ್ಮರಣೋತ್ಸವ, ಮಠದ ದಾಸೋಹ ಭವನದ ಭೂಮಿ ಪೂಜಾ ಕಾರ್ಯಕ್ರಮ ಆಯೋಜಿಸಲಾಗಿದೆ ಶ್ರೀಸಿದ್ದಮಲ್ಲೇಶ್ವರ ವಿರಕ್ತ ಮಠದ ಅಧ್ಯಕ್ಷ ಚನ್ನಬಸವ ಸ್ವಾಮೀಜಿ ತಿಳಿಸಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೇ 21ರ ರಾತ್ರಿ 9 ಗಂಟೆಗೆ ಜಗಜ್ಯೋತಿ ಬಸವೇಶ್ವರರು ನಾಟಕ ಪ್ರದರ್ಶನ, ಮೇ 22ರ ಬೆಳಗ್ಗೆ ಮಠದ ಪೂಜ್ಯರ ಗದ್ದುಗೆಗೆ ಬಿಲ್ವಾರ್ಚನೆ ಹಾಗೂ ಮಹಾ ಮಂಗಳಾರತಿ, ಬೆಳಗ್ಗೆ 6.30ಕ್ಕೆ ಮಲ್ಲನಮೂಲೆ ಮಠದ ಚನ್ನಬಸವ ಸ್ವಾಮೀಜಿ ಗಳಿಂದ ಷಟ್‌ಸ್ಥಲ ಧ್ವಜಾರೋಹಣ, ಬೆಳಗ್ಗೆ 7ಗಂಟೆಗೆ ಕನಕಪುರದ ದೇಗುಲ ಮಠದ ಮುಮ್ಮಡಿ ಮಹಾ ನಿರ್ವಾಣ ಸ್ವಾಮೀಜಿಗಳಿಂದ ಇಷ್ಟಲಿಂಗ ಪೂಜೆ ನಡೆಯಲಿದೆ ಎಂದರು. ಅಲ್ಲದೇ ಬೆಳಗ್ಗೆ 10 ಗಂಟೆಗೆ ದಾಸೋಹ ಭವನದ ಭೂಮಿ ಪೂಜೆ, ಬೆಳಗ್ಗೆ 10.30ಕ್ಕೆ ಗ್ರಾಮಾಂತರ ಬಸವ ಜಯಂತೋತ್ಸವಕ್ಕೆ ಚಾಲನೆ ನೀಡಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಲಿದ್ದಾರೆ. ಜಿಲ್ಲೆಯ ಹಲವು ಮಠಗಳ ಸ್ವಾಮೀಜಿ, ಜನಪ್ರತಿನಿಧಿಗಳು, ಸಾಹಿತಿಗಳು, ಸಂಘ–ಸಂಸ್ಥೆಗಳ ಅಧ್ಯಕ್ಷರು ಭಾಗವಹಿಸಲಿದ್ದಾರೆ. ಜಿಲ್ಲೆಯ ಹಲವು ಗ್ರಾಮಗಳಿಂದ ಸುಮಾರು 35 ಸಾವಿರಕ್ಕೂ ಹೆಚ್ಚು ಜನರನ್ನು ಕಾರ್ಯಕ್ರಮದಲ್ಲಿ ಸೇರಿಸುವ ನಿರೀಕ್ಷೆ ಇದೆ ಎಂದರು.

ರಾಜ್ಯಮಟ್ಟದ ಪ್ರಶಸ್ತಿಗೆ ನೇಕಾರರಿಂದ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 19– ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ 2023–24ನೇ ಸಾಲಿಗೆ ರಾಜ್ಯಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಲು ನೇಕಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಕೈಮಗ್ಗ ಉತ್ಪನ್ನಗಳನ್ನು ಪ್ರೋತ್ಸಾಹಿಸಲು ರಾಜ್ಯಮಟ್ಟದ ಪ್ರಶಸ್ತಿ ನೀಡಲಾಗುತ್ತಿದೆ. ರೇಷ್ಮೆ, ಹತ್ತಿ ಮತ್ತು ಉಣ್ಣೆ ವಲಯದಲ್ಲಿ ಕೈಮಗ್ಗ ನೇಯ್ಗೆ ವೃತ್ತಿಯಲ್ಲಿ ನೈಪುಣ್ಯತೆ, ಶ್ರೇಷ್ಠತೆ, ತಾಂತ್ರಿಕತೆ, ಉತ್ಕೃಷ್ಟತೆ ಹೊಂದಿರುವ ಉತ್ಪನ್ನಕ್ಕೆ ಪ್ರಶಸ್ತಿ ನೀಡಲಾಗುವುದು. ಅರ್ಹ ನೇಕಾರರು ನಿಗದಿತ ನಮೂನೆಯಲ್ಲಿ ಮೇ 31ರೊಳಗೆ ಅರ್ಜಿ ಸಲ್ಲಿಸ ಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದ 2ನೇ ಮಹಡಿಯ ಲ್ಲಿರುವ (ರೂಂ.ನಂ 222), ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರು ದೂ.ಸಂ 08226–295083 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಗುಜರಾತ್ ಕರಕುಶಲ ಉತ್ಸವ

ಮೇ 28ರವರೆಗೆ ಆಕರ್ಷಕ ಕರಕುಶಲ ವಸ್ತುಗಳ ಪ್ರದರ್ಶನ-ಮಾರಾಟ

ಮೈಸೂರು, ಮೇ 19(ಎಸ್‌ಬಿಡಿ)– ಮೈಸೂರಿನ ರಿಂಗ್‌ರಸ್ತೆಯಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಆಯೋಜಿಸಿರುವ 10 ದಿನಗಳ ಗುಜರಾತ್ ಕರಕುಶಲ ಉತ್ಸವಕ್ಕೆ ಶುಕ್ರವಾರ ಚಾಲನೆ ದೊರಕಿತು. ಗುಜರಾತ್ ರಾಜ್ಯ ಸರ್ಕಾರದ 'ಇಂಡಸ್ಟ್ರಿಯಲ್ ಎಕ್ಸ್‌ಟೆನ್ಷನ್ ಕಾಟೇಜ್ (INDEXT-C)' ಅಂಗಸಂಸ್ಥೆಯ ಸಹಯೋಗದೊಂದಿಗೆ ಮೇ 28ರವರೆಗೆ ಆಯೋಜಿಸಲಾಗಿರುವ ಗುಜರಾತ್ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಕರ್ನಾಟಕ ಸರ್ಕಾರದ ಖಜಾನೆ ಆಯುಕ್ತೆ ಡಾ.ಅರುಂಧತಿ ಚಂದ್ರಶೇಖರ್ ವಿದ್ಯುಕ್ತವಾಗಿ ಚಾಲನೆ ನೀಡಿದ ಬಳಿಕ ಗಣ್ಯರೊಡಗೂಡಿ ಮಳಿಗೆಗಳನ್ನು ವೀಕ್ಷಿಸಿದರು.



ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿ, ಜೆಎಸ್‌ಎಸ್ ಸಂಸ್ಥೆಯಿಂದ ವಿವಿಧ ರಾಜ್ಯಗಳ ಕರಕುಶಲ ವಸ್ತುಗಳ ಉತ್ಸವ ನಿರಂತರವಾಗಿ ನಡೆದು ಬಂದಿದೆ. ಪ್ರಸ್ತುತ ಗುಜರಾತ್ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಆರಂಭಗೊಂಡಿದೆ. ಈ ಸದವಕಾಶವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಂಡು ಈ ಮೂಲಕ ಕರಕುಶಲ ಕಲೆಯನ್ನು ಪ್ರೋತ್ಸಾಹಿಸಬೇಕೆಂದು ಮನವಿ ಮಾಡಿದರು.

ನೈರುತ್ಯ ರೈಲ್ವೆ ಮೈಸೂರು ವಿಭಾಗಿಯ ವ್ಯವಸ್ಥಾಪಕಿ ಶಿಲ್ಪಿ ಅಗರ್ವಾಲ್ ಮಾತನಾಡಿ, ಜೆಎಸ್‌ಎಸ್ ಸಂಸ್ಥೆ ವತಿಯಿಂದ ದೇಶಿ ಕರಕುಶಲ ಕಲೆಯನ್ನು ಪ್ರೋತ್ಸಾಹಿಸಿಕೊಂಡು ಬರುತ್ತಿರುವುದು ಅಭಿನಂದನೀಯ. ವಿವಿಧ ರಾಜ್ಯಗಳ ಸಾಂಪ್ರದಾಯಿಕ ಕರಕುಶಲ ವಸ್ತುಗಳನ್ನು ಸ್ಥಳೀಯರಿಗೆ ಪ್ರೋತ್ಸಾಹಿಸಲಾಗುತ್ತಿದೆ. ಗುಜರಾತ್ ಕರಕುಶಲಕರ್ಮಿಗಳಿಗೆ ಅಭಿನಂದನೆ ತಿಳಿಸುತ್ತೇನೆ. ಸಾರ್ವಜನಿಕರು ಮೇಳಕ್ಕೆ ಭೇಟಿ ನೀಡಿ ಸದುಪಯೋಗ ಪಡೆಯಬೇಕು ಎಂದು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್ ಮಾತನಾಡಿ, ಮೈಸೂರು ನಗರಕ್ಕೆ ಅರ್ಬನ್ ಹಾತ್ ಪರಿಚಯಿಸಿದ ಕೀರ್ತಿ ಜೆಎಸ್‌ಎಸ್ ಸಂಸ್ಥೆಗೆ ಸಲ್ಲುತ್ತದೆ. ಶ್ರೀಗಳ ದೂರದೃಷ್ಟಿ ಫಲವಾಗಿ 20 ವರ್ಷಗಳ ಹಿಂದೆ ಕೇಂದ್ರ ಸರ್ಕಾರದ ಸಹಯೋಗದಲ್ಲಿ ಸುಮಾರು 6 ಎಕರೆ ಪ್ರದೇಶದಲ್ಲಿ ಈ ಅರ್ಬನ್ ಹಾತ್ ಆರಂಭಿಸಲಾಯಿತು. ಈವರೆಗೆ 135 ಮೇಳಗಳನ್ನು ನಡೆಸಲಾಗಿದೆ. ಪ್ರಸ್ತುತ 9ನೇ ಗುಜರಾತ್ ಕರಕುಶಲ ಉತ್ಸವ ಏರ್ಪಡಿಸಲಾಗಿದೆ. ಇಲ್ಲಿಗೆ ಬಂದರೆ ಹಬ್ಬದ ವಾತಾವರಣದ ಅನುಭವವಾಗುತ್ತದೆ. ಸಾರ್ವಜನಿಕರು ಭೇಟಿ ನೀಡಿ ವೀಕ್ಷಿಸಬೇಕೆಂದು ಕೋರಿದರು.

ಈ ವೇಳೆ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ಮಂಡಳಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಿ.ಭಾರತಿ, ಇಂಡೆಕ್ಸ್ಟ್–ಸಿ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಎಂ.ಶುಕ್ಲ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕಿ ಬಿ.ಎಸ್.ನಂದಿನಿ, ಜೆಎಸ್‌ಎಸ್ ಅರ್ಬನ್ ಹಾತ್ ಸಂಚಾಲಕ ಶಿವಾನಂಜಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಕರಕುಶಲ ಉತ್ಸವ ವಿಶೇಷ

ಗುಜರಾತ್‌ನ ವಿವಿಧೆಡೆಯ 80ಕ್ಕೂ ಹೆಚ್ಚು ಪ್ರಸಿದ್ಧ ಹಾಗೂ ಕ್ರಿಯಾಶೀಲ ಕುಶಲಕರ್ಮಿಗಳು ಈ ಮೇಳದಲ್ಲಿ ಭಾಗವಹಿಸಲಿದ್ದು, ಸದ್ಯ 30ಕ್ಕೂ ಹೆಚ್ಚು ಮಳಿಗೆಗಳಲ್ಲಿ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಆರಂಭವಾಗಿದೆ. ಕುಶಲಕರ್ಮಿಗಳು ತಯಾರಿಸಿದ ಪಟೋಲ ಸೀರೆಗಳು, ಬಾಂದಿನಿ ಸೀರೆಗಳು, ಕಸೂತಿ ಮಾಡಿದ ಬೆಡ್ ಶೀಟ್‌ಗಳು, ಟವಲ್‌ಗಳು, ಕುಶನ್ ಕವರ್‌ಗಳು, ಪರಿಸರ ಸ್ನೇಹಿ ಆಭರಣಗಳು, ಡ್ರೆಸ್ ಮೆಟೀರಿಯಲ್‌ಗಳು, ಮಣ್ಣಿನಿಂದ ತಯಾರಿಸಿದ ವಸ್ತುಗಳು, ಬೀಡ್ ವರ್ಕ್, ಮೆಟಲ್ ವರ್ಕ್, ಕುರ್ತಿಗಳು, ಚನಿಯಾ ಚೋಲಿ, ಬಾಂದಿನಿ ಹಾಗೂ ಇನ್ನಿತರ ಆಕರ್ಷಣೀಯ ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳು ಲಭ್ಯವಿವೆ.

ಉಚಿತ ತರಬೇತಿ: ಮೇಳದ ಅವಧಿಯಲ್ಲಿ ಶಾಲಾ ವಿದ್ಯಾರ್ಥಿಗಳು, ಮಹಿಳೆಯರು ಸೇರಿದಂತೆ ಆಸಕ್ತರಿಗೆ ಉಚಿತವಾಗಿ ಗುಜರಾತ್ ಪಾರಂಪರಿಕ ಕಲೆಯ ಬಗ್ಗೆ ತರಬೇತಿ ನೀಡಲಾಗುತ್ತದೆ. ಶಾಲಾ ಮಕ್ಕಳಿಗೆ ಉಚಿತ ವಾಹನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಶ್ರೀ ಸಪ್ತರ್ಷಿ ವೈದಿಕ ಗುರುಕುಲ ಸೇವಾಶ್ರಮಕ್ಕೆ ಪ್ರವೇಶ

ಮೈಸೂರು, ಮೇ 19– ಮೈಸೂರಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ಸಾಧನಹಳ್ಳಿ ಶ್ರೀ ಸಪ್ತರ್ಷಿ ವೈದಿಕ ಗುರುಕುಲ ಸೇವಾಶ್ರಮದ ವತಿಯಿಂದ 2ನೇ ತರಗತಿಯಿಂದ 10ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಬಯಸಿ ಬರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಜೊತೆಗೆ ಸಾಮಾನ್ಯ ಶಿಕ್ಷಣ, ವೇದ, ಸಂಗೀತ, ಆಗಮ, ವೇದಿಕ್, ಭರತನಾಟ್ಯ, ಜ್ಯೋತಿಷ್ಯ, ಸಂಸ್ಕೃತದ ಕಲಿಕೆ ಹಾಗೂ ಗುರುಕುಲ ಪದ್ಧತಿಯನ್ನು ನುರಿತ ಶಿಕ್ಷಣ ತಜ್ಞರಿಂದ ಬೋಧನೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಆಶ್ರಮದ ಪೀಠಾಧ್ಯಕ್ಷರಾದ ಡಾ. ಅಭಿನವ ಶ್ರೀ ರಂಗ ರಾಮಾನುಜ ಚಾರ್ಯ ಜೀ ಅವರನ್ನು (9481319111, 8861573934) ಸಂಪರ್ಕಿಸಬಹುದು.

ಮೊದಲನೇ ವರ್ಷದ ಸವಿನೆನಪು



ನೀವು ನಮ್ಮಿಂದ ದೂರು ಹೋಗಿರಬಹುದು, ಮನಸ್ಸಿನಿಂದಲ್ಲ ಅಂತರಂಗದಲ್ಲಿ ನಿಮ್ಮ ನೆನಪು ಸದಾ ಚಿರಸ್ಥಾಯಿ ಯಾಗಿ ನೀವು ನಮ್ಮನ್ನು ಅಗಲಿ ಒಂದು ವರ್ಷವಾಯಿತು. ನಿಮ್ಮ ನೆನಪಿನಲ್ಲಿ ರುವ: ಪತಿ: ಬಿ.ಚಂದ್ರಶೇಖರ್ ಮತ್ತು ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಹಾಗೂ ಮಗಳು ಮತ್ತು ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗ, ಬಿಳಿಕೆರೆ, ಸಂತೆಮಾಳ

ಡಿ.ಸುಬ್ಬಲಕ್ಷ್ಮಮ್ಮ
ನಿಧನ :20.05.2022

7ನೇ ವರ್ಷದ ಪುಣ್ಯಸ್ಮರಣೆ



ದಿ.ಡಾ.ಎಸ್.ಸುಬ್ರಮಣ್ಯಂ, ಚರ್ಮರೋಗ ತಜ್ಞರು ಇವರ ಧರ್ಮಪತ್ನಿ, ಬೃಂದಾವನ ಬಡಾವಣೆ, ಮೈಸೂರು
ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಮಗ, ಹೆಣ್ಣು ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಬಂಧುಗಳು, ಅಪಾರ ಮಿತ್ರ ಬಳಗ,

ಶ್ರೀಮತಿ ವೈ.ಎನ್ ಕಮಲಮ್ಮ

ರೌಡಿಶೀಟರ್ ಚಂದ್ರು ಹತ್ಯೆ ಆರೋಪಿಗಳು ಶರಣು?

ಮೈಸೂರು, ಮೇ 19–ಮೈಸೂರಿನ ಜನನಿಬಿಡ ಪ್ರದೇಶವಾದ ಒಂಟಿಕೊಪ್ಪಲಿನ ಕಾಳಿದಾಸ ರಸ್ತೆಯಲ್ಲಿ ಗುರುವಾರ ಸಂಜೆ ನಡೆದ ರೌಡಿಶೀಟರ್ ಚಂದ್ರು ಅಲಿಯಾಸ್ ಚಂದು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 9 ಮಂದಿ ಆರೋಪಿಗಳು ಪೊಲೀಸರಿಗೆ ಶರಣಾಗಿದ್ದಾರೆ ಎಂದು ವಿಶ್ವಸನೀಯ ಮೂಲಗಳಿಂದ ತಿಳಿದು ಬಂದಿದೆ.



ಗುರುವಾರ ಸಂಜೆ ಮೂರು ದ್ವಿಚಕ್ರ ವಾಹನಗಳಲ್ಲಿ ಬಂದು ಒಂಟಿಕೊಪ್ಪಲು ಮುಖ್ಯ ರಸ್ತೆ (ಕಾಳಿದಾಸ ರಸ್ತೆ) ಎರಡನೇ ಕ್ರಾಸ್ ಬಳಿ 'ಮೂನ್ ಡ್ರೆಸ್ ವೇರ್ಸ್' ಟೈಲರಿಂಗ್ ಅಂಗಡಿಯ ಮುಂದೆ ಮಾತನಾಡುತ್ತಾ ಕುಳಿತಿದ್ದ ಚಂದು ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಹತ್ಯೆಗೈಯ್ಯಲಾಗಿತ್ತು. ಈ ಪ್ರಕರಣದಲ್ಲಿ 8 ಮಂದಿ ಭಾಗಿಯಾಗಿದ್ದರು ಎಂದು ಪ್ರತ್ಯಕ್ಷದರ್ಶಿಗಳ ಮೂಲಕ ಪೊಲೀಸರಿಗೆ ಮಾಹಿತಿ ದೊರೆತಿತ್ತು.

2008ರಲ್ಲಿ ಹುಣಸೂರಿನಲ್ಲಿ ನಡೆದಿದ್ದ ಜೋಡಿ ಕೊಲೆ ಹಾಗೂ 2016ರಲ್ಲಿ ಪಡುವಾರಹಳ್ಳಿಯಲ್ಲಿ ನಡೆದಿದ್ದ ದೇವು ಹತ್ಯೆ ಪ್ರಕರಣದಲ್ಲಿ ಜೈಲು ಪಾಲಾಗಿದ್ದು, ನಂತರ ದೋಷಮುಕ್ತರಾಗಿದ್ದವರ ಪೈಕಿ ಗುರುವಾರ ಹತ್ಯೆಗೀಡಾದ ಚಂದು ಕೂಡ ಒಬ್ಬನಾಗಿದ್ದು, ಜೈಲಿನಿಂದ ಬಿಡುಗಡೆಯಾಗಿ ಬಂದ ನಂತರ ಯಾವುದೇ ದುಷ್ಕೃತ್ಯಗಳಿಗೆ ಕೈ ಹಾಕದೇ ಕುಟುಂಬದೊಂದಿಗೆ ನೆಮ್ಮದಿ ಜೀವನ ನಡೆಸುತ್ತಿದ್ದ ಎಂದು ರೌಡಿಶೀಟರ್ ಆಗಿದ್ದ ಈತನ ಮೇಲೆ ನಿಗಾ ವಹಿಸಿದ್ದ ಪೊಲೀಸರು ತಿಳಿಸಿದ್ದಾರೆ.

ಚಂದು ರೌಡಿಶೀಟರ್ ಆಗಿದ್ದರೂ ಜೈಲುವಾಸ ಅನುಭವಿಸಿ ಬಂದ ನಂತರ ಯಾವುದೇ ದುಷ್ಕೃತ್ಯಗಳಿಗೆ ಕೈ ಹಾಕದೇ ಇದ್ದುದ್ದರಿಂದ ಈತನಿಗೆ ಹೊಸ ವಿರೋಧಿಗಳು ಯಾರೂ ಇರಲು ಸಾಧ್ಯವಿಲ್ಲ. ಹಿಂದಿನ ಕೃತ್ಯಗಳಿಗೆ ಸಂಬಂಧಪಟ್ಟಂತೆ ಈತನ ಮೇಲೆ ದ್ವೇಷ ಸಾಧಿಸುತ್ತಿದ್ದವರೇ ಈ ಹತ್ಯೆ ಮಾಡಿರಬಹುದು ಎಂಬ ನಿಟ್ಟಿನಲ್ಲಿ ಪೊಲೀಸರು ತನಿಖೆ ಆರಂಭಿಸಿದ್ದರು. ಚಂದು ಹತ್ಯೆ ನಡೆದ ರಸ್ತೆಯು ವಾಣಿಜ್ಯ ರಸ್ತೆಯಾಗಿದ್ದು, ಹಲವು ಅಂಗಡಿ ಮಳಿಗೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ತ್ವರಿತಗತಿಯಲ್ಲಿ ತನಿಖೆ ಆರಂಭಿಸಿದ್ದ ಪೊಲೀಸರು, ಸಿಸಿ ಕ್ಯಾಮರಾ ಫುಟೇಜ್‌ಗಳನ್ನೂ ಪರಿಶೀಲಿಸಿ, ಮೂರು ದ್ವಿಚಕ್ರ ವಾಹನಗಳಲ್ಲಿ ಬಂದಿದ್ದ ಈ ಎಂಟು ಮಂದಿ ಬಗ್ಗೆ ಮಾಹಿತಿ ಹೊಂದಿದ್ದರು. ಬೈಕ್‌ಗಳಲ್ಲಿ ಬಂದವರು ನೇರವಾಗಿ ಟೈಲರ್ ಅಂಗಡಿ ಬಳಿ ಬಂದು ಕೆಲವೇ ಕ್ಷಣಗಳಲ್ಲಿ ಚಂದ್ರು ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿ, ಮಿಂಚಿನ ವೇಗದಲ್ಲಿ ಪರಾರಿಯಾಗಿದ್ದನ್ನು ಗಮನಿಸಿದರೆ ಹಂತಕರಿಗೆ ಯಾರೋ ಒಬ್ಬರು ಚಂದ್ರು ಬಗ್ಗೆ ನಿಖರ ಮಾಹಿತಿಯನ್ನು ನೀಡಿದ್ದು, ಅದರನ್ವಯ ಹಂತಕರು ಮಿಂಚಿನ ಕಾರ್ಯಾಚರಣೆ ನಡೆಸಿ ಚಂದ್ರುವನ್ನು ಕೊಂದಿದ್ದಾರೆ ಎಂದು ಪೊಲೀಸರು ಶಂಕಿಸಿದ್ದರು.

ಆರೋಪಿಗಳ ಪತ್ತೆಗಾಗಿ ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ, ಎನ್.ಆರ್. ಎಸಿಪಿ ಅಶ್ವತ್ಥನಾರಾಯಣ, ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ಮತ್ತು ಸಿಸಿಬಿ ಎಸಿಪಿ ಸಂದೇಶ್ ಕುಮಾರ್ ನೇತೃತ್ವದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ನಾಲ್ಕು ತಂಡಗಳನ್ನು ರಚಿಸಿದ್ದರು. ಈ ತಂಡಗಳು ಆರೋಪಿಗಳ ಸುಳಿವಿಗಾಗಿ ಹುಡುಕಾಟ ನಡೆಸುತ್ತಿದ್ದಾಗಲೇ ಇಂದು ರಾತ್ರಿ 8 ಮಂದಿ ವಕೀಲರ ನೆರವಿನೊಂದಿಗೆ ಪೊಲೀಸರಿಗೆ ಶರಣಾಗಿದ್ದಾರೆ ಎನ್ನಲಾಗಿದೆ.

ತಮಗೆ ಶರಣಾದವರ ವಶಕ್ಕೆ ಪಡೆದುಕೊಂಡಿರುವ ಪೊಲೀಸರು ಇವರೆಲ್ಲರೂ ನೈಜ ಹಂತಕರೇ? ಚಂದು ಹತ್ಯೆಗೆ ಕಾರಣವೇನು? ಹತ್ಯೆಯು ಪೂರ್ವ ನಿಯೋಜಿತ ಕೃತ್ಯವಾಗಿತ್ತೇ? ಈ ಹತ್ಯೆಯು ಸೇಡಿನಿಂದಾಗಿ ನಡೆದಿದೆಯೇ? ಇದರ ಹಿಂದೆ ಬೇರೆ ಯಾರಾದರೂ ಇದ್ದಾರೆಯೇ? ಎಂಬುದರ ಬಗ್ಗೆ ವಿಚಾರಣೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆದರೆ, ಈ ಪ್ರಕರಣದ ತನಿಖೆ ಪ್ರಗತಿಯಲ್ಲಿದೆ ಎಂದು ತಿಳಿಸಿರುವ ಪೊಲೀಸರು, ಆರೋಪಿಗಳು ಶರಣಾಗಿದ್ದಾರೆ ಎಂಬುದನ್ನು ಖಚಿತಪಡಿಸಿಲ್ಲ.

ಇಂದು, ನಾಳೆ ಸಿಇಟಿ

ಬೆಂಗಳೂರು: ವಿವಿಧ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ರಾಜ್ಯಾದ್ಯಂತ ನಾಳೆ ಮೇ 20 ಮತ್ತು 21ರಂದು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ ಇಂಜಿನಿಯರಿಂಗ್, ಕೃಷಿ ವಿಜ್ಞಾನ, ವೆಟರ್ನರಿ, ಫಾರ್ಮಸಿ, ನ್ಯಾಚುರೋಪಥಿ, ಯೋಗ ಹಾಗೂ ಬಿ.ಎಸ್ಸಿ ನರ್ಸಿಂಗ್ ಕೋರ್ಸ್ ಗಳಿಗೆ ನಡೆಯುವ ಪ್ರವೇಶಾತಿ ಪರೀಕ್ಷೆ ಇದಾಗಿದ್ದು ಇದರಲ್ಲಿ ಹಲವಾರು ವಿದ್ಯಾರ್ಥಿಗಳು ಭಾಗಿಯಾಗಲಿದ್ದಾರೆ. ರಾಜ್ಯಾದ್ಯಂತ 592 ಪರೀಕ್ಷಾ ಕೇಂದ್ರಗಳಲ್ಲಿ ಜರುಗುವ ಸಿಇಟಿ ಪರೀಕ್ಷೆ ಈ ಬಾರಿ 2 ಲಕ್ಷದ 61 ಸಾವಿರದ 610 ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆ ಹಾಜರಾಗಲಿದ್ದಾರೆ.

ಬೆಂಗಳೂರು ಸೇರಿದಂತೆ ಬೆಳಗಾವಿ, ವಿಜಯಪುರ, ಬಳ್ಳಾರಿ ಹಾಗೂ ಮಂಗಳೂರು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. 2.084 ಅರ್ಹ ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದಾರೆ. ಪರೀಕ್ಷೆ ನಡೆಸಲು 592 ವೀಕ್ಷಕರು, 1.184 ವಿಶೇಷ ಸ್ಕ್ವಾಡ್ 592 ಕಸ್ಟೋಡಿಯನ್ಸ್ ಸೇರಿದಂತೆ 23 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ನಿಯೋಜನೆ ಮಾಡಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಾಹಿತಿ ನೀಡಿದೆ.

ಪ್ರಶ್ನೆ ಪತ್ರಿಕೆಗಳನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮುದ್ರಿಸಲಾಗುವುದು ಎಂದು ಕೆಇಎ ತಿಳಿಸಿದೆ. ವ್ಯತ್ಯಾಸಗಳಿದ್ದಲ್ಲಿ, ಪ್ರಶ್ನೆ ಪತ್ರಿಕೆ ಮತ್ತು ಉತ್ತರಗಳ ಇಂಗ್ಲಿಷ್ ಆವೃತ್ತಿಯನ್ನು ಅಂತಿಮ ಆವೃತ್ತಿಯಾಗಿ ತೆಗೆದುಕೊಳ್ಳಲಾಗುತ್ತದೆ.


ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಮುನ್ನೆಚ್ಚರಿಕೆ: ನಾಳೆ ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ಇರುವ ಕಾರಣ ಸುತ್ತಮುತ್ತಲಿನ ಸಿಇಟಿ ಪರೀಕ್ಷಾ ಕೇಂದ್ರ ತಲುಪಬೇಕಿರುವ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟ್ವೀಟ್ ಮೂಲಕ ತಿಳಿಸಿದ್ದಾರೆ. ಈ ಸಂಬಂಧ ಶಿಕ್ಷಣ ಇಲಾಖೆ ಹಾಗೂ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಗಿದೆ ಅವರು ಹೇಳಿದ್ದಾರೆ.

ಮೈಸೂರಿನ 29 ಕೇಂದ್ರಗಳಲ್ಲಿ ಸಿಇಟಿ ನಡೆಯಲಿದ್ದು, ಸಕಲ ವ್ಯವಸ್ಥೆ ಮಾಡಲಾಗಿದೆ.



ನಾರಾಯಣ ನೇತ್ರಾಲಯ ಮುಖ್ಯಸ್ಥ ಡಾ. ಭುಜಂಗ ಶೆಟ್ಟಿ ಇನ್ನಿಲ್ಲ

ಬೆಂಗಳೂರು, ಮೇ 19– ನಾರಾಯಣ ನೇತ್ರಾಲಯದ ಮುಖ್ಯಸ್ಥರಾದ ಖ್ಯಾತ ನೇತ್ರ ತಜ್ಞ ಡಾ. ಕೆ. ಭುಜಂಗ ಶೆಟ್ಟಿ ಅವರು ಇಂದು (ಶುಕ್ರವಾರ) ರಾತ್ರಿ ಬೆಂಗಳೂರಿನ ಯಶವಂತಪುರದಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ಅವರಿಗೆ 69 ವರ್ಷ ವಯಸ್ಸಾಗಿತ್ತು. ಮೂಲತಃ ಕುಂದಾಪುರ ಸಮೀಪದ ಗ್ರಾಮವೊಂದರಲ್ಲಿ ಜನಿಸಿದ್ದ ಭುಜಂಗ ಶೆಟ್ಟರು, ಖ್ಯಾತ ನೇತ್ರ ತಜ್ಞರಾಗಿ ಹೆಸರು ಗಳಿಸಿದ್ದರು. ಆರೋಗ್ಯವಾಗೇ ಇದ್ದ ಅವರು, ಇಂದು ಸಂಜೆವರೆಗೂ ಆಸ್ಪತ್ರೆಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಿದ್ದರು. ಮನೆಗೆ ಬಂದ ನಂತರ ಸಂಜೆ 6 ಗಂಟೆ ಸುಮಾರಿನಲ್ಲಿ ಅವರಿಗೆ ಎದೆ ನೋವು ಕಾಣಿಸಿಕೊಂಡಿದ್ದು, ಕುಟುಂಬಸ್ಥರು ತಕ್ಷಣವೇ ಯಶವಂತಪುರದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಿದರಾದರೂ, ಚಿಕಿತ್ಸೆ ಫಲಕಾರಿಯಾಗದೇ ಹೃದಯಾಘಾತದಿಂದ ಭುಜಂಗ ಶೆಟ್ಟರು ಕೊನೆಯುಸಿರೆಳೆದರು. ಮೃತರು ಪತ್ನಿ ರಾಜ್‌ಕಮಲಾ ಶೆಟ್ಟಿ, ಪುತ್ರ ಡಾ. ನರನ್ ಶೆಟ್ಟಿ, ಪುತ್ರಿ ಡಾ. ನೈನಾ ಶೆಟ್ಟಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.





ಮೂರನೇ ಪುಟದಿಂದ

ಇಂದು ಪ್ರಮಾಣ ವಚನ

ಸಿದ್ದರಾಮಯ್ಯ, ಶಿವಕುಮಾರ್ ಸೇರಿದಂತೆ ಪಕ್ಷದ ಕೆಲ ನೂತನ ಶಾಸಕರು ಸಚಿವರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮಾರ್ಗದರ್ಶನದಂತೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯುತ್ತಿದೆ. ಈ ಸಮಾರಂಭದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ನಾಯಕರಲ್ಲದೆ, ಉಳಿದ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಆ ಪಕ್ಷದ ಮುಖ್ಯಮಂತ್ರಿಗಳು ಹಾಗೂ ಬಿಜೆಪಿಯೇತರ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸುತ್ತಿದ್ದಾರೆ. ಇದಕ್ಕಾಗಿ ಬೃಹತ್ ವೇದಿಕೆಯನ್ನೇ ಸೃಷ್ಟಿ ಮಾಡಲಾಗಿದೆ. ಈ ವೇದಿಕೆ ಮೂಲಕ ಬಿಜೆಪಿಗೆ ಪರೋಕ್ಷ ಎಚ್ಚರಿಕೆ ನೀಡುವ ಉದ್ದೇಶದಿಂದ ಕಾಂಗ್ರೆಸ್ ಗಣ್ಯಾತಿಗಣ್ಯರಿಗೆ ಆಹ್ವಾನ ನೀಡಿದೆ.

ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಅವರಲ್ಲದೆ, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್, ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಸೇರಿದಂತೆ ದೇಶದ ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ. ರಾಜಸ್ತಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಛತ್ತೀಸ್‌ಘಡ್ ಮುಖ್ಯಮಂತ್ರಿ ಭೂಪೇಶ್ ಬಗೆಲ್, ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು, ಪಾಂಡಿಚೇರಿಯ ಮುಖ್ಯಮಂತ್ರಿ ಎನ್.ರಂಗಸ್ವಾಮಿ ಆಗಮಿಸಲಿದ್ದಾರೆ. ಪಶ್ಚಿಮಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಈ ಮೊದಲು ಸಮಾರಂಭಕ್ಕೆ ಆಗಮಿಸಲು ಸಮ್ಮತಿಸಿದ್ದರು. ಆದರೆ, ಕೊನೆ ಗಳಿಗೆಯಲ್ಲಿ ತಮ್ಮ ಬದಲಿಗೆ ಟಿಎಂಸಿ ಪ್ರತಿನಿಧಿಯಾಗಿ ಹಿರಿಯ ನಾಯಕ ಕಾಕೋಲಿ ಘೋಷ್ ದಸ್ತಿದಾರ್ ಅವರನ್ನು ಕಳುಹಿಸುತ್ತಿದ್ದಾರೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಖುದ್ದಾಗಿ ಬಿಜೆಪಿಯೇತರ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ವಿವಿಧ ರಾಜ್ಯಗಳಲ್ಲಿರುವ ನಾಯಕರನ್ನು ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಆಹ್ವಾನಿಸಿದ್ದಾರೆ. 2014 ಮತ್ತು 2019ರಲ್ಲಿ ಮೋದಿ ನೇತೃತ್ವದ ಬಿಜೆಪಿ ಸತತವಾಗಿ ದೇಶದ ಅಧಿಕಾರ ಸೂತ್ರ ಹಿಡಿದಿರುವುದರಿಂದ ಕಾಂಗ್ರೆಸ್ ಮತ್ತು ಬಿಜೆಪಿಯೇತರ ಶಕ್ತಿಗಳು ತಲ್ಲಣಗೊಂಡಿದ್ದು, 2024ರ ಲೋಕಸಭಾ ಚುನಾವಣೆಯಲ್ಲಿ ಶತಾಯಗತಾಯ ಮೋದಿ ಬಳಗವನ್ನು ಮಣಿಸಿ,ದೇಶದ ಅಧಿಕಾರ ಸೂತ್ರ ಹಿಡಿಯಬೇಕು ಎಂದು ತೀರ್ಮಾನಿಸಿವೆ. ಇದೇ ಕಾರಣಕ್ಕಾಗಿ ಶನಿವಾರ ನಡೆಯಲಿರುವ ಪ್ರಮಾಣ ವಚನ ಸಮಾರಂಭ ಬಿಜೆಪಿಯೇತರ ಶಕ್ತಿಗಳ ಪಾಲಿಗೆ ಮಹತ್ವದ ವೇದಿಕೆಯನ್ನಾಗಿ ಪರಿಗಣಿಸಲಾಗಿದೆ. ಭಾರೀ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಆಗಮಿಸುವ ಹಿನ್ನೆಲೆಯಲ್ಲಿ ಕ್ರೀಡಾಂಗಣಕ್ಕೆ ಸೂಕ್ತ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಅತೀ ಗಣ್ಯರು, ಗಣ್ಯರಿಗೆ ಪ್ರತ್ಯೇಕ ಪ್ರವೇಶ ಹಾಗೂ ಆಸನದ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರಿಗೂ ಸಾಕಷ್ಟು ಅವಕಾಶ ಕಲ್ಪಿಸಿದ್ದು, ಪ್ರಮಾಣ ವಚನ ಸ್ವೀಕಾರಕ್ಕೆ ಕ್ರೀಡಾಂಗಣವನ್ನು ಸಕಲ ರೀತಿಯಲ್ಲೂ ಸಜ್ಜುಗೊಳಿಸಲಾಗಿದೆ.

ಸಿಎಂ, ಡಿಸಿಎಂ ಜೊತೆ 28 ಮಂದಿ ಸಚಿವರೂ ಪ್ರಮಾಣ

ಬೆಂಗಳೂರು, ಮೇ 19(ಕೆಎಂಶಿ)–ಕೂಡಲೇ ಜನತೆಗೆ ನೀಡಿರುವ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು, ಲೋಕಸಭಾ ಚುನಾವಣೆ ವೇಳೆಗೆ ಸರ್ಕಾರ ಜನಪರವಾಗಿದೆ ಎಂಬುದನ್ನು ಸಾಬೀತುಪಡಿಸಲು ನಿಯೋಜಿತ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಪೂರ್ಣ ಪ್ರಮಾಣದಲ್ಲಿ ಸಂಪುಟ ರಚಿಸುತ್ತಿದ್ದಾರೆ.

ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರ ಸಲಹೆಯಂತೆ ತಾವು ಹಾಗೂ ಉಪ ಮುಖ್ಯಮಂತ್ರಿ ಸ್ಥಾನಕ್ಕೆ ನಿಯೋಜಿತರಾಗಿರುವ ಡಿ.ಕೆ.ಶಿವಕುಮಾರ್ ಅವರಲ್ಲದೆ, 28 ಮಂದಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ನಾಲ್ಕು ಸ್ಥಾನಗಳನ್ನು ಖಾಲಿ ಉಳಿಸಿಕೊಂಡು ಉಳಿದಂತೆ ಸಂಪುಟದಲ್ಲಿ ಪ್ರಾದೇಶಿಕತೆ, ಜಾತಿ ಸೇರಿದಂತೆ ಎಲ್ಲಾ ರೀತಿಯಲ್ಲೂ ಪ್ರಾತಿನಿಧ್ಯ ಕಲ್ಪಿಸಿ ಸಂಪುಟ ರಚನೆ ಮಾಡಲಾಗುತ್ತಿದೆ. ಮಂತ್ರಿಮಂಡಲ ರಚನೆಗೆಂದು ದೆಹಲಿಗೆ ಅಲೆಯುವುದು ಬೇಡ. ಅಧಿಕಾರ ವಹಿಸಿಕೊಂಡ ತಕ್ಷಣ ಜನರ ಕೆಲಸ ಮಾಡಿ. ನಿಮಗೆ ಏನು ಮಾರ್ಗದರ್ಶನದ ಅವಶ್ಯಕತೆ ಇದೆಯೋ ಅದನ್ನು ಒಮ್ಮೆಗೆ ಪಡೆದುಕೊಂಡು ಹೋಗಿ ಎಂದು ಸಿದ್ದರಾಮಯ್ಯ ಹಾಗೂ ಶಿವಕುಮಾರ್‌ಗೆ ಕಿವಿಮಾತು ಹೇಳಿದ್ದಾರೆ.

ರಾಹುಲ್ ಸಲಹೆಯಂತೆ ದೆಹಲಿಗೆ ವಿಶೇಷ ವಿಮಾನದಲ್ಲಿ ತೆರಳಿದ್ದ ಉಭಯ ನಾಯಕರು ಇಂದು ಇಡೀ ದಿನ ವರಿಷ್ಠರೊಂದಿಗೆ ಸಮಾಲೋಚಿಸಿ, ಮಂತ್ರಿ ಮಂಡಲ ಸೇರುವ ಶಾಸಕರ ಪಟ್ಟಿಯೊಂದಿಗೆ ಹಿಂದಿರುಗಿದ್ದಾರೆ.

ಶನಿವಾರ ಬೆಳಿಗ್ಗೆ 12.30ಕ್ಕೆ ಪ್ರಮಾಣ ವಚನ ಸಮಾರಂಭ ನಡೆಯಲಿದ್ದು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳ ಜೊತೆಗೆ ನೂತನ ಸಚಿವರು ಅಧಿಕಾರ ಹಾಗೂ ಗೌಪ್ಯತೆಯ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಶನಿವಾರ ಸಿದ್ದರಾಮಯ್ಯ ಅವರ ಸಂಪುಟಕ್ಕೆ ಸೇರಲಿರುವ ಸಂಭಾವ್ಯ ಸಚಿವರ ಪಟ್ಟಿ ಇಂತಿದೆ:

ಡಾ.ಜಿ.ಪರಮೇಶ್ವರ್	**–ತುಮಕೂರು**
ಬಿ.ಕೆ.ಹರಿಪ್ರಸಾದ್	**–ದಕ್ಷಿಣ ಕನ್ನಡ**
ಎಂ.ಬಿ.ಪಾಟೀಲ್	**–ಬಿಜಾಪುರ**
ಕೆ.ಜೆ.ಜಾರ್ಜ್	**–ಬೆಂಗಳೂರು**
ಕೃಷ್ಣ ಭೈರೇಗೌಡ	**–ಬೆಂಗಳೂರು**
ರಾಮಲಿಂಗಾರೆಡ್ಡಿ	**–ಬೆಂಗಳೂರು**
ಪ್ರಿಯಾಕೃಷ್ಣ	**–ಬೆಂಗಳೂರು**
ಸತೀಶ್ ಜಾರಕಿಹೊಳಿ	**–ಬೆಳಗಾವಿ**
ಲಕ್ಷ್ಮೀ ಹೆಬ್ಬಾಳ್ಕರ್	**–ಬೆಳಗಾವಿ**
ಲಕ್ಷ್ಮಣ ಸವದಿ	**–ಬೆಳಗಾವಿ**
ಶರಣಪ್ರಕಾಶ ಪಾಟೀಲ್	**–ಗುಲ್ಬರ್ಗ**
ಪ್ರಿಯಾಂಕ ಖರ್ಗೆ	**–ಗುಲ್ಬರ್ಗ**
ಬಸವರಾಜ ರಾಯರೆಡ್ಡಿ	**–ಕೊಪ್ಪಳ**
ಕೆ.ಎಂ.ಶಿವಲಿಂಗೇಗೌಡ	**–ಹಾಸನ**
ಎಸ್.ಎಸ್.ಮಲ್ಲಿಕಾರ್ಜುನ	**–ದಾವಣಗೆರೆ**
ಮಧುಬಂಗಾರಪ್ಪ	**–ಶಿವಮೊಗ್ಗ**
ವಿಜಯಾನಂದಕಾಶಪ್ಪನವರ್	**–ಬಾಗಲಕೋಟೆ**
ವಿನಯ ಕುಲಕರ್ಣಿ	**–ಧಾರವಾಡ**
ಹೆಚ್.ಸಿ.ಮಹದೇವಪ್ಪ	**–ಮೈಸೂರು**
ಪುಟ್ಟರಂಗಶೆಟ್ಟಿ	**–ಚಾಮರಾಜನಗರ**
ಪೊನ್ನಣ್ಣ	**–ಕೊಡಗು**
ಶಿವರಾಜ ತಂಗಡಗಿ	**–ಕೊಪ್ಪಳ**
ಚಲುವರಾಯಸ್ವಾಮಿ ಇಲ್ಲವೇ ನರೇಂದ್ರಸ್ವಾಮಿ	**–ಮಂಡ್ಯ**
ಅಜಯ್ ಧರ್ಮಸಿಂಗ್	**–ಯಾದಗಿರಿ**
ರೂಪಕಲಾ ಶಶಿಧರ್ ಇಲ್ಲವೇ ಕೆ.ಹೆಚ್.ಮುನಿಯಪ್ಪ	

ಜಮೀರ್ ಅಹ್ಮದ್ ಖಾನ್, ಎನ್.ಎ.ಹ್ಯಾರೀಸ್, ಯು.ಟಿ.ಖಾದರ್ ಮತ್ತು ಸಲೀಂ ಅಹ್ಮದ್ ಅವರ ಪೈಕಿ ಮೂವರಿಗೆ ಸಂಪುಟದಲ್ಲಿ ಅವಕಾಶ ದೊರೆಯಲಿದೆ. **ಹೆಚ್.ಕೆ.ಪಾಟೀಲ್, ಆರ್.ವಿ.ದೇಶಪಾಂಡೆ ಹಾಗೂ ಟಿ.ಬಿ.ಜಯಚಂದ್ರ** ಅವರ ಪೈಕಿ ಒಬ್ಬರು ವಿಧಾನಸಭೆಯ ಅಧ್ಯಕ್ಷರಾಗುವುದು ಬಹುತೇಕ ಖಚಿತ.

2000 ರೂ. ನೋಟು ಹಿಂಪಡೆದ ಆರ್‌ಬಿಐ

3.62 ಲಕ್ಷ ಕೋಟಿಗಳಷ್ಟಿತ್ತು. ಅಂದರೆ ಒಟ್ಟು ನೋಟುಗಳ ಪೈಕಿ ಸದ್ಯ ಶೇ.10.8ರಷ್ಟು ವಹಿವಾಟಿದೆ. ಕ್ಲೀನ್ ನೋಟು ಅಭಿಯಾನದಡಿ ಕ್ರಮ ಕೈಗೊಂಡು, ತಕ್ಷಣದಿಂದಲೇ ಜಾರಿಗೆ ಬರುವಂತೆ ಗ್ರಾಹಕರಿಗೆ 2000 ರೂ. ನೋಟುಗಳ ವಿತರಣೆಯನ್ನು ಸ್ಥಗಿತಗೊಳಿಸಬೇಕು ಎಂದು ಬ್ಯಾಂಕ್‌ಗಳಿಗೆ ಸೂಚನೆ ನೀಡಲಾಗಿದೆ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

500 ಮತ್ತು 1,000 ಮುಖಬೆಲೆಯ ನೋಟುಗಳನ್ನು ರದ್ದು ಮಾಡಿದ ನಂತರ ದೇಶದಲ್ಲಿ ಕರೆನ್ಸಿ ಅಗತ್ಯವನ್ನು ಪೂರೈಸುವ ಸಲುವಾಗಿ 2000 ರೂ. ಮುಖಬೆಲೆಯ ನೋಟನ್ನು ಪರಿಚಯಿಸಲಾಯಿತು. ಇದನ್ನು ಚಲಾವಣೆಗೆ ತಂದಾಗಲೇ ಭವಿಷ್ಯದಲ್ಲಿ ಇದನ್ನು ಬ್ಯಾನ್ ಮಾಡಲಾಗುವುದು ಎಂಬ ಮಾಹಿತಿ ನೀಡಲಾಗಿತ್ತು. ಈ ನೋಟುಗಳ ಕಾಲಾವಧಿ 4–5 ವರ್ಷ ಮಾತ್ರ ಎಂದು ಹೇಳಲಾಗಿತ್ತು. ಈ ನಿಟ್ಟಿನಲ್ಲಿ ಜಮೆ ಆದ 2000 ರೂ. ನೋಟುಗಳನ್ನು ಮತ್ತೆ ಯಾರಿಗೂ ವಿತರಿಸದಂತೆ ಬ್ಯಾಂಕ್‌ಗಳ ಕೇಂದ್ರ ಕಚೇರಿಗಳಿಗೆ ಮೌಖಿಕ ಸೂಚನೆ ನೀಡಲಾಗಿತ್ತು. ಹೀಗಾಗಿ, ಈ ನೋಟುಗಳನ್ನು ಹಿಂಪಡೆಯಲಾಗುತ್ತಿದೆ. ಜತೆಗೆ ಡಿಜಿಟಲ್ ವಹಿವಾಟು ಹೆಚ್ಚು ಮಾಡಲು ನಿರ್ಧರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಇತರ ಮುಖಬೆಲೆಯ ನೋಟುಗಳು ಅಗತ್ಯ ಪ್ರಮಾಣದಲ್ಲಿ ಲಭ್ಯ ಇರುವುದರಿಂದ 2 ಸಾವಿರ ಮುಖಬೆಲೆಯ ನೋಟುಗಳ ಚಲಾವಣೆ ಅಗತ್ಯವಿಲ್ಲ ಎಂದು ಆರ್‌ಬಿಐ ಈ ನಿರ್ಧಾರ ತೆಗೆದುಕೊಂಡಿದೆ. ಒಮ್ಮೆಗೆ 20 ಸಾವಿರದ ಮಿತಿ ಹೇರಿರುವುದರಿಂದ ಅಪಾರ ಪ್ರಮಾಣದ ನೋಟು ಇಟ್ಟುಕೊಂಡವರಿಗೆ ತೊಂದರೆಯಾಗಬಹುದು. ಆದರೆ ಠೇವಣಿ ಅಥವಾ ಬದಲಾವಣೆಗೆ ಸೆಪ್ಟೆಂಬರ್ 30ರವರೆಗೂ ಕಾಲಾವಕಾಶ ಇರುವುದರಿಂದ ಗಂಭೀರ ಸಮಸ್ಯೆ ಎದುರಾಗುವುದಿಲ್ಲ ಎನ್ನಲಾಗಿದೆ.

ಜನರ ಸಮಸ್ಯೆ ಆಲಿಸಲು ವಿನೂತನ ಕ್ರಮ

ಬೂತ್ ಅಧ್ಯಕ್ಷರ ಮನೆ ಮುಂದೆ ದೂರು, ಸಲಹಾ ಪೆಟ್ಟಿಗೆ

ಕಾರ್ಯಕರ್ತರು, ಹಿತೈಷಿಗಳಿಗೆ ಕೃತಜ್ಞತೆ ಸಲ್ಲಿಸಿದ ಕೆ.ಆರ್. ಕ್ಷೇತ್ರದ ನೂತನ ಶಾಸಕ ಟಿ.ಎಸ್. ಶ್ರೀವತ್ಸ



ಮೈಸೂರು, ಮೇ 19 (ಎಂಟಿವೈ)– ಕೆ.ಆರ್.ಕ್ಷೇತ್ರದ ಜನರ ಸಮಸ್ಯೆಯನ್ನು ಆಲಿಸಿ ಬಗೆಹರಿಸುವುದಕ್ಕಾಗಿ ಕ್ಷೇತ್ರದ 265 ಬೂತ್ ವ್ಯಾಪ್ತಿಯಲ್ಲೂ ಬೂತ್ ಅಧ್ಯಕ್ಷರ ಮನೆ ಮುಂದೆ ದೂರು ಹಾಗೂ ಸಲಹಾ ಪೆಟ್ಟಿಗೆ ಇಡುವುದಾಗಿ ಕೆಆರ್.ಕ್ಷೇತ್ರದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದ್ದಾರೆ.

ಮೈಸೂರಿನ ರಾಜೇಂದ್ರ ಕಲಾಮಂದಿರದಲ್ಲಿ ಶುಕ್ರವಾರ ಕೆ.ಆರ್.ಕ್ಷೇತ್ರದಲ್ಲಿ ಗೆಲುವು ಸಾಧಿಸಲು ಕಾರಣರಾದ 'ಕಾರ್ಯಕರ್ತರು, ಹಿತೈಷಿಗಳಿಗೆ' ಕೃತಜ್ಞತಾ ಸಮಾವೇಶವನ್ನು ಕಾರ್ಯಕರ್ತರ ಮೇಲೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದರು.

ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಶಾಸಕರ ಕಚೇರಿಗೆ ಅಲೆಯುವುದನ್ನು ತಪ್ಪಿಸಲು ಕೆ.ಆರ್.ಕ್ಷೇತ್ರದ 265 ಬೂತ್ ಅಧ್ಯಕ್ಷರ ಮನೆ ಮುಂದೆ ಒಂದು ತಿಂಗಳ ಒಳಗೆ ಸಲಹಾ ಪೆಟ್ಟಿಗೆ ಸ್ಥಾಪಿಸುತ್ತೇನೆ. ಜನರು ಅಲ್ಲಿ ಸಮಸ್ಯೆಗಳನ್ನು ಬರೆದು ಹಾಕಬಹುದು. 19 ವಾರ್ಡ್ ಅಧ್ಯಕ್ಷರು ಇದನ್ನು ನಿರ್ವಹಿಸುತ್ತಾರೆ. ಇದರಿಂದ ಬೂತ್ ಅಧ್ಯಕ್ಷರು ಸಾರ್ವಜನಿಕರ ಸಂಪರ್ಕಕ್ಕೆ ಬರುತ್ತಾರೆ. ಅಲ್ಲದೇ ನೇರವಾಗಿ ತಮನ್ನು ಸಂಪರ್ಕಿಸಿ ತಮ್ಮ ಕೆಲಸಗಳನ್ನು ಮಾಡಲು ನೆರವಾಗುತ್ತದೆ ಎಂದರು.

ನಾಲ್ಕೈದು ತಿಂಗಳಲ್ಲಿ ಜೆ.ಪಿ.ನಗರವನ್ನು ಕಸಮುಕ್ತ ಬಡಾವಣೆಯಾಗಿ ಮಾರ್ಪಡಿಸಲು ಶ್ರಮಿಸುತ್ತೇನೆ. ಕಸ ತೆರವು ಮಾಡಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಶೀಘ್ರ ಟೆಂಡರ್ ಕರೆದು ಹಲವು ವರ್ಷಗಳಿಂದ ನಾಗರಿಕರು ಅನುಭವಿಸುತ್ತಿರುವ ನರಕಯಾತನೆಯನ್ನು ನಿವಾರಿಸುತ್ತೇನೆ. ರಸ್ತೆ ಡಾಂಬರೀಕರಣ ಸಂಬಂಧ ಲೋಕೋಪಯೋಗಿ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ ವಿವೇಕಾನಂದನಗರದಿಂದ ಭ್ರಮರಾಂಭ ಛತ್ರದವರೆಗೆ ತ್ವರಿತಗತಿಯಲ್ಲಿ ಡಾಂಬರೀಕರಣ ಮಾಡುವಂತೆ ಸೂಚಿಸಿದ್ದೇನೆ. ಎಲ್ಲ ಸಾರ್ವಜನಿಕ ಕೆಲಸಗಳು ವೇಗ ಪಡೆದುಕೊಳ್ಳಲಿದೆ ಎಂದು ತಿಳಿಸಿದರು.

ಪಾದಯಾತ್ರೆ ಮಾಡಬೇಕಾದರೆ ಕೃಷ್ಣಮೂರ್ತಿಪುರಂನಲ್ಲಿ ವಯೋವೃದ್ಧರೊಬ್ಬರು ವೀಳ್ಯದಲೆ ಮೇಲೆ 500 ರೂ. ಕೊಟ್ಟು ಆಶೀರ್ವಾದ ಮಾಡಿದರು. ಜಯನಗರದಲ್ಲಿ ವ್ಯಕ್ತಿಯೊಬ್ಬರು 1500 ರೂ. ನೀಡಿದರು. ಸಿದ್ಧಾರ್ಥ ಬಡಾವಣೆಯಲ್ಲಿ ಪ್ರಿಂಟಿಂಗ್ ಪ್ರೆಸ್ ಕಾರ್ಮಿಕ 500 ರೂ. ಕೊಟ್ಟ, ಹೀಗೆ ನೂರಾರು ಕಾರ್ಯಕರ್ತರು ತನು ಮನ ಧನ ಸಹಾಯ ಮಾಡಿದರು. ನನ್ನ ಗೆಲುವಿಗಾಗಿ ಹಲವು ಕಾರ್ಯಕರ್ತರು ಹರಕೆ ಹೊತ್ತಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಮಾಜಿ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಚುನಾವಣೆಯಲ್ಲಿ ಬಿಜೆಪಿ ಸೋಲು ಅನುಭವಿಸಿದೆ. ಈ ಫಲಿತಾಂಶ ನಮಗೆಲ್ಲರಿಗೂ ಜವಾಬ್ದಾರಿಯಿಂದ ಕೆಲಸ ಮಾಡುವಂತೆ ಎಚ್ಚರಿಕೆ ನೀಡಿದೆ.

> ಈ ಚುನಾವಣೆಯಲ್ಲಿ ಸ್ಪರ್ಧಿಸಲು ನಾನು ಆಕಾಂಕ್ಷಿಯಾಗಿರಲಿಲ್ಲ. ಕ್ಷೇತ್ರದ ಕಾರ್ಯಕರ್ತರು ನನ್ನ ಹೆಸರು ಸೂಚಿಸಿದ್ದರಿಂದ ಟಿಕೆಟ್ ದೊರೆಯಿತು. ಹಗಲು, ರಾತ್ರಿ ನನ್ನ ಪರವಾಗಿ ಕೆಲಸ ಮಾಡಿದರು. ಕಾಂಗ್ರೆಸ್ ಪರವಾದ ಅಲೆಯಿದ್ದರೂ ನನ್ನ ಗೆಲ್ಲಿಸಿದರು. ಇದರ ಸಂಪೂರ್ಣ ಶ್ರೇಯಸ್ಸು ಕಾರ್ಯಕರ್ತರಿಗೆ ಸಲ್ಲಬೇಕು. ಆದರೂ ಚುನಾವಣೆ ವೇಳೆ ನನ್ನ ವಿರುದ್ಧ ಕುತಂತ್ರ ನಡೆಯಿತು. ವಿಡಿಯೋ ಹರಿಯಬಿಡಲಾಯಿತು. 40 ಸಾವಿರ ಮನೆಗಳಿಗೆ ಪತ್ರಗಳನ್ನು ಕಳುಹಿಸಲಾಯಿತು. ಅದರಲ್ಲಿ ಯಾವ ಬಂಡವಾಳವೂ ಇರಲಿಲ್ಲ. ಆ ಪತ್ರವನ್ನು ಹರಿದು ಎಸೆದರು. ನನ್ನನ್ನು ಗೆಲ್ಲಿಸಿದರು.
> – ಟಿ.ಎಸ್.ಶ್ರೀವತ್ಸ, ಕೆ.ಆರ್.ಕ್ಷೇತ್ರದ ನೂತನ ಶಾಸಕ

ಪಾಲಿಕೆಯ ಚುನಾವಣೆಯಲ್ಲಿ 19 ವಾರ್ಡ್‌ಗಳಲ್ಲೂ ಜಯ ಸಾಧಿಸುವ ಗುರಿ ಹೊಂದಬೇಕು. ಕೆ.ಆರ್.ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲಲು ನಾವು ಮಾಡಿದ ಕಾರ್ಯಕ್ರಮಗಳು ಕಾರಣವಾಗಿವೆ. ಬೂತ್ ಸಶಕ್ತಿಕರಣ. ಕಾರ್ಯಕರ್ತರು ಮನೆ ಮನೆಗೆ ತೆರಳಿ ಯೋಗಕ್ಷೇಮ ವಿಚಾರಿಸಿದ್ದು, 70 ಸಾವಿರ ಮನೆಗಳಿಗೆ ರಾಜ್ಯ, ಕೇಂದ್ರ ಸರ್ಕಾರಗಳ ವಿವಿಧ ಕಾರ್ಯಕ್ರಮ ತಲುಪಿಸಿದ್ದು ಗೆಲುವಿಗೆ ಪೂರಕವಾಗಿ ಕೆಲಸ ಮಾಡಿದೆ. ಕ್ಷೇತ್ರದ ಪೂರ್ಣ ರಸ್ತೆ ಡಾಂಬರೀಕರಣ ಆಗಿದೆ. 8 ಸಾವಿರ ಜನರಿಗೆ ಮನೆ ನೀಡಲಾಯಿತು. 18 ಕೋಟಿ ರೂ. ವೆಚ್ಚದಲ್ಲಿ ಉದ್ಯಾನಗಳ ಅಭಿವೃದ್ಧಿಯಾಗಿದೆ. ಅಲ್ಪಸ್ವಲ್ಪ ಕೆಲಸ ಉಳಿದಿದೆ. ಅಧಿಕಾರದಲ್ಲಿ ಕಾಂಗ್ರೆಸ್ ಸರ್ಕಾರ ಇದೆ. ಸವಾಲಿನ ನಡುವೆ ನೂತನ ಶಾಸಕರು ಕೆಲಸ ಮಾಡಬೇಕಾಗಿದೆ ಎಂದರು.

ಹಲವು ವರುಷಗಳ ಕಾಲ ದುಡಿಮೆ ಮಾಡಿ, ಭೂಮಿಯನ್ನು ಉತ್ತು ಬಿತ್ತು ಹದ ಮಾಡಿ ಬಿತ್ತನೆ ಮಾಡಿ ಫಲ ಬಂದು ಊಟಕ್ಕೆ ಕುಂತಾಗ ನನ್ನನ್ನು ಅಲ್ಲಿಂದ ಎಬ್ಬಿಸಿದರಲ್ಲ ಎಂದು ಬೇಸರವಿದೆ. ಆದರೆ, 30 ವರ್ಷಗಳ ಹಿಂದೆ ಸಾಮಾನ್ಯ ಕಾರ್ಯಕರ್ತನನ್ನು ಶಾಸಕನಾಗಿ ಮಾಡಿ ಮಂತ್ರಿ ಮಾಡಿ ಸೇವೆ ಮಾಡಲು ಪಕ್ಷ ಅವಕಾಶ ನೀಡಿದ್ದನ್ನು ಮರೆಯಲಾಗುವುದೇ? ನೋವಾದರೂ ಪಕ್ಷದ ವಿರುದ್ಧ ಹೋಗಲಿಲ್ಲ ಎಂದು ಹೇಳಿದರು.

ಕೆ.ಆರ್.ಕ್ಷೇತ್ರದ ಪ್ರಭಾರಿ ವೀರೇಂದ್ರ ಶಾ ಮಾತನಾಡಿ, ಕೆ.ಆರ್.ಕ್ಷೇತ್ರದ ಮತದಾರರು ಉಚಿತ ಘೋಷಣೆಗಳಿಗೆ ಮರುಳಾಗದೇ ರಾಷ್ಟ್ರೀಯ ಉದ್ದೇಶಕ್ಕೆ ಮತ ನೀಡಿರುವುದಕ್ಕೆ ಕೃತಜ್ಞರಾಗಿದ್ದೇವೆ. ಈ ಫಲಿತಾಂಶ ಪಾಲಿಕೆ ಚುನಾವಣೆಗೆ ದಿಕ್ಸೂಚಿಯಾಗಿದೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಕೇಶವ ಪ್ರಸಾದ್ ಮಾತನಾಡಿದರು. ಬಿಜೆಪಿ ಉಪಾಧ್ಯಕ್ಷ ಎಂ.ರಾಜೇಂದ್ರ, ಸಿದ್ದರಾಜು, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಕೆ.ಆರ್. ಮಂಡಲದ ಅಧ್ಯಕ್ಷ ವಡಿವೇಲು, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪಾ, ನಿಗಮ ಮಂಡಳಿ ಮಾಜಿ ಅಧ್ಯಕ್ಷರಾದ ರಘು ಕೌಟಿಲ್ಯ, ಯಶಸ್ವಿ ಸೋಮಶೇಖರ್, ಶಿವಕುಮಾರ್, ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಮೈಸೂರು ನಗರ ಬ್ರಾಹ್ಮಣರ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಮೈಸೂರಿನ ಖ್ಯಾತ ಉದ್ಯಮಿ ಗೋವಿಂದೇಗೌಡರ ಹುಟ್ಟುಹಬ್ಬದ ಅಂಗವಾಗಿ ಅವರನ್ನು 'ರಿಂಯೋ ಮೆರಿಡಿಯನ್' ಸಿಬ್ಬಂದಿ ಹಾಗೂ ಅವರ ಕುಟುಂಬ ವರ್ಗ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಪ್ರವೀಣ್‌ಕುಮಾರ್ ಸಿ., ಅಶೋಕ್, ವೀಣಾ ಅಶೋಕ್, ಅರುಣ್ ಇತರರು ಉಪಸ್ಥಿತರಿದ್ದರು.

ಮೈಸೂರಿನ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಇಂದಿನಿಂದ ಪರದೆ ಮೇಲೆ 'ಐಪಿಎಲ್' ಧಮಾಕ

ಮೈಸೂರು, ಮೇ 19(ಎಂಟಿವೈ)– ಮೈಸೂರು ವಿಶ್ವವಿದ್ಯಾವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ಫುಟ್ಬಾಲ್ ಮೈದಾನದಲ್ಲಿ ಮೇ 20 ಮತ್ತು 21ರಂದು ಐಪಿಎಲ್ ಪಂದ್ಯಾವಳಿಯ ನಾಲ್ಕು ಪಂದ್ಯವನ್ನು ದೊಡ್ಡ ಪರದೆ ಮೇಲೆ ವೀಕ್ಷಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ಕೆಸಿಎ ಮೈಸೂರು ಘಟಕದ ಸಂಚಾಲಕ ಹರಿಕೃಷ್ಣಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಐಪಿಎಲ್ ಪಂದ್ಯಾವಳಿಯ ಕೆಲ ಪಂದ್ಯಗಳನ್ನು ಬೃಹತ್ ಪರದೆ ಮೇಲೆ ಬಿತ್ತರಿಸುವ ಪ್ರಯತ್ನ ಮಾಡಲಾಗುತ್ತಿದೆ. ದೊಡ್ಡ ಪರದೆಯನ್ನು ಅಳವಡಿಸಿ, ಆ ಮೂಲಕ ಕ್ರಿಕೆಟ್ ಪಂದ್ಯ ವೀಕ್ಷಣೆ ಮಾಡುವುದರಿಂದ ಪ್ರೇಕ್ಷಕರಿಗೆ ಮೈದಾನದಲ್ಲಿ ನೇರವಾಗಿ ಪಂದ್ಯ ವೀಕ್ಷಣೆಯ ಅನುಭವ ಸಿಗಲಿದೆ. ಎಲ್ಲರಿಗೂ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದರು.

ಈ ಬಾರಿಯ ಐಪಿಎಲ್ ಪಂದ್ಯಾವಳಿ ಅತಿ ಹೆಚ್ಚು ಜನಪ್ರಿಯತೆ ಗಳಿಸಿದೆ. ಪಂದ್ಯಾವಳಿ ನಡೆಯುವ ಸ್ಟೇಡಿಯಂಗೆ ಹೋಗಿ ಪಂದ್ಯ ವೀಕ್ಷಿಸಲು ಸಾಧ್ಯವಾಗದವರಿಗಾಗಿ ಈ ವ್ಯವಸ್ಥೆ ಮಾಡಲಾಗಿದೆ. ರಾಜ್ಯದಲ್ಲಿ ಮೈಸೂರು ಮತ್ತು ಹುಬ್ಬಳ್ಳಿಯಲ್ಲಿ ದೊಡ್ಡ ಪರದೆ ಮೇಲೆ ಕ್ರಿಕೆಟ್ ಪಂದ್ಯದ ನೇರಪ್ರಸಾರ ವೀಕ್ಷಿಸಬಹುದಾಗಿದೆ. ಮೈದಾನದಲ್ಲಿ ಸಂಗೀತ, ಫುಡ್ ಸ್ಟಾಲ್‌ಗಳು, ಪಾನೀಯ ಮಳಿಗೆ ಇರಲಿವೆ. ಹೀಗಾಗಿ ಕ್ರಿಕೆಟ್ ಅಭಿಮಾನಿಗಳು ಪ್ರಯೋಜನ ಪಡೆಯುವಂತೆ ಸಲಹೆ ನೀಡಿದರು.

ಮೊದಲ ದಿನ ಶನಿವಾರ (ಮೇ 20) ಮಧ್ಯಾಹ್ನ 3.30ಕ್ಕೆ ಡೆಲ್ಲಿ ಕ್ಯಾಪಿಟಲ್ಸ್–ಚೆನ್ನೈ ಸೂಪರ್ ಕಿಂಗ್ಸ್, ಸಂಜೆ 7.30ಕ್ಕೆ ಕೋಲ್ಕತಾ ನೈಟ್ ರೈಡರ್ಸ್–ಲಕ್ನೊ ಸೂಪರ್ ಜೈಂಟ್ ನಡುವಿನ ಪಂದ್ಯ ವೀಕ್ಷಿಸಬಹುದಾಗಿದೆ. ಮೇ 21 ರಂದು ಮಧ್ಯಾಹ್ನ 3.30ಕ್ಕೆ ಮುಂಬೈ ಇಂಡಿಯನ್ಸ್–ಸನ್ ರೈಸರ್ಸ್ ಹೈದರಾಬಾದ್ ಹಾಗೂ ಸಂಜೆ 7.30ಕ್ಕೆ ರಾಯಲ್ ಚಾಲೆಂಜರ್ಸ್ ಬೆಂಗಳೂರು –ಗುಜರಾತ್ ಟೈಟಾನ್ಸ್ ನಡುವಿನ ಪಂದ್ಯ ವೀಕ್ಷಿಸಬಹುದು ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಐಪಿಎಲ್ ಚಟುವಟಿಕೆಯ ವ್ಯವಸ್ಥಾಪಕ ಆನಂದ್ ದತ್ತ, ಕೆಸಿಎ ವಿಭಾಗೀಯ ಅಧ್ಯಕ್ಷ ಬಾಲಚಂದರ್ ಇದ್ದರು.

ಪ್ರಥಮ ಬಾರಿ ಮುಕ್ತ ವಿವಿಗೆ ನ್ಯಾಕ್ A+ ಮಾನ್ಯತೆ ಗರಿ

ಮೈಸೂರು, ಮೇ 19 (ಆರ್‌ಕೆ)– 27 ವರ್ಷಗಳ ಇತಿಹಾಸದಲ್ಲಿ ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU) ಕ್ಕೆ ಇದೇ ಮೊದಲ ಬಾರಿ ನ್ಯಾಕ್ (National Assessment and Accreditation Council) ಸಂಸ್ಥೆಯು A+ ಗ್ರೇಡ್ ಮಾನ್ಯತೆ ನೀಡಿದೆ.



ಮೇ 4 ರಿಂದ 6ರವರೆಗೆ ನ್ಯಾಕ್ ಸಮಿತಿ ಅಧ್ಯಕ್ಷ ಪ್ರೊ.ಸುಧೀರ್ ಗೌವಹಾನೆ ನೇತೃತ್ವದ ಕೌನ್ಸಿಲ್ ಮೆಂಬರ್ ಕೋ –ಆರ್ಡಿನೇಟರ್ ಪ್ರೊ ಪುಶವೆಂದರ್ ಸಿಂಗ್ ಗಿಲ್, ಸದಸ್ಯರಾದ ಪ್ರೊ. ಖಾಲಿದ್ ಘಜಲಿ, ಪ್ರೊ ಹೇಮೆಂದರ್ ನಾಯ್ಡು ಹಾಗೂ ಪ್ರೊ ಶಾಂತನುಕುಮಾರ್ ಅವರ ತಂಡವು ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು ವಿಶ್ವವಿದ್ಯಾನಿಲಯದಲ್ಲಿ ಒದಗಿಸಿರುವ ಮೂಲ ಸೌಕರ್ಯಗಳು, ಶೈಕ್ಷಣಿಕ ವಾತಾವರಣ, ಬೋಧನಾ ಗುಣಮಟ್ಟ, ವಿದ್ಯಾರ್ಥಿಗಳಿಗೆ ಪಠ್ಯಕ್ರಮ, ಅಧ್ಯಯನ ಸಾಮಗ್ರಿ ಪೂರೈಕೆ, ಪರೀಕ್ಷಾ ವಿಧಾನ, ಮೌಲ್ಯಮಾಪನಾ ಕ್ರಮ, ಫಲಿತಾಂಶ ಪ್ರಕಟ, ಸಂಶೋಧನೆ, ಪ್ರಕಟಣೆ, ಆಡಳಿತ, ಹಣಕಾಸು ಸ್ಥಿತಿ, ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಕೈಗೊಂಡಿರುವ ಕ್ರಮಗಳು ಸೇರಿದಂತೆ ಇನ್ನಿತರ ಮಾನದಂಡಗಳನ್ನು ಪರಿಗಣಿಸಿ ನ್ಯಾಕ್ ಸಮಿತಿಯು 1996 ರಲ್ಲಿ ಆರಂಭವಾದ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಇದೇ ಪ್ರಥಮ ಬಾರಿ A+ ಮಾನ್ಯತೆ ನೀಡಿದೆ.

ಯೂನಿವರ್ಸಿಟಿಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮಾಜಿ ಕುಲಪತಿಗಳಾದ ಪ್ರೊ.ಎಸ್. ವಿದ್ಯಾಶಂಕರ್, ಪ್ರೊ ಡಿ. ಶಿವಲಿಂಗಯ್ಯ, ಪ್ರೊ. ಕೆ.ಎಸ್. ರಂಗಪ್ಪ ಸೇರಿದಂತೆ ಹಲವು ಶ್ರಮಿಸಿದ ಫಲವಾಗಿ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಭಿವೃದ್ಧಿ ಪರ್ವಕ್ಕೆ ನಾಂದಿಯಾಯಿತು.

ರಿಜಿಸ್ಟ್ರಾರ್ ಪ್ರೊ ಕೆಎಲ್.ಎನ್. ಮೂರ್ತಿ, ಪರೀಕ್ಷಾಂಗ ಕುಲಸಚಿವ ಕೆಬಿ. ಪ್ರವೀಣ್, ಹಣಕಾಸು ಅಧಿಕಾರಿ ಖಾದರ್ ಪಾಷ, ಮಾಜಿ ಕುಲಸಚಿವ ಆರ್. ರಾಜಣ್ಣ, ಆರ್ಡಿನೇಟರ್ ಡಾ.ಹೆಚ್. ರಾಜೇಶ್ವರಿ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಡಾ. ಜೈಪಾಲ್, ಡಾ.ವಿ. ಮಹೇಶ್, ಡಾ. ಪವಿತ್ರ ಡಾ. ಸಿ.ಎಸ್. ಮಂಜುನಾಥ್, ಪ್ರೊ ರಾಮನಾಥಮ್ ನಾಯ್ಡು ಪ್ರೊಎನ್. ಲಕ್ಷ್ಮೀ, ಮಾಜಿ ಶೈಕ್ಷಣಿಕ ಡೀನ್ ಕಾಂಬ್ಲೆ ಅಶೋಕ್, ಸೆಂಟರ್ ಫಾರ್ ಇಂಟರನಲ್ ಕ್ವಾಲಿಟಿ ಅಶೋರೆನ್ಸ್ (CIQA) ನಿರ್ದೇಶಕ ಡಾ. ಎಸ್. ನಿರಂಜನ್ ರಾಜ್ ಅವರು ನ್ಯಾಕ್ ಭೇಟಿ ವೇಳೆ ನೀಡಿದ ಪ್ರಾತ್ಯಕ್ಷಿಕೆ ಮತ್ತು ಮಾಹಿತಿಯು ಈ ಸಾಧನೆಗೆ ಪೂರಕವಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಮುಕ್ತ ವಿಶ್ವವಿದ್ಯಾನಿಲಯದ ನ್ಯಾಕ್ ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಾದ ದೀಪಾಶ್ರೀ, ಕೋಮಲಾ, ಹೆಚ್.ಎಲ್. ದೃಪದ, ವಿಶ್ವನಾಥ್, ಲೋಕೇಶ್, ನಿರ್ಮಲಾ, ಶೃಂಗಾ, ತೇಜಸ್ವಿನಿ, ಯಶವಂತ ಮತ್ತು ಇತರ ಸಿಬ್ಬಂದಿಗಳ ನಿರಂತರ ಪರಿಶ್ರಮದಿಂದಾಗಿ ಈ ಗರಿಮೆ ವಿವಿ ಮುಡಿಗೇರಿದೆ. 10 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಪದವಿ, ಸ್ನಾತಕೋತ್ತರ ಪದವಿ ನೀಡಿ ಹಲವರು ಉದ್ಯೋಗಿಗಳಾಗಲು ಕಾರಣವಾಗಿರುವ ಮುಕ್ತ ವಿಶ್ವವಿದ್ಯಾನಿಲಯದ ಪ್ರಗತಿಗೆ ನ್ಯಾಕ್ ಮಾನ್ಯತೆಯು ಸಹಕಾರಿಯಾಗಲಿದೆ.


1.34 ಲಕ್ಷ ಹಣವಿದ್ದ ಬ್ಯಾಗ್ ಕಿತ್ತುಕೊಂಡು ಪರಾರಿಯಾದ ಖದೀಮರು

● ಬೈಕ್‌ನಲ್ಲಿ ಬಂದು ದುಷ್ಕೃತ್ಯ ● ಬ್ಯಾಂಕ್‌ನಿಂದ ಹಣ ಡ್ರಾ ಮಾಡಿಕೊಂಡು ಮನೆಗೆ ಮರಳುತ್ತಿದ್ದ ವ್ಯಕ್ತಿಗೆ ಶಾಕ್


ಮೈಸೂರು, ಮೇ 19(ಎಸ್‌ಬಿಡಿ)– ಬ್ಯಾಂಕ್‌ನಿಂದ ಹಣ ಡ್ರಾ ಮಾಡಿಕೊಂಡು ಮನೆಗೆ ಹೋಗುತ್ತಿದ್ದ ವ್ಯಕ್ತಿಯಿಂದ ಹಣವಿದ್ದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನಲ್ಲಿ ಶುಕ್ರವಾರ ಹಾಡಹಗಲೇ ನಡೆದಿದೆ.

ಕುವೆಂಪುನಗರ ಕೆಹೆಚ್‌ಬಿ ಒಂದನೇ ಹಂತದ ನಿವಾಸಿ ಕೆಮದನ್(63) ಅವರಿಂದ 1.34 ಲಕ್ಷ ರೂ. ಹಣವಿದ್ದ ಬ್ಯಾಗ್ ಅನ್ನು ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಖದೀಮರು ಬೆಳಗ್ಗೆ 11.50ರ ಸಮಯದಲ್ಲಿ ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಮದನ್ ಅವರು ಕತ್ತಿನ ಸಮಸ್ಯೆಯಿಂದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ವಾಹನ ಚಲಿಸದಂತೆ ವೈದ್ಯರು ಸೂಚನೆ ನೀಡಿದ್ದರಿಂದ ಅವರು ಸುಮಾರು ಅರ್ಧ ಕಿ.ಮೀ ದೂರದಲ್ಲಿರುವ ನೃಪತುಂಗ ರಸ್ತೆಯ ಎಸ್‌ಬಿಐನ ಎಂ ಬ್ಲಾಕ್ ಶಾಖೆಗೆ ನಡೆದುಕೊಂಡು ಹೋಗಿದ್ದರು. ಬೆಳಗ್ಗೆ 11.30ಕ್ಕೆ ಬ್ಯಾಂಕ್ ತಲುಪಿದ್ದ ಅವರು, ಚೆಕ್ ಮುಖೇನ 1.34 ಲಕ್ಷ ರೂ. ಹಣ ಡ್ರಾ ಮಾಡಿಕೊಂಡು ತಮ್ಮ ಬಳಿ ಇದ್ದ ಬಟ್ಟೆ ಬ್ಯಾಗ್ (ಕೈಚೀಲ)ನೊಳಗೆ ಇಟ್ಟುಕೊಂಡು ಮನೆಯತ್ತ ತೆರಳುತ್ತಿದ್ದರು. ಬೆಳಗ್ಗೆ 11.50ರ ಸಮಯದಲ್ಲಿ ನೃಪತುಂಗ ರಸ್ತೆ ಶ್ರೀ ಗಣಪತಿ ದೇವಸ್ಥಾನದ ಎದುರು ರಸ್ತೆ ದಾಟುತ್ತಿದ್ದಾಗ ಬೈಕ್‌ನಲ್ಲಿ ಬಂದ ಇಬ್ಬರು ಯುವಕರು ಹಿಂಭಾಗದಿಂದ ಹಣವಿದ್ದ ಬ್ಯಾಗ್ ಕಿತ್ತುಕೊಂಡು ಕುವೆಂಪುನಗರ ಕಾಂಪ್ಲೆಕ್ಸ್ ಕಡೆಗೆ ಪರಾರಿಯಾಗಿದ್ದಾರೆ.



ಹಣದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗುತ್ತಿರುವ ಖದೀಮರು (ಸಿಸಿಟಿವಿ ದೃಶ್ಯ)



ಮದನ್

ಹಠಾತ್ ಬ್ಯಾಗ್ ಕಿತ್ತುಕೊಂಡಿದ್ದರಿಂದ ಆಘಾತಕ್ಕೊಳಗಾದ ಮದನ್ ಅವರಿಗೆ ತಕ್ಷಣಕ್ಕೆ ಕೂಗಲು ಸಾಧ್ಯವಾಗಿಲ್ಲ. ಸ್ವಲ್ಪ ಹೊತ್ತು ಸುಧಾರಿಸಿಕೊಂಡು ಕೂಗಿಕೊಂಡಿದ್ದಾರೆ. ಆ ವೇಳೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ಇಬ್ಬರು ಏನಾಯಿತು ಎಂದು ವಿಚಾರಿಸಿ, ಖದೀಮರು ಹೋದ ಕಡೆ ತೆರಳಿ ಪರಿಶೀಲಿಸಿದರಾದರೂ ಖದೀಮರು ಪತ್ತೆಯಾಗಿಲ್ಲ. ನಂತರ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ತಕ್ಷಣವೇ ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದ್ದಾರೆ. ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ ಇನ್ನಿತರ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಮದನ್ ಅವರಿಂದ ಮಾಹಿತಿ ಪಡೆದಿದ್ದಾರೆ. ಆ ರಸ್ತೆಯ ಕೆಲ ಅಂಗಡಿಗಳಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮರಾ ಫುಟೇಜ್‌ಗಳನ್ನೂ ಪೊಲೀಸರು ಪರಿಶೀಲಿಸಿ, ಖದೀಮರ ಪತ್ತೆಗೆ ಬಲೆ ಬೀಸಿದ್ದಾರೆ.

ಘಟನೆ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮದನ್, ಬ್ಯಾಂಕ್‌ನಿಂದ ಹಣ ಡ್ರಾ ಮಾಡಿ, ಬ್ಯಾಗ್‌ನಲ್ಲಿಟ್ಟುಕೊಂಡು, ಅದರ ಹಿಡಿಯನ್ನು ಕೈಗೆ ಸುತ್ತಿಕೊಂಡು ಫುಟ್‌ಪಾತ್‌ನಲ್ಲೇ ಬರುತ್ತಿದ್ದೆ. ಗಣಪತಿ ದೇವಸ್ಥಾನದ ಬಳಿ ರಸ್ತೆ ದಾಟುವಾಗ ಹಿಂಭಾಗದಿಂದ ಬೈಕ್‌ನಲ್ಲಿ ಬಂದ ಇಬ್ಬರು ಹಠಾತ್ ಬ್ಯಾಗ್ ಕಿತ್ತುಕೊಂಡು ಹೋದರು. ಆ ವೇಳೆ ನಾನು ಆಯತಪ್ಪಿದಂತಾಗಿ ತಕ್ಷಣಕ್ಕೆ ಕೂಗಿಕೊಳ್ಳಲು ಆಗಲಿಲ್ಲ. ಕೆಲ ಸೆಕೆಂಡ್‌ಗಳಲ್ಲಿ ಸುಧಾರಿಸಿಕೊಂಡು ಕೂಗಿದೆ. ಆಗ ಬೈಕ್‌ನಲ್ಲಿ ಹೋಗುತ್ತಿದ್ದ ಇಬ್ಬರು ಏನಾಯಿತು ಎಂದು ವಿಚಾರಿಸಿದರು. ಆಗ ಹಣವಿದ್ದ ಬ್ಯಾಗ್ ಕಿತ್ತುಕೊಂಡು ಹೋಗಿದ್ದಾಗಿ ತಿಳಿಸಿದೆ. ಅವರು ಕಳ್ಳರು ಹೋದ ಕಡೆಗೆ ಹೋಗಿ ನೋಡಿಕೊಂಡು ಬಂದರಾದರೂ ಕಳ್ಳರು ಸಿಗಲಿಲ್ಲ. ಬಳಿಕ ಪೊಲೀಸರಿಗೆ ವಿಷಯ ತಿಳಿಸುತ್ತಿದ್ದಂತೆ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ, ಮಾಹಿತಿ ಪಡೆದರು ಎಂದರು.

ವೈದ್ಯಕೀಯ ವೆಚ್ಚಕ್ಕಾಗಿ ಬ್ಯಾಂಕ್‌ನಿಂದ ತಂದಿದ್ದ 1.34 ಲಕ್ಷ ರೂ. ಹಣ, ಪಾಸ್ ಬುಕ್, ಚೆಕ್‌ಬುಕ್, ಆಧಾರ್ ಇನ್ನಿತರ ದಾಖಲೆಗಳು ಬ್ಯಾಗ್‌ನಲ್ಲಿದ್ದವು. ಆ ಕ್ಷಣದಲ್ಲಿ ಬೈಕ್‌ನ ನಂಬರ್ ಪ್ಲೇಟ್ ನೋಡಲಾಗಲಿಲ್ಲ. ಅದರ ಹಿಂಭಾಗ ಕುಳಿತಿದ್ದವನು ತಿಳಿನೀಲಿ ಬಣ್ಣದ ಶರ್ಟ್ ಧರಿಸಿದ್ದ, ಹೆಲ್ಮೆಟ್ ಹಾಕಿರಲಿಲ್ಲ ಪಲ್ಸರ್ ಬೈಕ್ ರೀತಿ ಕಾಣಿಸಿತು. ಕುವೆಂಪುನಗರ ಕಾಂಪ್ಲೆಕ್ಸ್ ಕಡೆಗೆ ಪರಾರಿಯಾದರು ಎಂದು ತಿಳಿಸಿದರು.

ಘಟನೆ ಸಂಬಂಧ ಮದನ್ ಅವರು ನೀಡಿರುವ ದೂರಿನ ಮೇರೆಗೆ ಕುವೆಂಪುನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ ಹಲವು ಮಳಿಗೆಗಳ ಮುಂಭಾಗ ಅಳವಡಿಸಿರುವ ಸಿಸಿಟಿವಿ ಕ್ಯಾಮರಾಗಳ ಫುಟೇಜ್‌ಗಳನ್ನು ಪರಿಶೀಲನೆ ನಡೆಸಿದ್ದಾರೆ. ಸಿಸಿಟಿವಿ ದೃಶ್ಯಾವಳಿ ಲಭ್ಯವಾಗಿದ್ದೂ ಖದೀಮರ ಚಹರೆ ಸ್ಪಷ್ಟವಾಗಿ ಗೋಚರಿಸುತ್ತಿಲ್ಲ. ಹಾಗಾಗಿ ಖದೀಮರು ಬಂದ ಮಾರ್ಗ ಹಾಗೂ ಪರಾರಿಯಾದ ರಸ್ತೆಗಳ ಸಿಸಿಟಿವಿ ಕ್ಯಾಮರಾಗಳ ಫುಟೇಜ್‌ಗಳ ಪರಿಶೀಲನೆಗೂ ಕ್ರಮ ಕೈಗೊಂಡಿದ್ದಾರೆ.

ಮಲೇರಿಯಾ ಮುಕ್ತ 'ಮೈಸೂರು ಜಿಲ್ಲೆ': ಅಧಿಕೃತ ಘೋಷಣೆ ಬಾಕಿ


● ಕಳೆದ 6 ವರ್ಷಗಳಿಂದ ಒಂದೂ ಪ್ರಕರಣವಿಲ್ಲ ● ಮೇ 23ರಿಂದ ಮೂರು ದಿನ ತಜ್ಞರ ತಂಡದಿಂದ ಮೌಲ್ಯಮಾಪನಕ್ಕೆ ತಾತ್ಕಾಲಿಕ ದಿನಾಂಕ ನಿಗದಿ




ಮೈಸೂರು ಜಿಲ್ಲೆಯ ಸಾಲಿಗ್ರಾಮದ ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿ ನಿರ್ಮಿಸಿರುವ ಲಾರ್ವಹಾರಿ ಮೀನು ಸಾಕಾಣಿಕೆ ತೊಟ್ಟಿ.



ಮೈಸೂರಿನ ಸಿದ್ಧಾರ್ಥನಗರದ ಕಲ್ಯಾಣಿವೊಂದಕ್ಕೆ ಡಾ.ಎಸ್.ಚಿದಂಬರ ಅವರು ಮೀನುಗಳನ್ನು ಬಿಡುತ್ತಿರುವುದನ್ನು ಕಾಣಬಹುದು.



ಗ್ಯಾಂಬೂಸಿಯಾ ಮೀನು



ಅನಾಫಿಲಿಸ್ ಹೆಣ್ಣು ಸೊಳ್ಳೆ

'ಜೂನ್' ಮಲೇರಿಯಾ ವಿರೋಧಿ ಮಾಸಾಚರಣೆ

ಸೋಂಕು ಹೊಂದಿದ ಹೆಣ್ಣು ಅನಾಫಿಲಿಸ್ ಸೊಳ್ಳೆ ಕಚ್ಚುವಿಕೆಯಿಂದ ಮಲೇರಿಯಾ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಹಾಗಾಗಿ ಈ ಸೊಳ್ಳೆಗಳ ನಿಯಂತ್ರಣ ಮಲೇರಿಯಾ ಹತೋಟಿಗೆ ಮುಖ್ಯ ವಿಧಾನ. ಮಳೆ ನೀರು ಶೇಖರಣೆಯಾದ ಕಡೆಗಳಲ್ಲಿ ಈ ಸೊಳ್ಳೆ ಬೆಳವಣಿಗೆ ಕಾಣುತ್ತವೆ. ಹಾಗಾಗಿ ಮಳೆಗಾಲ ಆರಂಭಕ್ಕೂ ಮುನ್ನ ಜೂನ್ ಅನ್ನು ಮಲೇರಿಯಾ ವಿರೋಧಿ ಮಾಸಾಚರಣೆ ಆಗಿ ಆಚರಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಜೂನ್ ಇಡೀ ತಿಂಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಹಿಡಿದು ಜಿಲ್ಲಾ ಮಟ್ಟದವರೆಗೆ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಮನೆ ಮನೆ ಭೇಟಿ, ಜಾಥಾದ ಮೂಲಕ ಅರಿವು ಮೂಡಿಸಲಾಗುತ್ತದೆ.

● ಎಂ.ಬಿ.ಪವನ್‌ಮೂರ್ತಿ

ಮೈಸೂರು, ಮೇ 19– 'ಮಲೇರಿಯಾ ಜ್ವರ' ಮಾನವ ಕುಲಕ್ಕೆ ಮಾರಕ. ಮೈ ನಡುಗಿಸುವ ಮುಖ್ಯ ಲಕ್ಷಣವಿರುವ ಈ ಮಾರಣಾಂತಿಕ ಜ್ವರದ ಅಟ್ಟಹಾಸವು ಮೈಸೂರು ಜಿಲ್ಲೆಯಲ್ಲಿ 2017ರಲ್ಲೇ ಕೊನೆಯಾಗಿದೆ. ಅಂದಿನಿಂದ ಈವರೆಗೆ ಒಂದೂ ಮಲೇರಿಯಾ ಪ್ರಕರಣ ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ. ಆ ಮೂಲಕ ಕಳೆದ 6 ವರ್ಷಗಳಿಂದ 'ಮೈಸೂರು' 'ಮಲೇರಿಯಾ ಮುಕ್ತ ಜಿಲ್ಲೆ'ಯಾಗಿ ಹೊರಹೊಮ್ಮಿದ್ದು, ಅಧಿಕೃತ ಘೋಷಣೆಯಷ್ಟೇ ಬಾಕಿ ಉಳಿದಿದೆ.

ಅಧಿಕೃತ ಘೋಷಣೆ ಸಂಬಂಧ ಮೌಲ್ಯಮಾಪನ ನಡೆಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರತಿನಿಧಿಗಳನ್ನು ಒಳಗೊಂಡ ಒಟ್ಟು 6 ತಜ್ಞರ ತಂಡದ ಮೈಸೂರು ಜಿಲ್ಲಾ ಪ್ರವಾಸಕ್ಕೆ ಮೇ 23ರಿಂದ 25ರವರೆಗೆ ತಾತ್ಕಾಲಿಕ ದಿನಾಂಕ ನಿಗದಿಯಾಗಿದೆ. 'ಇಂಡಿಪೆಂಡೆಂಟ್ ಅಸೆಸ್‌ಮೆಂಟ್ ಕಮಿಟಿ' ಎಂದು ಕರೆಯುವ ತಜ್ಞರ ತಂಡವು ಜಿಲ್ಲೆಯಲ್ಲಿ ಮಲೇರಿಯಾ ಸ್ಥಿತಿಗತಿಗಳ ಬಗ್ಗೆ ಮೌಲ್ಯಮಾಪನ ನಡೆಸಿ, ವರದಿ ಸಿದ್ಧಪಡಿಸಲಿದೆ.

ಶೂನ್ಯಕ್ಕೆ ತರಲು ಜಿಲ್ಲೆಯಲ್ಲಿ ನಡೆದಿರುವ ಕಾರ್ಯಾಚರಣೆಗಳ ಬಗ್ಗೆ ಅಧ್ಯಯನ ನಡೆಸುವ ತಜ್ಞರ ತಂಡವು, ಸರ್ಕಾರ ನಿಗದಿಪಡಿಸಿದ ಮಾನದಂಡಗಳ ಪ್ರಕಾರವೇ ಮಲೇರಿಯಾ ಶೂನ್ಯದಲ್ಲಿಯೇ? ರಕ್ತಲೇಪನ ಸಂಗ್ರಹ ಮತ್ತು ಅವುಗಳ ಪರೀಕ್ಷೆ ಪ್ರಮಾಣ ಸಮರ್ಪಕವಾಗಿ ನಡೆದಿದೆಯೇ? ಎಂಬುದು ಸೇರಿದಂತೆ ಇನ್ನಿತರ ಅಂಶಗಳನ್ನು ಪರಿಶೀಲಿಸಲಿದೆ. ಬಳಿಕ ಮೌಲ್ಯಮಾಪನದ ವರದಿ ಸಿದ್ಧಪಡಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಿದ್ದು, ಅಂತಿಮವಾಗಿ ಕೇಂದ್ರ ಸರ್ಕಾರ ಘೋಷಣೆ ಮಾಡಬೇಕಿರುತ್ತದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ, ಮಲೇರಿಯಾ ಮುಕ್ತ ಘೋಷಣೆ ಸಂಬಂಧ 2020ರಲ್ಲಿ ಮೌಲ್ಯಮಾಪನ ನಡೆಯಬೇಕಿತ್ತು. ಆದರೆ ಕೋವಿಡ್ ಹಿನ್ನೆಲೆಯಲ್ಲಿ ಮುಂದೂಡಲ್ಪಟ್ಟಿತು. ಇದೀಗ ಮೌಲ್ಯಮಾಪನ ಪ್ರಕ್ರಿಯೆಗೆ ಕಾಲ ಕೂಡಿ ಬಂದಿದೆ. ಮುಕ್ತ ಎನ್ನುವುದು ಇಂದಿಗಷ್ಟೆ ಸೀಮಿತ. ಮುಂದೆ ಮತ್ತೆ ಪ್ರಕರಣ ಕಾಣಿಸಿಕೊಳ್ಳುವುದಿಲ್ಲ ಎಂದು ಹೇಳಲು ಸಾಧ್ಯವಿರುವುದಿಲ್ಲ. ಪ್ರತಿವರ್ಷ ಮುಕ್ತವಾಗಿ ಇಟ್ಟುಕೊಳ್ಳುವುದೇ ಒಂದು ಸವಾಲು ಎಂದು ಹೇಳಿದರು.

ಇಡೀ ರಾಜ್ಯವನ್ನೇ 2025ಕ್ಕೆ ಮಲೇರಿಯಾ ಮುಕ್ತ ಮಾಡಬೇಕೆಂಬ ಗುರಿ ಹೊಂದಲಾಗಿದೆ. ನಿರಂತರ ಮೂರು ವರ್ಷ ಕಾಲ ಪ್ರಕರಣಗಳು ಕಂಡು ಬಂದಿಲ್ಲವೆಂದರೆ ಅಂತಹ ಜಿಲ್ಲೆಗಳಿಗೆ ಆ ಸಂದರ್ಭಕ್ಕೆ ಅನ್ವಯಿಸುವಂತೆ 'ಮಲೇರಿಯಾ ಮುಕ್ತ' ಎಂದು ಘೋಷಣೆ ಮಾಡಲಾಗುತ್ತದೆ. ಕಳೆದ ಐದಾರು ವರ್ಷಗಳಿಂದ ಮೈಸೂರು ಸೇರಿದಂತೆ ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಮಲೇರಿಯಾದಿಂದ ಸಾವು ಸಂಭವಿಸಿರುವುದು ವರದಿಯಾಗಿಲ್ಲ ಎನ್ನುತ್ತಾರೆ ಡಾ.ಎಸ್.ಚಿದಂಬರ.

ಮಲೇರಿಯಾ ಬಹುವಿಧ: ಮಲೇರಿಯಾ ಜ್ವರವು ಪ್ಲಾಸ್ಮೋಡಿಯಂ ವೈವಾಕ್ಸ್ ಮತ್ತು ಪ್ಲಾಸ್ಮೋಡಿಯಂ ಫಾಲ್ಸಿಪಾರಂ ಎಂಬ ಪರಾವಲಂಬಿ ಜೀವಿಯಿಂದ (ಪ್ಯಾರಾಸೈಟ್) ಉಂಟಾಗುವ ಅನಾರೋಗ್ಯವಾಗಿದೆ. ಮಲೇರಿಯಾ ವಿಧಗಳ ಬಗ್ಗೆ ವಿವರಿಸಿದ ಡಾ.ಎಸ್. ಚಿದಂಬರ ಅವರು, ಪ್ಲಾಸ್ಮೋಡಿಯಂ ವೈವಾಕ್ಸ್, ಪ್ಲಾಸ್ಮೋಡಿಯಂ ಫಾಲ್ಸಿಪಾರಂ ತೀರಾ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಮಲೇರಿಯಾ ವಿಧಗಳು. ಇವುಗಳೊಂದಿಗೆ ಪ್ಲಾಸ್ಮೋಡಿಯಂ ಓವಲೇ, ಪ್ಲಾಸ್ಮೋಡಿಯಂ ಮಲೇರಿಯೇ ಎಂಬ ವಿಧಗಳೂ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ. ಅಲ್ಲದೆ, 70 ವಿಧಗಳು ಇದ್ದು, ಸಾಮಾನ್ಯವಾಗಿ ಕಾಣಿಸಿಕೊಳ್ಳುವುದು ಈ ನಾಲ್ಕು ವಿಧಗಳು ಮಾತ್ರ. ಈ ಪೈಕಿ ನಮ್ಮ ದೇಶದಲ್ಲಿ ಕಾಣಿಸಿಕೊಳ್ಳುವುದು ಪ್ಲಾಸ್ಮೋರಿಯಂ ವೈವಾಕ್ಸ್, ಪ್ಲಾಸ್ಮೋಡಿಯಂ ಫಾಲ್ಸಿಪಾರಂ ಎಂಬ ವಿಧಗಳಾಗಿವೆ ಎಂದು ಅವರು ವಿವರಿಸುತ್ತಾರೆ.

ಫಾಲ್ಸಿಪಾರಂ ಮಾರಣಾಂತಿಕ: ಪ್ಲಾಸ್ಮೋಡಿಯಂ ವೈವಾಕ್ಸ್ ಶೇ.90ರಿಂದ 95ರಷ್ಟು ಮಂದಿಗೆ ತಗುಲಿದರೆ, ಶೇ.5ರಿಂದ 10ರಷ್ಟು ಮಾತ್ರವೇ ಪ್ಲಾಸ್ಮೋಡಿಯಂ ಫಾಲ್ಸಿಪಾರಂ ಕಾಣಿಸಿಕೊಳ್ಳುತ್ತದೆ. ಪ್ಲಾಸ್ಮೋಡಿಯಂ ವೈವಾಕ್ಸ್ ತಕ್ಷಣಕ್ಕೆ ಮಾರಣಾತಿಂಕವಲ್ಲ. ಆದರೆ ಪ್ಲಾಸ್ಮೋಡಿಯಂ ಫಾಲ್ಸಿಪಾರಂ ಮಾರಣಾಂತಿಕ. ಇದು ಗಂಭೀರ ಸ್ವರೂಪ ಪಡೆಯುತ್ತದೆ. ಮೆದುಳು ಜ್ವರ, ಕಿಡ್ನಿ ಮತ್ತು ಲಿವರ್‌ಗೆ ಹಾನಿ ಉಂಟು ಮಾಡುತ್ತದೆ. ಆದರೆ ಪ್ಲಾಸ್ಮೋಡಿಯಂ ವೈವಾಕ್ಸ್ ಈ ರೀತಿಯಲ್ಲಿ ಹಾನಿ ಮಾಡುವುದಿಲ್ಲ. ಬದಲಿಗೆ ಕೆಂಪು ರಕ್ತ ಕಣಗಳನ್ನು ನಾಶಗೊಳಿಸಿ, ಅನಿಮೀಯ ಸಮಸ್ಯೆ ಉಂಟು ಮಾಡುತ್ತದೆ. ಪ್ಲಾಸ್ಮೋಡಿಯಂ ಫಾಲ್ಸಿಪಾರಂ ವಿಧದಲ್ಲಿ ಸಾವಿನ ಪ್ರಮಾಣ ಹೆಚ್ಚು. ಸೂಕ್ತ ಸಮಯಕ್ಕೆ ಸಮರ್ಪಕ ಚಿಕಿತ್ಸೆ ನೀಡಿಲ್ಲವೆಂದರೆ ಸಾವು ಸಂಭವಿಸುತ್ತದೆ ಎಂದು ಡಾ.ಎಸ್. ಚಿದಂಬರ ಆತಂಕ ವ್ಯಕ್ತಪಡಿಸುತ್ತಾರೆ.

ಮಕ್ಕಳು, ಪುರುಷರು, ಮಹಿಳೆಯರು ಎಂಬ ಭೇದವಿಲ್ಲದೆ, ಎಲ್ಲರಿಗೂ ಮಲೇರಿಯಾ ಬರುತ್ತದೆ. ಮಲೇರಿಯಾ ಪ್ರಕರಣಗಳು ಜಿಲ್ಲೆಯಲ್ಲಿ ಇಲ್ಲವಾದರೂ ರಕ್ತಲೇಪನ ಸಂಗ್ರಹ ಹಾಗೂ ಪರೀಕ್ಷೆ ನಿರಂತರವಾಗಿ ನಡೆಸುತ್ತಿದ್ದೇವೆ. ಮಲೇರಿಯಾದಲ್ಲಿ ಜ್ವರ ತೀವ್ರವಾಗಿ ಕಾಣಿಸಿಕೊಳ್ಳುವ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ಯಾರೇ ಆದರೂ ನೋವು ತಡೆಯಲಾರದೇ ಆಸ್ಪತ್ರೆಗೆ ಬರುತ್ತಾರೆ. ಹಾಗಾಗಿ ಇದರ ಪತ್ತೆ ಸುಲಭದಲ್ಲಿ ಸಾಧ್ಯವಾಗಲಿದ್ದು, ಔಷಧೋಪಚಾರ ಮೂಲಕ ಇದನ್ನು ಗುಣಪಡಿಸಬಹುದು. ಸರ್ಕಾರಿ ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಇದಕ್ಕೆ ಚಿಕಿತ್ಸೆ ಉಚಿತ. ಯಾವುದೇ ಜ್ವರ ಇದ್ದರೂ ಮಲೇರಿಯಾ ಪರೀಕ್ಷೆ ಮಾಡುತ್ತೇವೆ. ಮಲೇರಿಯಾ ಪರೀಕ್ಷೆ ಉಚಿತವಾಗಿದ್ದು, ಸಾರ್ವಜನಿಕರ ಮನೆ ಬಾಗಿಲಿಗೆ ಹೋಗಿ ಸಹ ಪರೀಕ್ಷೆ ನಡೆಸಲಾಗುತ್ತದೆ ಎನ್ನುತ್ತಾರೆ ಡಾ.ಎಸ್.ಚಿದಂಬರ.

ಮಲೇರಿಯಾ ಮೈಸೂರು ಜಿಲ್ಲೆಯ ಅಂಕಿ–ಅಂಶ

2012ರಲ್ಲಿ 72 ಮಲೇರಿಯಾ ಪ್ರಕರಣಗಳು ಜಿಲ್ಲೆಯಲ್ಲಿ ಪತ್ತೆಯಾಗಿದ್ದವು. ಅದೇ ರೀತಿ 2013ರಲ್ಲಿ 63, 2014ರಲ್ಲಿ 54, 2015ರಲ್ಲಿ 34, 2016ರಲ್ಲಿ 43 ಮಲೇರಿಯಾ ಪ್ರಕರಣಗಳು ಜಿಲ್ಲೆಯಲ್ಲಿ ಕಾಣಿಸಿಕೊಂಡಿದ್ದು, 2017ರಿಂದ ಪ್ರಸಕ್ತ ವರ್ಷದ ಈವರೆಗೆ ಒಂದೇ ಒಂದೂ ಮಲೇರಿಯಾ ಪ್ರಕರಣ ದಾಖಲಾಗಿಲ್ಲ. ಜೊತೆಗೆ 2012ರಿಂದ 2016ರವರೆಗೆ ಪ್ರಕರಣಗಳಿದ್ದರೂ ಯಾವುದೇ ಸಾವು ಸಂಭವಿಸಿಲ್ಲ.

ತಲೆ ಮೇಲೆ ಕೃಷ್ಣನ ಚಕ್ರದಂತೆ ತಿರುಗುತ್ತವೆ; 3 ಕಿ.ಮೀ.ವರೆಗೆ ಹಾರಿ ಹೋಗುತ್ತವೆ

ಮಳೆಗಾಲದಲ್ಲಿ ಈ ಸೊಳ್ಳೆಗಳು ಹೆಚ್ಚು ಕಾಣಿಸಿಕೊಳ್ಳುತ್ತವೆ. ಸಂಜೆ ಆಗುತ್ತಿದ್ದಂತೆ ನಮ್ಮ ತಲೆ ಮೇಲೆ ಕೃಷ್ಣನ ಚಕ್ರದಂತೆ ಸುತ್ತುತವೆ. ಕೈಯಿಂದ ಹಿಡಿಯಲು ಪ್ರಯತ್ನಿಸಿದರೆ ಕೈ ತುಂಬ ಈ ಸೊಳ್ಳೆಗಳು ಸಿಕ್ಕಿಕೊಳ್ಳಲಿವೆ. ಮಳೆ ಶುರುವಾಗಿ ರಸ್ತೆ ಬದಿ ಸೇರಿದಂತೆ ಅಲ್ಲಲ್ಲಿ ದೊಡ್ಡ ಗುಂಡಿಗಳಲ್ಲಿ ನೀರು ನಿಂತಿದ್ದರೆ ಅಲ್ಲೆಲ್ಲಾ ಇವು ಬೆಳವಣಿಗೆ ಕಾಣುತ್ತವೆ. 3 ಕಿ.ಮೀ.ವರೆಗೆ ಹಾರಿ ಹೋಗುವ ಸೊಳ್ಳೆಗಳು ಇವು. ವರ್ಷಪೂರ್ತಿ ಇವು ಸಂತಾನೋತ್ಪತ್ತಿ ಪ್ರಕ್ರಿಯೆ ನಡೆಸಿದರೂ ಮಳೆಗಾಲದಲ್ಲಿ ಹೆಚ್ಚು ಎನ್ನುತ್ತಾರೆ ಡಾ.ಎಸ್.ಚಿದಂಬರ.

ಮಳೆಗಾಲದಲ್ಲಿ ಎಲ್ಲೆಂದರಲ್ಲಿ ನೀರು ನಿಲ್ಲುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಈ ಸೊಳ್ಳೆ ಸಂತಾನೋತ್ಪತ್ತಿಗೆ ಶುರು ಮಾಡಿಕೊಳ್ಳುತ್ತವೆ. ಗುಂಡಿವೊಂದರಲ್ಲಿ 14 ದಿನ ಕಾಲ ನೀರು ಇದ್ದರೆ ಸಾಕು ಎರಡು ಬ್ಯಾಚ್ ಬೆಳವಣಿಗೆ ಕಾಣುತ್ತವೆ. ಮಳೆಗಾಲ ಇಲ್ಲದ ಸಂದರ್ಭದಲ್ಲಿ ಕೆರೆ ಕಟ್ಟೆಗಳಲ್ಲಿ ಮಾತ್ರ ಉಳಿದುಕೊಳ್ಳುತ್ತವೆ ಎನ್ನುತ್ತಾರೆ ಅವರು.

ಮುಂಜಾಗ್ರತೆ ಮುಖ್ಯ

ಜ್ವರದೊಂದಿಗೆ ಚಳಿ, ನಡುಕ, ಬೆವರುವುದು ಮಲೇರಿಯಾದ ಮುಖ್ಯ ಲಕ್ಷಣಗಳು. ಅನಾಫಿಲೀಸ್ ಹೆಣ್ಣು ಸೊಳ್ಳೆ ಮಲೇರಿಯ ಹರಡಲು ಮುಖ್ಯ ಕಾರಣ. ಹಾಗಾಗಿ ಮನೆ ಆವರಣದಲ್ಲಿನ ನೀರಿನ ತೊಟ್ಟಿ, ಡ್ರಮ್ ಮೊದಲಾದವುಗಳನ್ನು ಸೊಳ್ಳೆ ನುಸುಳದಂತೆ ಮುಚ್ಚಳದಿಂದ ಮುಚ್ಚುವ ಮೂಲಕ ಸೊಳ್ಳೆಗಳನ್ನು ನಿಯಂತ್ರಿಸಿ ಅವುಗಳ ಕಚ್ಚುವಿಕೆಯಿಂದ ತಪ್ಪಿಸಿಕೊಳ್ಳಬಹುದು. ಜೊತೆಗೆ ಸೊಳ್ಳೆ ನಿರೋಧಕಗಳು, ಸೊಳ್ಳೆ ಪರದ ಬಳಸಿ ಸೊಳ್ಳೆ ಕಚ್ಚುವಿಕೆಯಿಂದ ತಪ್ಪಿಸಿಕೊಳ್ಳಬಹುದು.

ಮನುಷ್ಯನ ರಕ್ತ ಸೇವನೆ ಇದಕ್ಕೆ ಆಕಸ್ಮಿಕ ಆಹಾರ ಮಾತ್ರ



ಈ ಅನಾಫಿಲಿಸ್ ಹೆಣ್ಣು ಸೊಳ್ಳೆ ಪ್ರಾಣಿಗಳ ರಕ್ತವನ್ನು ಹೆಚ್ಚು ಇಷ್ಟಪಡುತ್ತವೆ. ಮನುಷ್ಯನ ರಕ್ತ ಸೇವನೆ ಇದಕ್ಕೆ ಆಕಸ್ಮಿಕ ಆಹಾರ ಮಾತ್ರ. ಸಂಜೆ ವೇಳೆಗೆ ಕಚ್ಚುವಿಕೆ ಶುರು ಮಾಡಿ, ತಡರಾತ್ರಿವರೆಗೂ ಮುಂದುವರೆಸುತ್ತವೆ. ಕೆರೆಕಟ್ಟೆಯಂತಹ ದೊಡ್ಡ ದೊಡ್ಡ ನೀರಿನ ತಾಣವನ್ನೇ ಈ ಸೊಳ್ಳೆ ಹುಡುಕಿಕೊಳ್ಳುವುದು ಹೆಚ್ಚು. ಹಾಗಾಗಿ ಅವುಗಳನ್ನು ನಿಯಂತ್ರಿಸಲು ಕೆರೆಕಟ್ಟೆಗಳಿಗೆ ಗ್ಯಾಂಬ್ಯೂಸಿಯಾ ಮೀನುಗಳನ್ನು ಬಿಡುತ್ತೇವೆ. ಜೊತೆಗೆ ಗಪ್ಪಿ ಮೀನುಗಳನ್ನು ಬಿಡುತ್ತೇವೆ. ಈ ಮೀನುಗಳು ಸೊಳ್ಳೆ ಲಾರ್ವಗಳನ್ನು ತಿಂದು ನಾಶಪಡಿಸುವ ಮೂಲಕ ಅವುಗಳ ಸಂತಾನೋತ್ಪತ್ತಿ ನಿಯಂತ್ರಿಸುತ್ತವೆ. ಸಣ್ಣ ಪ್ರಮಾಣದಲ್ಲಿ ನಿಲ್ಲುವ ನೀರಿನ ಶೇಖರಣೆಯಲ್ಲಿ ಈ ಸೊಳ್ಳೆ ಬೆಳವಣಿಗೆ ಕಾಣುವುದು ಕಡಿಮೆ.

ಹೆಚ್ಚಾಗಿ ದನದ ಕೊಟ್ಟಿಗೆಯಲ್ಲಿ ವಿಶ್ರಾಂತಿ ಪಡೆಯುವ ಸೊಳ್ಳೆ ಇದು. ದನಗಳ ರಕ್ತ ಎಂದರೆ ಇವುಗಳಿಗೆ ತುಂಬ ಇಷ್ಟ. ಮನುಷ್ಯನ ಕಚ್ಚುವಿಕೆ ಆಕಸ್ಮಿಕವಷ್ಟೇ. ಮನುಷ್ಯರು ಸುಲಭವಾಗಿ ಅವುಗಳಿಗೆ ಸಿಕ್ಕರೆ ಮಾತ್ರ ಕಚ್ಚುತ್ತವೆ. ಈಗಾಗಲೇ ಕೆರೆಕಟ್ಟೆಗಳಿಗೆ ಮೀನು ಬಿಟ್ಟು ಶೇ.50ರಷ್ಟು ಸೊಳ್ಳೆಗಳನ್ನು ನಿಯಂತ್ರಿಸಿದ್ದೇವೆ. ಜ್ವರದಿಂದ ಬಳಲುವವರನ್ನು ಹುಡುಕಿ ಅವರಿಗೆ ಪ್ಯಾರಾಸೈಟ್ ಇದೆಯೇ, ಇಲ್ಲವೇ ಎಂದು ಪರಿಶೀಲಿಸಿ ಇದ್ದರೆ ಔಷಧ ಕೊಡುವುದರ ಜೊತೆ ಜೊತೆಗೆ ಸೊಳ್ಳೆ ನಿಯಂತ್ರಣಕ್ಕೆ ಕ್ರಮ ವಹಿಸಲಾಗುತ್ತಿದೆ. ಪ್ರಾಥಮಿಕ ಕೇಂದ್ರಗಳಲ್ಲಿ ತೊಟ್ಟಿ ಕಟ್ಟಿಸಿ ಮೀನು ಸಾಗಾಣಿಕೆ ಮಾಡುತ್ತಿದ್ದೇವೆ.

-ಡಾ.ಎಸ್.ಚಿದಂಬರ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು, ಮೈಸೂರು.

ಸೊಳ್ಳೆಯಲ್ಲೂ ಸೋಂಕು ಇದ್ದರೆ ಮಾತ್ರ ಹರಡಲು ಸಾಧ್ಯ

ಊಟ–ನೀರಿನಿಂದ ಪ್ಯಾರಾಸೈಟ್ ಮನುಷ್ಯನ ದೇಹದೊಳಗೆ ಸೇರಿಕೊಳ್ಳುವುದಿದೆ. ಮನುಷ್ಯ ಪ್ಯಾರಾಸೈಟ್ ಸೋಂಕಿಗೆ ಒಳಗಾದಾಗ, ಆತನನ್ನು ಕಚ್ಚಿದ ಸೊಳ್ಳೆಯೂ ಸೋಂಕಿಗೆ ಒಳಗಾಗುತ್ತದೆ. ಪ್ಯಾರಾಸೈಟ್ ಸೋಂಕು ಹೊಂದದ ಅನಾಫಿಲಿಸ್ ಹೆಣ್ಣು ಸೊಳ್ಳೆ ಕಚ್ಚುವಿಕೆಯಿಂದ ಮಲೇರಿಯಾ ಬರುವುದಿಲ್ಲ. ಅದರಲ್ಲಿ ಸೋಂಕು ಇದ್ದರೆ ಮಾತ್ರವೇ ಸೋಂಕನ್ನು ಅದು ಹರಡಲು ಸಾಧ್ಯ ಎನ್ನುತ್ತಾರೆ ಡಾ.ಎಸ್.ಚಿದಂಬರ.

ಮನುಷ್ಯನಿಂದ ಪ್ಯಾರಾಸೈಟ್ ಸೊಳ್ಳೆಗೆ ತಗುಲಿದರೆ ಅದು ಬೆಳವಣಿಗೆ ಕಾಣಲು ಕನಿಷ್ಠ 1ರಿಂದ 2 ವಾರ ಬೇಕು. ಅಂತೆಯೇ ಮನುಷ್ಯನಿಗೆ ಸೋಂಕಿತ ಸೊಳ್ಳೆ ಕಚ್ಚಿದಾಗ ಮಲೇರಿಯಾ ಜ್ವರ ಕಾಣಿಸಿಕೊಳ್ಳಲು ಒಂದರಿಂದ ಎರಡು ವಾರ ಬೇಕು. ಪ್ಯಾರಾಸೈಟ್ (ಪರಾವಲಂಬಿ ಜೀವಿ) ಎಂದರೆ ಅದು ತನ್ನ ಬದುಕಿಗಾಗಿ ಮತ್ತೊಂದು ಜೀವಿ ಮೇಲೆ ಅವಲಂಬಿತವಾಗಿರುತ್ತದೆ. ಜೊತೆಗೆ ಯಾವ ಜೀವಿ ಮೇಲೆ ಇದು ಅವಲಂಬಿತ ಆಗಿರುತ್ತದೋ ಅದಕ್ಕೇ ಇದು ತೊಂದರೆ ಉಂಟು ಮಾಡುತ್ತದೆ. ಅದೇ ಪ್ಯಾರಾಸೈಟ್. ವೈರಾಣು ಮಾದರಿಯಲ್ಲಿ ಇದೂ ಒಂದು ಜಾತಿ ಎಂದು ಅವರು ಹೇಳುತ್ತಾರೆ.



ಮೈಸೂರಿನ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದ ಮಾಲೀಕರೂ ಹಾಗೂ ಹೆಸರಾಂತ ಪ್ರಥಮ ದರ್ಜೆ ಗುತ್ತಿಗೆದಾರರಾದ ಗೋವಿಂದೇಗೌಡರ ಹುಟ್ಟುಹಬ್ಬದ ಅಂಗವಾಗಿ ಕೆಜಿ ಕೊಪ್ಪಲಿನ ಯುವಕ ಮಿತ್ರರು ಅವರನ್ನು ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ವಿಕ್ರಾಂತ್ ಪಿ.ದೇವೇಗೌಡ, ಮೈಲಾ ವಿಜಯ್ ಕುಮಾರ್, ಕಂಡಪ್ಪನ ಚನ್ನಪ್ಪ, ಬಸವರಾಜು, ಜೋಗಪ್ಪ ಆರ್.ಮಹದೇವ್, ವಿಕ್ರಾಂತ್ ರಾಮಚಂದ್ರ ಎಳನೀರು ರಾಮು, ಸೊಸೈಟಿ ರಾಜು, ದೇವು (ಪ್ರದೀಪ್), ಕೆ.ಬ್ಲಾಕ್ ಕಚಪ್ಪನ್, ಕೃಷ್ಣ, ಸುಹಾಸ್, ಉರಗಜ್ಜ, ಬೋರಪ್ಪ, ಶಿವಣ್ಣ ಇತರರು ಉಪಸ್ಥಿತರಿದ್ದರು.

27ರಂದು ಮೈಸೂರು ಸರ್ಕಾರಿ ವೈದ್ಯಕೀಯ ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘದ 'ಮಾ ಉತ್ಸವ'

ಮೈಸೂರು,ಮೇ 19(ಎಂಟಿವೈ)– ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಹಿರಿಯ ವಿದ್ಯಾರ್ಥಿಗಳ ಸಂಘದ 'ಮಾ' ಉತ್ಸವ ಇದೇ 27ರಂದು ಜೆ.ಕೆ. ಮೈದಾನದಲ್ಲಿರುವ ಅಮೃತೋತ್ಸವ ಭವನದಲ್ಲಿ ನಡೆಯಲಿದೆ ಎಂದು ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಡಾ.ಎಸ್. ಚಂದ್ರಶೇಖರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೈಸೂರು ಸರ್ಕಾರಿ ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘವು ಕ್ರಿಯಾಶೀಲ ಚಟುವಟಿಕೆ ನಡೆಸುತ್ತಾ ಬಂದಿದೆ. ವಿವಿಧೆಡೆ ನೆಲೆಸಿರುವ ಮೆಡಿಕಲ್ ಕಾಲೇಜಿನ ಹಳೆ ವಿದ್ಯಾರ್ಥಿಗಳೆಲ್ಲಾ ಸೇರಿ ಹೊಸ ವಿದ್ಯಾರ್ಥಿಗಳೊಂದಿಗೆ ಒಗ್ಗೂಡಿ ವೈದ್ಯಕೀಯ ವಿಚಾರಕ್ಕೆ ಸಂಬಂಧಿಸಿದ ಕಾರ್ಯಕ್ರಮ ನಡೆಸುತ್ತಾ ಬಂದಿದೆ. ಮೈಸೂರು ಮೆಡಿಕಲ್ ಕಾಲೇಜು ಶತಮಾನದ ಹೊಸ್ತಿಲಿನಲ್ಲಿರುವ ಈ ಸಂದರ್ಭದಲ್ಲಿ ಹಳೆ ವಿದ್ಯಾರ್ಥಿಗಳ ಸಂಘದ "ಮಾ" ಉತ್ಸವ ಮಹತ್ವದ ಪಾತ್ರವಹಿಸಿದೆ ಎಂದರು.

ಮೇ 27ರಂದು ಬೆಳಗ್ಗೆ 9 ಗಂಟೆಯಿಂದ ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ವೈದ್ಯರಿಂದ ಆರು ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 2 ಗಂಟೆಗೆ ವಾರ್ಷಿಕ ಮಹಾಸಭೆ ಜರುಗಲಿದೆ. ನಂತರ ಸಂಜೆ 6ಕ್ಕೆ 1962 ರ ಸಾಲಿನ ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್ ಪೂರೈಸಿದ 20 ಹಿರಿಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು. ಈ ಸಂದರ್ಭದಲ್ಲಿ ವಿಶ್ರಾಂತ ಕುಲಪತಿ ಡಾ.ಕೆ.ಎಸ್. ರಂಗಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಹಳೆಯ ಬೇರು ಹಾಗೂ ಹೊಸ ಚಿಗುರಿನ ಸಮ್ಮಿಲನದಂತೆ 'ಮಾ ಉತ್ಸವ' ಪ್ರತಿ ವರ್ಷವೂ ಹಿರಿಯ ಹಾಗೂ ಕಿರಿಯ ವಿದ್ಯಾರ್ಥಿಗಳ ಸಂಬಂಧದ ಸೇತುವೆಯಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತಿದ್ದು ಎಂಎಂಸಿಯ ಸಮಗ್ರ ವಿಕಾಸಕ್ಕೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವೈದ್ಯಕೀಯ ಮಹಾವಿದ್ಯಾನಿಲಯದ ಹಳೆಯ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಡಾ.ಪಿ.ಮಾಲೇಗೌಡ, ಡಾ. ಪ್ರಸನ್ನಶಂಕರ್, ಡಾ. ಹೆಚ್.ಬಿ.ಶಶಿಧರ್, ಡಾ.ಕೃಷ್ಣೇಗೌಡ ಇದ್ದರು.

ಸಚಿವ ಸಂಪುಟದಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಲು ಮನವಿ

ಮೈಸೂರು,ಮೇ 19 (ಎಂಟಿವೈ)– ರಾಜ್ಯದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬರುತ್ತಿರುವ ಕಾಂಗ್ರೆಸ್ ಸರ್ಕಾರದಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ನೀಡಬೇಕು ಎಂದು ರಾಜ್ಯ ವಿಶ್ವಕರ್ಮ ಬಡಗಿ ಕೆಲಸಗಾರರ ಸಂಘದ ಅಧ್ಯಕ್ಷ ಎಂ.ಮೋಗಣ್ಣಾಚಾರ್ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ವಿಶ್ವಕರ್ಮ ಸಮುದಾಯವನ್ನು ಕಡೆಗಣಿಸಿತ್ತು. ರಾಜಕೀಯ, ಶೈಕ್ಷಣಿಕವಾಗಿ ಸಲ್ಲಬೇಕಾದ ಸ್ಥಾನಮಾನಗಳಾದ ನಿಗಮ ಮಂಡಳಿ, ನಗರಸಭೆ, ಪುರಸಭೆ, ನಗರ ಪಾಲಿಕೆಗಳಲ್ಲಿ ಹಾಗೂ ಇತರೆ ಇಲಾಖೆಗಳಲ್ಲಿ ನಾಮ ನಿರ್ದೇಶನ ಮಾಡದೇ ನಿರ್ಲಕ್ಷಿಸಿತ್ತು. ಕೊರೊನಾ ಸಂದರ್ಭದಲ್ಲಿಯೂ ವಿಶ್ವಕರ್ಮ ಸಮುದಾಯಕ್ಕೆ ನೆರವು ನೀಡಲಿಲ್ಲ. ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಕಡುಬಡವರಿಗೆ ಆಹಾರ ಧಾನ್ಯಗಳ ಕಿಟ್ ಹಾಗೂ ಪರಿಹಾರ ಹಣವನ್ನೂ ನೀಡಿಲ್ಲ. ಇದರಿಂದ ಸಮುದಾಯದ ಹಲವಾರು ಮಂದಿ ಸೂಕ್ತ ಚಿಕಿತ್ಸೆ ಸಿಗದೆ ಮೃತಪಟ್ಟಿದ್ದಾರೆ. ನಮ್ಮ ಸಮುದಾಯವನ್ನು ನಿರ್ಲಕ್ಷಿಸಿ ಸಾಮಾಜಿಕ ಅನ್ಯಾಯ ಎಸಗಲಾಗಿದೆ ಎಂದು ಆರೋಪಿಸಿದರು.

ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ನೇತೃತ್ವದ ಸರ್ಕಾರದಲ್ಲಿ ವಿಶ್ವಕರ್ಮ ಸಮುದಾಯದ ಮುಖಂಡರಿಗೆ ಉತ್ತಮ ಸ್ಥಾನಮಾನ ನೀಡಿ, ಸಮುದಾಯಕ್ಕೆ ಸರ್ಕಾರದ ಸೌಲಭ್ಯ ನೀಡಲಿ ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ವಕೀಲ ಕುಮಾರ್, ಮುಖಂಡ ಚಂದ್ರಶೇಖರ್ ಇದ್ದರು.

ಡಿಜಿಟಲ್ ಕ್ಷೇತ್ರದಲ್ಲಿ ಭಾರತದ ಬಹುದೊಡ್ಡ ಸಾಧನೆ

ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಮಾಹಿತಿ

ಮೈಸೂರು, ಮೇ 19(ಎಂಕೆ)– ಡಿಜಿಟಲ್ ಕ್ರಾಂತಿಯಲ್ಲಿ ಭಾರತ ಬಹುದೊಡ್ಡ ಸಾಧನೆ ಮಾಡಿದೆ ಎಂದು ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ



ಸಿ.ವಿ.ಗೋಪಿನಾಥ್ ಹೇಳಿದರು. ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವ ದೂರಸಂಪರ್ಕ ಮತ್ತು ಮಾಹಿತಿ ಸಮಾಜ ದಿನ ಆಚರಣೆ ಕುರಿತು ಮಾತನಾಡಿದ ಅವರು, ಆತ್ಮನಿರ್ಭರ ಭಾರತ್ ಯೋಜನೆಯ ಫಲವಾಗಿ ಡಿಜಿಟಲ್ ಮಾಪನಗಳನ್ನು ರಫ್ತು ಮಾಡುವ ಹಂತಕ್ಕೆ ಭಾರತ ದಾಪುಗಾಲಿಟ್ಟಿದೆ ಎಂದರು.

ಮೇ 17, 1865ರಲ್ಲಿ ಆರಂಭವಾದ ಇಂಟರ್‌ನ್ಯಾಷನಲ್ ಟೆಲಿಗ್ರಾಫ್ ಯೂನಿಯನ್, ತದನಂತರ ಇಂಟರ್‌ನ್ಯಾಷನಲ್ ಟೆಲಿಗ್ರಾಫ್ ಮತ್ತು ಟೆಲಿಫೋನ್ ಯೂನಿಯನ್ ಆಗಿ ಬದಲಾಯಿತು. ಈ ವೇಳೆ ವಿಶ್ವ ರಾಷ್ಟ್ರ ಸಂಸ್ಥೆ ಯೂನಿಯನ್ ಅನ್ನು ತನ್ನ ಅವಿಭಾಜ್ಯ ಅಂಗವನ್ನಾಗಿ ಮಾಡಿ ಕೊಂಡಿತು. ಹಾಗೆಯೇ ಹೊಸ ಹೊಸ ಸಂಶೋಧನೆಗಳು ನಡೆದಂತೆ ಹಾಗೂ ಮಾಹಿತಿ ಅಥವಾ ಸಂದೇಶ ರವಾನೆಯಲ್ಲಿ ಪರಿಪಕ್ವತೆ ಸಾಧಿಸಲು 2006ರಲ್ಲಿ ಇನ್ಫಾರ್ಮೇಶನ್ ಸೊಸೈಟಿಯೊಂದಿಗೆ ಇಂಟರ್‌ನ್ಯಾಷನಲ್ ಟೆಲಿಗ್ರಾಫ್ ಮತ್ತು ಟೆಲಿಫೋನ್ ಯೂನಿಯನ್ ಸೇರ್ಪಡೆಯಾಯಿತು. ಹಾಗೆಯೇ 2017ರಲ್ಲಿ ಇನ್ಫಾರ್ಮೇಶನ್ ಕಮ್ಯೂನಿಕೇಷನ್ ಟೆಕ್ನಾಲಜಿ ಅಂಡ್ ಇನ್ಫಾರ್ಮೇಶನ್ ಸೊಸೈಟಿ (ಐಸಿಸಿ)ಯಾಗಿ ಅಂದಿನಿಂದ ಇಂದಿನವರೆಗೆ ಸಂಪರ್ಕ ಮಾಪನಗಳ ಸಂಶೋಧನೆಯಲ್ಲಿ ತೊಡಗಿಕೊಂಡಿದೆ. ಹೆಸರು ಬದಲಾದರೂ ಸ್ಥಾಪನೆಯಾದ ದಿನಾಂಕವನ್ನು ಬದಲಾವಣೆ ಮಾಡದೆ ಮೇ 17 ಅನ್ನು ವಿಶ್ವ ದೂರಸಂಪರ್ಕ ಮತ್ತು ಮಾಹಿತಿ ಸಮಾಜ ದಿನವನ್ನಾಗಿ ಆಚರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಇತ್ತೀಚಿನ ಕೆಲ ವರ್ಷಗಳಲ್ಲಿ ಡಿಜಿಟಲ್ ಬಳಕೆ ಹೆಚ್ಚಾಗಿದ್ದು, ವಿಶ್ವದೆಲ್ಲೆಡೆ ಡಿಜಿಟಲ್ ಕ್ರಾಂತಿಯೇ ನಡೆದಿದೆ. ಮೊಬೈಲ್ ರಿಚಾರ್ಜ್ ಮಾಡುವುದರಿಂದ ಹಿಡಿದು ಬಹುತೇಕ ವ್ಯವಹಾರಗಳು ಡಿಜಿಟಲ್ ಮೂಲಕವೇ ನಡೆಯುತ್ತಿವೆ. ಆನ್‌ಲೈನ್ ಇಲ್ಲದೆ ಏನೂ ಇಲ್ಲ ಎಂಬಂತಾಗಿದೆ. ಡಿಜಿಟಲ್ ಸಾಧನಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಭಾರತವಿಂದು ರಫ್ತು ಮಾಡುವ ಹಂತಕ್ಕೆ ತಲುಪಿದೆ ಎಂದು ಹೇಳಿದರು.

ಗಣಪತಿ, ಸರಸ್ವತಿ ಜತೆಗೆ ಮಕ್ಕಳು ವ್ಯಾಸರನ್ನು ಪ್ರಾರ್ಥಿಸಬೇಕು

"ದಿನಕ್ಕೊಂದು ಪೌರಾಣಿಕ ಕಥೆ" 12 ಕೃತಿಗಳ ಲೋಕಾರ್ಪಣೆ ಮಾಡಿದ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮೈಸೂರು, ಮೇ 19 (ಜಿಎ)– ಮಕ್ಕಳಿಗಾಗಿ ಹೊರತಂದಿರುವ 'ದಿನಕ್ಕೊಂದು ಪೌರಾಣಿಕ ಕಥೆ' ಎಂಬ 12 ಕೃತಿಗಳನ್ನು ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳು ಬಿಡುಗಡೆಗೊಳಿಸಿದರು.

ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಪರಿಕಲ್ಪನೆಯಲ್ಲಿ ಲೇಖಕ ಡಾ.ಬೆ.ಗೋ. ರಮೇಶ್ ರಚಿಸಿ, ಚೇತನ ಬುಕ್ ಹೌಸ್ ಪ್ರಕಾಶನದಲ್ಲಿ ಮಕ್ಕಳಿಗಾಗಿ ಹೊರತಂದಿರುವ 'ದಿನಕ್ಕೊಂದು ಪೌರಾಣಿಕ ಕಥೆ' ಎಂಬ 12 ಕೃತಿಗಳನ್ನು ಶುಕ್ರವಾರ ಆಶ್ರಮದಲ್ಲಿ ಲೋಕಾರ್ಪಣೆಗೊಳಿಸಿದರು.



ನಂತರ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಮಾತನಾಡಿ, ವ್ಯಾಸರು ಪುರಾಣ ಮತ್ತು ಉಪನಿಷತ್ತುಗಳ ಮೂಲ ಕರ್ತೃ. ಮಕ್ಕಳು ಸರಸ್ವತಿ, ಗಣಪತಿಯನ್ನು ಪ್ರಾರ್ಥಿಸುವುದರೊಟ್ಟಿಗೆ ವ್ಯಾಸರನ್ನು ಪ್ರಾರ್ಥಿಸಬೇಕು. ಇಂದು ಬಿಡುಗಡೆಗೊಂಡಿರುವ ಎಲ್ಲಾ ಕೃತಿಗಳು ಅದ್ಭುತವಾಗಿ ಮೂಡಿ ಬಂದಿವೆ. ಈ ಹಿಂದೆ "ಈ ನಾಡು" ಎಂಬ ಪತ್ರಿಕೆಯಲ್ಲಿ 'ದಿನಕ್ಕೊಂದು ಕಥೆ' ಎಂಬ ಹೆಸರಿನಲ್ಲಿ ಇಂತಹ ಕಥೆ ಪ್ರಕಟವಾಗುತ್ತಿದ್ದವು, ತೆಲುಗಿನ ಜನತೆಯ ಒತ್ತಡ ಹೆಚ್ಚಾದ ನಂತರ ತೆಲುಗಿನಲ್ಲಿಯೂ ದಿನಕ್ಕೊಂದು ಕಥೆಗಳು ಪ್ರಕಟವಾಯಿತು. ಅದರಂತೆ ಈ ಪುಸ್ತಕಗಳು ಬಿಡುಗಡೆಯಾಗಿದ್ದು, ಸುಮಾರು 360 ಕಥೆಗಳನ್ನು ಒಳಗೊಂಡಿದೆ ಎಂದರು.

ಮಹಾಭಾರತದ ಕಥೆಗಳನ್ನು ದೊಡ್ಡವರಲ್ಲಿ ಜ್ಞಾನವನ್ನು ಹೆಚ್ಚಿಸುತ್ತದೆ. ಹಾಗೇ ಮಕ್ಕಳಲ್ಲಿ ಸಂಸ್ಕೃತಿಯ ಬಗ್ಗೆ ಗೌರವವನ್ನು ಹೆಚ್ಚಿಸುತ್ತದೆ. ಜನರಲ್ಲಿ ಓದುವ ಹವ್ಯಾಸ ಕಡಿಮೆ ಆಗಿದೆ. ಕೇಳುವ ಹವ್ಯಾಸ ಮೂಡಿಸಬೇಕು. ಇದಕ್ಕಾಗಿ ನಾನು ಯಾವುದೇ ಕಥೆಗಳನ್ನು ಹೇಳಬೇಕಾದರೆ, ಅರ್ಧದಲ್ಲಿ ನಿಲ್ಲಿಸುತ್ತೇನೆ. ನಂತರ ಕೇಳುಗರು ಮುಂದಿನ ಭಾಗದ ಬಗ್ಗೆ ಹೇಳಿ ಎಂದಾಗ ಬಾಕಿ ವಿಚಾರಗಳು ಪುಸ್ತಕದಲ್ಲಿದೆ ಓದಿ ಎಂದು ಅವರನ್ನು ಪ್ರೇರೇಪಿಸಿ, ಪುಸ್ತಕ ಓದುವುದಕ್ಕೆ ಸಲಹೆ ನೀಡುತ್ತೇನೆ. ಪುಸ್ತಕ ಓದುವುದರಿಂದ ಜ್ಞಾನ ವೃದ್ಧಿಯಾಗಿ ಸಾಹಿತ್ಯ, ಕಥೆಗಳನ್ನು ಬರೆಯುವುದು ರೂಢಿಯಾಗುತ್ತದೆ ಎಂದು ತಿಳಿಸಿದರು.

ಜನರಲ್ಲಿ ಓದುವುದಕ್ಕೆ ಉತ್ತೇಜನ ನೀಡಲು ಆಶ್ರಮದ ವತಿಯಿಂದ ಎಸ್‌ಜಿಎಸ್ ಪೋರ್ಟಲ್ ರೂಪಿಸಿದ್ದು, ಇದರ ಅರ್ಥ 'ಸಿಂಪಲ್ ಗಾಡ್ಸ್ ಸೇಸ್' (ಎಸ್‌ಜಿಎಸ್) ಇದರಲ್ಲಿ ಎಂಟು ಭಾಷೆಯ ಕಥೆಗಳು ಪ್ರತಿದಿನ ಪ್ರಕಟವಾಗುತ್ತಿದೆ. ಪ್ರತಿ ನಿತ್ಯವೂ ಕರ್ನಾಟಕ, ಆಂಧ್ರ ಮತ್ತು ತಮಿಳುನಾಡು ಸೇರಿದಂತೆ ದೇಶದ ನಾನಾ ರಾಜ್ಯದ ಜನತೆ ಬಹಳ ಉತ್ಸುಕರಾಗಿ ಕಥೆಗಳನ್ನು ಓದುತ್ತಿದ್ದಾರೆ. ಇದರಲ್ಲಿ ಬರುವ ಕಥೆಗಳನ್ನು ಮುಂದಿನ ದಿನಗಳಲ್ಲಿ ಮುದ್ರಿಸಿ ಪ್ರಕಟಣೆ ಮಾಡಬೇಕೆಂಬ ಆಸೆ ಇದೆ ಎಂದರು.

ಕೃತಿಗಳ ಕುರಿತು ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮಾತನಾಡಿ, ಹಿಂದೆ ಕಥೆಗಳನ್ನು ಕೇಳಿದರೆ, ವೈಕುಂಠ ದರ್ಶನವಾಗುತ್ತದೆ ಎಂದು ಹೇಳಲಾಗುತ್ತಿತ್ತು. ಇಂದು ಕಥೆಗಳು ನಮ್ಮನ್ನು ವ್ಯಥೆಯತ್ತ ಕೊಂಡೊಯ್ಯುತ್ತಿದೆ. ಆದರೆ, ಇಂದು ಬಿಡುಗಡೆಯಾಗಿರುವ ಎಲ್ಲಾ ಕೃತಿಗಳು ಅಮೂಲ್ಯ ರತ್ನಗಳಂತಿವೆ ಎಂದರು.

ಇದು ಮಕ್ಕಳಿಗಾಗಿ ಬರೆದ ಕಥೆ. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಪೌರಾಣಿಕ ಕಥೆ ಹೇಳುವ ಯುಗ ಮುಗಿಯಿತು. ಮಕ್ಕಳಿಗೆ ಕಥೆ ಹೇಳುವುದು ಪೋಷಕರ ಹೊಣೆ. ಆದರೆ, ಎಲ್ಲಾ ಪೋಷಕರು ರ್‍ಯಾಂಕ್‌ನ ಹಿಂದೆ ಬಿದ್ದಿದಾರೆ. ಭಾರತೀಯ ಸಂಸ್ಕೃತಿ ಅರ್ಥ ಮಾಡಿಕೊಳ್ಳಲು ಇದು ಸೂಕ್ತವಾಗಿದೆ. 360 ಕಥೆಗಳು ಮಕ್ಕಳ ಮನಸನ್ನು ಅರಳಿಸುತ್ತದೆ. ಜೊತೆಗೆ ಅರ್ಥಪೂರ್ಣ ಕಥೆಗಳನ್ನೊಳಗೊಂಡಿದ್ದು, ಚಿತ್ರಗಳು ಮಕ್ಕಳನ್ನು ಆಕರ್ಷಿಸುತ್ತಿವೆ. ಭರತ, ರಾಮ, ಹರಿಶ್ಚಂದ್ರನ ಕಥೆ, ನೀತಿ ಕಥೆ, ಪ್ರಾಣಿ–ಪಕ್ಷಿಗಳ ಕಥೆ ಸೇರಿದಂತೆ ಎಲ್ಲಾ ರೀತಿಯ ಪೌರಾಣಿಕ ಕಥೆಗಳು ಈ ಕೃತಿಯಲ್ಲಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ದತ್ತ ವಿಜಯಾನಂದ ಸ್ವಾಮಿ, ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ರಂಗಕರ್ಮಿ ರಾಜಶೇಖರ್ ಕದಂಬ, ಕೃತಿ ಲೇಖಕ ಡಾ.ಬೆ. ಗೋ.ರಮೇಶ್, ಹಿರಿಯ ಪತ್ರಕರ್ತ ಸತ್ಯಲಿಂಗರಾಜ್, ಕಾರ್ಯಕ್ರಮ ಸಂಯೋಜಕ ಎಸ್.ಪ್ರಕಾಶ್ ಬಾಬು, ಕನ್ನಡ ಸಾಹಿತ್ಯ ಕಲಾಕೂಟದ ಚಂದ್ರಶೇಖರ್, ರಂಗನಾಥ ಮೈಸೂರು, ಚೇತನ ಬುಕ್‌ಹೌಸ್‌ನ ನಟರಾಜ್ ಚೌದರಿ ಮತ್ತು ಮುತ್ತು ನಾಗಾರ್ಜುನ ಚೌಧರಿ ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಲೇಡೀಸ್ ಹೆಲ್ಪರ್ ಮತ್ತು ಕ್ಯಾಶೀಯರ್ ಮೇಟಗಳ್ಳಿ ರಿಂಗ್ ರಸ್ತೆಯಲ್ಲಿರುವ ಶ್ರೀ ವರ ಗಣಪತಿ ಫ್ಯೂಯಲ್ ಸ್ಟೇಶನ್‌ನಲ್ಲಿ ಕೆಲಸ ಮಾಡಲು ಸಂಪರ್ಕಿಸಿ:

7259858585

ಬೇಕಾಗಿದ್ದಾರೆ
ಮೈಸೂರು ಕಾಫಿ ಕೆಫೆಗೆ ಕಾಫಿ/ಟೀ ಮಾಡುವುದಕ್ಕೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು: 20 ರಿಂದ 30

Freshers Preferred

7259483181

SITE FOR SLE
30X40 Site

2000/ Sqft Negotiable

Near Yelawala Hobli, Maidanahalli Survay No. 144/3

8217478332

Brokers Excuse

ಮಂಟಪ ಮನೆ


ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ

ಸಂಪರ್ಕಿಸಿ: ಶ್ರೀನಗರ ಮೈಸೂರು

9448207634
9036742526

ನಿವೇಶನ ಮಾರಾಟಕ್ಕಿದೆ
ಸರ್.ಎಂ.ವಿ. ಬಡಾವಣೆಯಲ್ಲಿ ಸೈಟ್ ನಂ 261, 60x40, W/F

MUDA Approved

ಆರ್.ಟಿ.ನಗರ ಹತ್ತಿರ, ಲಿಂಗಾಬುದಿ ಪಾಳ್ಯ, ಮೈಸೂರು

(Broker Excuse)

ಸಂಪರ್ಕಿಸಿ: **9480384038**

2 ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ
12x10 ಪಶ್ಚಿಮ ದಿಕ್ಕು (1 ಮಳಿಗೆ) ರಾಮಕೃಷ್ಣನಗರ, ಸುಯೋಗ್ ಆಸ್ಪತ್ರೆ ಹತ್ತಿರ

7676265267
9448890254

ಬೇಕಾಗಿದ್ದಾರೆ
1) ರೂಂ ಬಾಯ್ಸ್ 18 ರಿಂದ 22 ವರ್ಷದವರು

2) ಮನೆ ಕೆಲಸಕ್ಕೆ – ಮಹಿಳೆ ಬೇಕಾಗಿದ್ದಾರೆ. ಸಿದ್ಧಾರ್ಥನಗರ, ಮನೆಯಲ್ಲೇ ಉಳಿದುಕೊಳ್ಳುವ ಅವಕಾಶವಿದೆ.

8073412866
0821-2471571

ಮನೆ ಬಾಡಿಗೆಗೆ ಇದೆ
1 ಹಾಗೂ 2 ರೂಂ ಮನೆ ಬಾಡಿಗೆಗೆ ಇದೆ (ಎರಡು ಮನೆ) 2828/2 & 2ಎ, ಬಸವೇಶ್ವರ ರಸ್ತೆ, 15ನೇ ಕ್ರಾಸ್, ಕೆ.ಆರ್.ಮೊಹಲ್ಲಾ, ಮೈಸೂರು-570004 (ಹರ್ಷ ಪ್ರಿಂಟರ್ಸ್ ಪಕ್ಕ) ಸಸ್ಯಹಾರಿಗಳಿಗೆ ಮಾತ್ರ

7760699503

Pranitha Computers
Mysore Ph: 74068 54998

Used **Laptops** .available

Starts @ 8,900/- (8gb Ram,500g hd)

ನಿವೇಶನ ಮಾರಾಟಕ್ಕಿದೆ
ಮೈಸೂರು–ಹುಣಸೂರು ರಸ್ತೆಯ ಮನುಗನಹಳ್ಳಿಯ ಹತ್ತಿರ 30x40 ಅಳತೆಯ ನಿವೇಶನ ಮಾರಾಟಕ್ಕಿದೆ

8296917002

St. Mary's GIRLS PU COLLEGE
Chamundipuram, Mysore

* Admission Open
* Arts & Commerce
* Affordable Fee

9972389020
9844144232

above 85%, Free Admission

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ ವಿದ್ಯಾರ್ಹತೆ :- ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ:-13,448 + ESI & PF & ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲೆಗಳು, ಆಧಾರ್, ಬ್ಯಾಂಕ್ ಪಾಸ್ ಬುಕ್, ಫೋಟೊ -6, ಟಿ.ಸಿ, ಮಾರ್ಕ್ಸ್‌ಕಾರ್ಡ್ ಕಡ್ಡಾಯ

8453408502 , 9108100117

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: **9008711654**

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಯಕಿ ಬೇಕಾಗಿದ್ದಾರೆ

9449380528
7026498386

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)

MOB: 9880583804

ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.

ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

8861612486

CORNER HOUSE FOR SALE
35x45

Preethi Layout Sreerampura IInd Stage, Mysore

G/F - 2 Shops + 2BHK, F/F - 3 BHK S/F Room with Attach Bath

9342183724

ಸಾಲ/LOANS
1) House Purchase Loan
2) Site Purchase Loan
3) Construction Loan
4) Mortgage Loan

77605-98705

AL-KABIR SCHOOL
(ENGLISH MEDIUM)

S S Nagar, Bannimantap, 'B' Layout, Mysore-570 015

TEACHERS REQUIRED

* NST / Montessori Trained
* B.Sc., B.Ed., (CBZ)
* Physical Education (C.P.Ed., / B.P.Ed.,)
* Hindi - B.A., B.Ed.,

ADMISSIONS OPEN LKG to X Std.,

Call : **99721 66786**

AMAZE


SUNZONE SOLAR SYSTEM

VM Double Road, Kuvempunagar, Mysuru

9845175443

ಮನೆ ಮಾರಾಟಕ್ಕಿದೆ
20x40 ಪಶ್ಚಿಮ ದಿಕ್ಕು, (ನಂದಿಬಾಗಿಲು,) ನೆಲಮಹಡಿ ಮತ್ತು ಮೊದಲನೆ ಮಹಡಿ ನಂ.181, ಮೊದಲನೆ ಹಂತ, ಗಾಯತ್ರಿಪುರಂ, ಮೈಸೂರು

9964377448

ಸೈಟು ಮಾರಾಟಕ್ಕಿದೆ
30x40 ನ್ಯಾಯಾಂಗ ಬಡಾವಣೆ

20x38 ಸೋಮನಾಥನಗರ ದಟ್ಟಗಳ್ಳಿ

9741076619

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್

ಮೊ.: 9731839596

ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:- ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

FOR RENT
2 BHK Apartment for Rent Acropolis, Bogadi Gaddige Main Road (Broker Execuse)

9448040401

ಬೇಕಾಗಿದ್ದಾರೆ
1) ಹೌಸ್ ಕೀಪಿಂಗ್‌ಗೆ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು-8 ಗಂಟೆ ಕೆಲಸ.

2) ಕುವೆಂಪುನಗರದಲ್ಲಿ ಅಡುಗೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ – 8 ಗಂಟೆ ಕೆಲಸ.

3) ಸೆಕ್ಯೂರಿಟಿ ಗಾರ್ಡ್–12 ಗಂಟೆ ಕೆಲಸ.

4) ಪಾರ್ಟ್‌ಟೈಮ್ ಮಹಿಳಾ ಅಕೌಂಟೆಟ್

ಕೂಡಲೇ ಸಂಪರ್ಕಿಸಿ :

ಹರ್ಷ : **91080 62223**

ತುಳಸಿದಾಸ : **84312 46958**

IAS COACHING CLASS
Integrated Prelims & Mains

100% Result Oriented Coaching

Starts on 15-06-2023

Selected Top 100 Seats Only

Upto 100% Scholarship for Top 30 Seats **

Call : Scholarship & Entrance Test

Last Date: 25-05-2023

9108982242

INDIAN CIVIL SERVICES TRAINING ACADEMY MYSORE -23

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:

Mob: **91085 66022**

HOUSE FOR RENT
1 BHK

Near JC Layout Suitable for Small Family

9841074214

ಬೇಕಾಗಿದ್ದಾರೆ
ದಟ್ಟಗಳ್ಳಿ ರಿಯಲ್ ಎಸ್ಟೇಟ್ ಕಛೇರಿಯಲ್ಲಿ Part Time ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ವಿದ್ಯಾರ್ಹತೆ PUC ಸಮಯ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆ ಸಂಬಳ 8,000/- ರೂಪಾಯಿಗಳು ಸಂಪರ್ಕಿಸಿ:

8861042449

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ಮಹಿಳೆಯರು ಬೇಕಾಗಿದ್ದಾರೆ.

ಸಂಬಳ: 12,000/–

8892258814

ಸೈಟ್ಸ್ @ ಮೈಸೂರು
T-Narasipura Road, ವರುಣ ಲೇಕ್ ವ್ಯೂ

MUDA APPROVED MUDA KHATA

ಮುಂಬರಲಿರುವ ಜೆಎಸ್‌ಎಸ್ ಯೂನಿವರ್ಸಿಟಿ ಹತ್ತಿರ

GSS **89512-76688**

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

6364079244

ಸೈಟ್ಸ್ @ ಮೈಸೂರು
ಇಲವಾಲ ಬಸ್ ಸ್ಟ್ಯಾಂಡ್ ಹತ್ತಿರ

DTCP APPROVED

ಹೂಡಿಕೆಗೆ / ಮನೆ ಕಟ್ಟಲು ಸೂಕ್ತವಾದ ಸ್ಥಳ ಮುಂಬರಲಿರುವ ಮೈಸೂರು ಕುಶಾಲ್ ನಗರ ರಾಷ್ಟ್ರೀಯ ಹೆದ್ದಾರಿಯ ಹತ್ತಿರ

GSS **89512-76688**

30X40 HOUSE FOR RENT
East Face, Vastu, built with Two wardrobe rooms, Granite, Kitchen, Pooja Room, Showcase, Geyser, Solar, place for car & Two wheeler, commode, Teakwood doors, Rs. 13000/- P.M. Negotiable. No Brokers.

M: **6361760880**

D. No. 7, Lakshmikantha Nagar, Hebbal, behind Ganesha Temple, Mysore.

ಜಮೀನು ಮಾರಾಟಕ್ಕಿದೆ
2 ಎಕರೆ 7 ಗುಂಟೆ ಮೈಸೂರಿನಿಂದ 22. K.M ಅಂತರ ಮಧ್ಯವರ್ತಿಗಳು ಕ್ಷಮಿಸಿ

9845562381

ಹೋಂ ನರ್ಸಿಂಗ್ ಸೇವೆ & ಕೆಲಸ
ಮನೆ, ಆಸ್ಪತ್ರೆಗಳಲ್ಲಿ ವೃದ್ಧರು, ರೋಗಿಗಳನ್ನು ನೋಡಿಕೊಳ್ಳಲು ಅನುಭವ ಇರುವ ಹೋಂ ನರ್ಸ್‌ಗಳನ್ನು ಕಳುಹಿಸಿಕೊಡಲಾಗುವುದು. ಹೋಂ ನರ್ಸ್ ಕೆಲಸ ಬೇಕಾದಲ್ಲಿ ತಕ್ಷಣವೇ ಸಂಪರ್ಕಿಸಿ

9035113222
9739292222

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ: 18000/- W/o (8Hrs) ಊಟ ತಿಂಡಿ ಮತ್ತು ಪಿಕ್ & ಡ್ರಾಪ್ ವ್ಯವಸ್ಥೆ ಇರುತ್ತದೆ.

9538567819
9620777819

ಹೆಸರು ಬದಲಾವಣೆ
ಮೈಸೂರು ಜಿಲ್ಲೆ, ತಿನರಸೀಪುರ ತಾಲ್ಲೂಕು, ತಲಕಾಡು ಹೋಬಳಿ, ಹೊಸಕುಕ್ಕೂರು ಗ್ರಾಮದಲ್ಲಿ ವಾಸವಾಗಿರುವ ಮನೋಹರ್ ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನಾನು ನನ್ನ ಎಲ್ಲಾ ವ್ಯವಹಾರಗಳನ್ನು ಎಂ. ಸುಭಾಷ್ ಎಂಬ ಹೆಸರಿನಿಂದಲೇ ವ್ಯವಹರಿಸುತ್ತಾ ಇರುತ್ತೇನೆ, ನನಗೆ ಸೇರಿದ ಆಧಾರ್ ಕಾರ್ಡ್ ಸಂಖ್ಯೆ 8203 6672 2074 ಹಾಗೂ ಮತ್ತಿತರ ನನ್ನ ಎಲ್ಲಾ ದಾಖಲಾತಿಯಲ್ಲಿ ನನ್ನ ಹೆಸರನ್ನು ಎಂ. ಸುಭಾಷ್ ಎಂದೇ ನಮೂದಾಗಿರುತ್ತದೆ. ಈ ಹಿಂದೆ ನನ್ನ ಹೆಸರು ಮನೋಹರ್ ಎಂಬುದಾಗಿತ್ತು, ಅದನ್ನು ನಾನು ನನ್ನ ಸ್ವಇಚ್ಛೆಯಿಂದ ಎಂ. ಸುಭಾಷ್ ಎಂದು ಬದಲಾಯಿಸಿಕೊಂಡಿದ್ದು, ನೋಟರಿ ಸಿದ್ದಪ್ಪಾಜಿಚಾರಿರವರ ಎದುರು ದಿನಾಂಕ 19–5–2023 ರಂದು ಪ್ರಮಾಣೀಕರಿಸಿರುತ್ತೇನೆ.

ಸಹಿ/– ಎಂ. ಸುಭಾಷ್

ಹೊಸ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ
30x40, N/F, E/ಡೋರ್, 3 BHK / ಅಟ್ಯಾಚ್ ಬಾತ್, ಆಲ್‌ಟೀಕ್, ಇಟಾಲಿಯನ್ ಕಿಚನ್, ಕಾರ್ ಪಾರ್ಕ್, ಪಿಲ್ಲರ್ ಬಳಸಿ ಕಟ್ಟಲಾಗಿದೆ. ಕಂದಾಯನಗರ 1ನೇ ಹಂತ, ಶ್ರೀರಾಂಪುರ.

Mob: **9901899355**

ಬೇಕಾಗಿದ್ದಾರೆ
1) ಎಲೆಕ್ಟ್ರಿಷಿಯನ್ - 2 ಹುದ್ದೆ

ಸಂಪರ್ಕಿಸಿ:

Mob: **9108085994**

ಮನೆ ಮಾರಾಟಕ್ಕಿದೆ
30x40, 2 BHK ಮನೆ ಮಾರಾಟಕ್ಕಿದೆ. ಭೀಮ ಅಶ್ವಿನಿ ಬಡಾವಣೆ, ಶ್ರೀನಗರ.

8420819603, 6363270474

ಬೇಕಾಗಿದ್ದಾರೆ
1) ಹೌಸ್‌ಕೀಪಿಂಗ್ ಸೂಪರ್‌ವೈಸರ್ – 2 ಹುದ್ದೆ

ಸಂಪರ್ಕಿಸಿ:

Mob: **9620274630**

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ

(II Marriages Also)

9343175000

ಕೆಲಸಕ್ಕೆ ಬೇಕಾಗಿದ್ದಾರೆ
ಸಂಪು ಮತ್ತು ಟ್ಯಾಂಕ್‌ನ್ನು ಮಿಷನರಿ ಬಳಸಿ ಕ್ಲೀನಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ. ಜೊತೆಗೆ ಮಾರುತಿ Omni Carನ್ನು ಓಡಿಸುವವರಿಗೆ ಮೊದಲ ಆದ್ಯತೆ. ಆಕರ್ಷಕ ಸಂಬಳ ನೀಡಲಾಗುವುದು. ಮೈಸೂರಿನಿಂದ ಹೊರಗಡೆಯವರಿಗೆ ರೂಂನ್ನು ಮಾಡಿಕೊಡಲಾಗುವುದು.

9742361663
8123179664

ಹೊಸ ಮನೆ ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ ಮನೆ ವೆಸ್ಟ್ ಫೇಸ್, ನಾರ್ತ್ ಡೋರ್, ಇಟಾಲಿಯನ್ ಕಿಚನ್, ವಾಡ್ರೋಬ್ ಗ್ರಾನೈಟ್, ಸಿಸಿ ಕ್ಯಾಮೆರಾ, ಸೋಲಾರ್, ಚಿಮ್ನಿ, ಪಿಓಪಿ ರೂಮ್ ಮತ್ತು ಹಾಲಿಗೆ ಫ್ಯಾನ್, ಉಯ್ಯಾಲೆ, ಟೀಕ್‌ವುಡ್ ಮರ ಬಾಗಿಲು ಮತ್ತು ಕಿಟಕಿಗೆ ಜಾಗ್ವಾರ್ ನಲ್ಲಿಗಳು ಬಾತ್‌ಟಬ್, ಆರ್ಕಿಟೆಕ್ಟ್ ಮನೆ ನಿಯರ್ ರೋಟರಿ ಸ್ಕೂಲ್, ಜ್ಯೋತಿ ಹಾಸ್ಪಿಟಲ್ ಪಕ್ಕ, ರಿಂಗ್ ರೋಡ್ ಹತ್ತಿರ, ದಟ್ಟಗಳ್ಳಿ, ಸಂಪರ್ಕಿಸಿ:

Mob: **9900372013**

ಸುವರ್ಣ ಯಾತ್ರ
21–6–2023: ಕಾಶಿ ಪ್ರವಾಸ 6 ದಿನಗಳು. 8–6–2023: ನೇಪಾಳ ಪಶುಪತಿನಾಥ, ಮುಕ್ತಿನಾಥ ಪ್ರವಾಸ 9 ದಿನಗಳು. 18–6–2023: ಪುರಿಜಗನ್ನಾಥ, ಕೋನಾರ್ಕ್, ಭುವನೇಶ್ವರ ಪ್ರವಾಸ 4 ದಿನಗಳು. 23–6–2023 ಕೇರಳ ಪ್ರವಾಸ, ಮುನ್ನಾರ್, ಆಲಪ್ಪಿ, ಅನಂತ ಪದ್ಮನಾಭ ಇತರೆ 7 ದಿನಗಳು.

9008381022, 9091962508

ಮನೆ ಮಾರಾಟ ಮತ್ತು ಭೋಗ್ಯ / ಸೈಟು ಬೇಕಾಗಿದೆ
ಅಳತೆ 11x40 ರಲ್ಲಿ ಆಲ್ಟ್ರೇಷನ್ ಆಗಿರುವ ಪಶ್ಚಿಮ ದಿಕ್ಕಿನ ಶೀಟಿನ ಮನೆ ನಂ. 558, ಸುಬ್ರಮಣ್ಯ ದೇವಸ್ಥಾನದ ರಸ್ತೆ, ಬನ್ನಿಮಂಟಪ ಹುಡ್ಕೋದಲ್ಲಿ ಮಾರಾಟಕ್ಕೆ ಮತ್ತು ಭೋಗ್ಯಕ್ಕಿದೆ ಹಾಗೂ ದೇವನೂರು, ಸಾತಗಳ್ಳಿ, ಡಿ.ಟಿ.ಎಸ್. ರಾವ್ ನಗರದಲ್ಲಿ ಎಲ್ಲಾ ಅಳತೆಯ ಸೈಟು ಬೇಕಾಗಿದೆ.

ಸಂಪರ್ಕಿಸಿ: ಶಿವಪ್ಪ

Mob: **9141050266**

Homeopathic Clinic
at Mysore Near Jaganmohan Palace and City Bus Stand for Sale or Partnership

8277195540
7483335952

ಮನೆ ಮಾರಾಟಕ್ಕಿದೆ
ಕನಕದಾಸನಗರ (ದಟ್ಟಗಳ್ಳಿ) ಮೈಸೂರು ಸಿಟಿ # 86, 'ಎಂ'ಬ್ಲಾಕ್, 3ನೇ ಹಂತ, 3ನೇ ತಿರುವ (ನಂದಿ ಸರ್ಕಲ್ ಹತ್ತಿರ) ಪೂರ್ವಾಭಿಮುಖವಾಗಿ ಕಾರ್ನರ್‌ನಲ್ಲಿ 30x25 ಅಳತೆಯಲ್ಲಿ ನಿರ್ಮಿಸಿರುವ 4 ಬೆಡ್‌ರೂಂಗಳುಳ್ಳ 2 ಅಂತಸ್ತಿನ ಮನೆ ತಕ್ಷಣದಲ್ಲಿ ಮಾರಾಟಕ್ಕಿದೆ.

9611881603

ಶಿಕ್ಷಕಿಯರು ಬೇಕಾಗಿದ್ದಾರೆ
ಅಕ್ಷರಧಾಮ ಇಂಟರ್‌ನ್ಯಾಷನಲ್ ಸ್ಕೂಲ್, ಕೆಸ್ತೂರು, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ಈ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಲು NST, D.Ed, BA, B.Ed, B.Sc, B.Ed, M.A, BEd, M.Sc, B.Ed Hindi ಶಿಕ್ಷಕಿಯರು ಬೇಕಾಗಿದ್ದಾರೆ. ಆಕರ್ಷಕ ವೇತನ ಹಾಗೂ ಉಚಿತ ವಸತಿ ಕಲ್ಪಿಸಲಾಗುವುದು.

9945088740
7676515151

FOR RENT
Commercial Space 600 Sqft with 10 HP Power At No. 47-B2, 2nd Stage, Near Church Main Road Madhuvana Layout Srirampura, Mysore-570023

Rent : 15000/-

7019799684

ಜಮೀನು ಮಾರಾಟಕ್ಕಿದೆ
ಪಿರಿಯಾಪಟ್ಟಣದಿಂದ ಸಿದ್ದಾಪುರ ಮಡಿಕೇರಿ ಹೆದ್ದಾರಿಗೆ ಹೊಂದುಕೊಂಡಂತೆ ಟೌನ್‌ನಿಂದ 2 ಕಿ.ಮೀ. ಒಳಗೆ ಕಮರ್ಷಿಯಲ್ ಸ್ವತ್ತು ಎರಡು ಎಕರೆ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಇದ್ದು ಗುಂಟೆಗಳ ಲೆಕ್ಕದಲ್ಲಿ ತಕ್ಷಣದಲ್ಲಿ ಮಾರಾಟಕ್ಕಿದೆ.

9611881603

ತೇಜಸ್ವಿನಿ ಟೂರಿಸ್ಟ್
16–6–23 ರಿಂದ 16 ದಿನ ಜ್ಯೋತಿರ್ಲಿಂಗ, ಮಹಾಕಾಳೇಶ್ವರ, ಸೋಮನಾಥ್, ನಿಷ್ಕಂಲಕ ಮಹಾದೇವ, ನಾಗೇಶ್ವರ, ಅಂಬಾಜಿ, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಗುಜರಾತ್ ಇತ್ಯಾದಿ

26–8–23 ರಿಂದ 18 ದಿನ, ಚಾರ್‌ಧಾಮ್, ಕೇಧಾರ್‌ನಾಥ್, ಬದರಿನಾಥ್, ಗಂಗೋತ್ರಿ, ಯಮುನೋತ್ರಿ, ತೆಹರಿಡ್ಯಾಂ, ಉತ್ತರಕಾಶಿ, ಇತ್ಯಾದಿ

9379792644

ಮನೆ ಮಾರಾಟಕ್ಕಿದೆ
24x45

ಪರುಶುರಾಮ ದೇವಸ್ಥಾನ ರಸ್ತೆ, ಹಳ್ಳದಕೇರಿ ಸಪ್ತಸ್ವರ ನಿಲಯ, ನಂಜನಗೂಡು

ಮುತ್ತುರಾಜ್ (ಮುತ್ತು)

9964763172

ಟೆಲಿಕಾಮ್ ಲೇಔಟ್
30x40 N/F ಸೈಟು @Rs.25 ಲಕ್ಷ

ಬ್ಯಾಂಕ್ ಲೋನ್ ಲಭ್ಯ ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರಸ್ತೆ

9538583377

ಹೊಸ ಮನೆ ಮಾರಾಟಕ್ಕಿದೆ
1019, ಹಂಚ್ಯಾ ಸಾತಗಳ್ಳಿ, B ವಲಯ 20x30 ರಲ್ಲಿ G/F & F/F (South Face) ಹೊಸ ಮನೆ ಮಾರಾಟಕ್ಕಿದೆ.

ಬೆಲೆ : 64 ಲಕ್ಷ

9448075383

WANTED
A Two Wheeler Service Chain Requires Franchiese Business Development Manager

Salary: 20,000+ Incentives

9986609277

COMMERCIAL SPACE FOR RENT
Suitable for Bank, Office, Software Company Ground Floor - 1200 Sqft 1St Floor- 1500 Sqft 2nd Gloor - 1570 Sqft, Cellar 1450 Sqft Dattagalli 2nd Stage, Near Netaji Circle, 80 Feet Road, Infront of Muthot Finance, Mysore

9740246040

READY TO REGISTRATION SITES
ಮೈಸೂರಿನ ಸುತ್ತಮುತ್ತ MUDA & DTCP Approved ಸೈಟ್‌ಗಳು ಕೇವಲ ರೂ. 10 ಲಕ್ಷಕ್ಕೆ*ದೊರೆಯುತ್ತದೆ ಹಾಗೂ ಬ್ಯಾಂಕ್ ಲೋನ್ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

6363082326

ಕೆಲಸಕ್ಕೆ ಬೇಕಾಗಿದ್ದಾರೆ
ECOM EXPRESS ಕೊರಿಯರ್ ಅಲ್ಲಿ ಕಲ್ಯಾಣಗಿರಿ ಸುತ್ತಮುತ್ತ ಕೊರಿಯರ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ : ESI+PF ಸೌಲಭ್ಯವಿದೆ

9686844533
9901990652
7022739849

ಶಿಕ್ಷಕಿಯರು ಬೇಕಾಗಿದ್ದಾರೆ
(ಮೈಸೂರು ಗ್ರಾಮಾಂತರ)

DEd- 04

BSE, BED- 02

Spoken English- 02

DPEd - 02

9448071449
8147472526

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಕೂರ್ಗಹಳ್ಳಿ ಕೈಗಾರಿಕಾ ಪ್ರದೇಶ ಮತ್ತು ಕಡಕೊಳ ಕೈಗಾರಿಕಾ ಪ್ರದೇಶಗಳಲ್ಲಿ ಉನ್ನತ ಕಂಪನಿ ಹಾಗೂ ಕಾರ್ಖಾನೆಗಳಲ್ಲಿ, ಕೆಲಸ ಮಾಡಲು SSLC, PUC, Any Degree. (ITI, Welder, Electrical, Etc) ESI, PF ಸೌಲಭ್ಯ ಇದೆ. ಮೈಸೂರು ಉನ್ನತ ರೆಸಾರ್ಟ್‌ಗಳಲ್ಲಿ , (Security, Helper, Stewards, Housekeeping, Front Office Work) ತಾಂಡವಪುರ, ಶ್ರೀರಂಗಪಟ್ಟಣ, ಬನ್ನಿಮಂಟಪ, ಇಲ್ಲಿ ಕೆಲಸ ಮಾಡಲು ಪುರುಷರು/ ಮಹಿಳೆಯರು ಬೇಕಾಗಿದ್ದಾರೆ. ಉಚಿತ ಊಟ ವಸತಿ ಸೌಲಭ್ಯ ಇದೆ.

9036461347, 9945319311

HOUSE FOR LEASE
2BHK House with Car Parking for Lease in KC Layout

8310504929

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ ಪ್ರತಿ ದಿನ ವಧುವರರ ನೇರ ಸಂದರ್ಶನ ಇರುತ್ತದೆ.

ಡಾ. ಗುರೂಜಿ

7899625268
9448229184

100% Job
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 14,500 ರಿಂದ 39,000/- ESI+PF+OT ಸೇರಿ ಷರತ್ತು ಅನ್ವಯ

9036548905,9035143190

GIRLS P.G.
ನೇತಾಜಿ ಸರ್ಕಲ್, ದಟ್ಟಗಳ್ಳಿ, ಮೈಸೂರು Location ಹೋಟೆಲ್ ನಳಪಾಕ್, ಸಾ.ರಾ. ಮಹೇಶ್ Choultry 3 kms From Kuvempunagar & Bhogadi.Near to ಸುಯೋಗ ಆಸ್ಪತ್ರೆ, Sigma ನರ್ಸಿಂಗ್ ಹೋಮ್ and BM institute

8859011546

S.K. CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ಹೊಸ ಮನೆ & Altration Work, Plan, 3D Elevation, ಸಹಿತ ಕಟ್ಟಿ ಕೊಡುತ್ತೇವೆ.

9620528490

ಮನೆ ಮಾರಾಟಕ್ಕಿದೆ
ಮೈಸೂರು ನಗರ ಕೃಷ್ಣಮೂರ್ತಿಪುರಂ, 4ನೇ ಕ್ರಾಸ್, ಮನೆ ನಂ. 1299, ವಿಸ್ತೀರ್ಣ 32x70,+3x40 =2360 ಚದರ ಅಡಿ ಈ ನಿವೇಶನದಲ್ಲಿ ಕಟ್ಟಿರುವ ನೆಲ ಅಂತಸ್ತಿನಲ್ಲಿ 2 ಮನೆಗಳು ಮತ್ತು ಒಂದನೇ ಮಹಡಿಯಲ್ಲಿ 2ಮನೆಗಳು ಒಟ್ಟು 4 ಮನೆಗಳು ಬೆಲೆ ಚದರ ಅಡಿಗೆ ರೂ.7000/–

ಮಾಲೀಕರು **9845120632** **8105087957**

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ/ ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ ಸಂಬಳ 12000 ದಿಂದ 18000 (ESI, PF ಸೌಲಭ್ಯ ಇರುತ್ತದೆ.)

8050699742
6366141518

30X40 SALE
@ OLIVE ENCLAVE

Mysore-Bangalore High way 3 km from Columbia Hospital.

28 Lakhs

9538839926

ಜಮೀನು ಮಾರಾಟಕ್ಕಿದೆ
ಟಿ.ನರಸೀಪುರ ರಸ್ತೆ, ಮೇಗಳಾಪುರ ಸಮೀಪ ವಿಸ್ತೀರ್ಣ 1 ಎಕರೆ 10 ಗುಂಟೆ ಡಾಂಬರ್ ರಸ್ತೆಗೆ ಹೊಂದಿಕೊಂಡಿದೆ. ಫಾರ್ಮ್‌ಹೌಸ್‌ಗೆ ಸೂಕ್ತವಿದೆ. ರಿಂಗ್ ರಸ್ತೆಯಿಂದ 15 ಕಿ.ಮೀ ದೂರವಿದೆ ಬೆಲೆ ಎಕರೆಗೆ 65 ಲಕ್ಷ.

ಆಸಕ್ತರು ಸಂಪರ್ಕಿಸಿ ಮಾಲೀಕರು:

9606375060

FLAT FOR SALE
Vacant 3BHK North Facing Ground Floor Flat for Immediate Sale in Posh V.V.Mohalla With Good Amenities Clear Titles broker Excuse

9480308402
9004470320

SITE FOR SALE
Vijayanagar 4th Stage 30x40 West Facing Panchacharya Layout

9845809369

FOR RENT
S.J.R.A. Complet Ramavilasa Road, Near Sadvidya College Ist Floor 1400 Sqft, 2nd Floor 472 &762 sqft with lift suitable for Tution, Offices, Socities, Finance, Clinic. Wanted for Lease 3 Bedroom House Near Jayanagar, K.M Puram, Agrahara, Saraswathipuram

9448425656,9449942594

HOUSE FOR RENT
Ground Floor, Spacious, Newly built, Single Rented House with Parking Facility (North and East face road) in 40x40 Dimension area near Hinkal Ring Road Singnal Circle, Mysore

9741534036

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಸಾರ್ವಜನಿಕ ಆರೋಗ್ಯ ಕೇಂದ್ರದ ಅನಾರೋಗ್ಯ ಪರಿಸ್ಥಿತಿ

ಹೆಚ್.ಡಿ.ಕೋಟೆ ತಾಲೂಕು ಆಸ್ಪತ್ರೆಯಲ್ಲಿ ರೋಗಿಗಳ ಪಾಡು ಅಧೋಗತಿ



ಹೆಚ್.ಡಿ.ಕೋಟೆ, ಮೇ 19– ಇದು ತಾಲೂಕು ಸಾರ್ವಜನಿಕ ಆರೋಗ್ಯ ಆಸ್ಪತ್ರೆಯ ಅನಾರೋಗ್ಯ ಪರಿಸ್ಥಿತಿ. ಎಲ್ಲವೂ ಇದ್ದು ಏನೂ ಇಲ್ಲದಂತಾಗಿದೆ. ತಾಲೂಕು ಕೇಂದ್ರ ಸಾರ್ವಜನಿಕ ಆಸ್ಪತ್ರೆ.

ಹೆಚ್.ಡಿ.ಕೋಟೆ ತಾಲೂಕು ಕೇಂದ್ರ ಸ್ಥಾನದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಯಂತ್ರವಿದೆ. ಆದರೆ ತಜ್ಞರಿಲ್ಲದೆ ರೋಗಿಗಳು ದುಬಾರಿ ಬೆಲೆ ತೆತ್ತು ಖಾಸಗಿ ಸ್ಕ್ಯಾನಿಂಗ್ ಕೇಂದ್ರದ ಮೊರೆ ಹೋಗಬೇಕಾಗಿದೆ. ಆಸ್ಪತ್ರೆ ಆವರಣದಲ್ಲೇ ಜನೌಷಧ ಕೇಂದ್ರವಿದೆ. ಆದರೆ ಬಾಗಿಲು ತೆರೆದು ಒಂದೂವರೆ ತಿಂಗಳಾಗಿದೆ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಯಾರೂ ಕ್ಯಾರೆ ಅನ್ನುವವರಿಲ್ಲ. ಇದರಿಂದ ರೋಗಿಗಳ ಪಾಡು ಹೇಳತೀರದಾಗಿದೆ.

ಪ್ರೊ.ನಂಜುಂಡಪ್ಪ ವರದಿಯಂತೆ ಹೆಚ್.ಡಿ.ಕೋಟೆ ತಾಲೂಕು ತೀರ ಹಿಂದುಳಿದ ತಾಲೂಕು ಎನಿಸಿಕೊಂಡಿದೆ. ಮೈಸೂರು ಜಿಲ್ಲೆಯಲ್ಲೇ ಹೆಚ್.ಡಿ.ಕೋಟೆ ತಾಲೂಕು ಇತರೆ ತಾಲೂಕುಗಳಿಗಿಂತ 3 ಪಟ್ಟು ಹೆಚ್ಚು ವಿಸ್ತೀರ್ಣ ಹೊಂದಿದೆ. ಈ ತಾಲೂಕಿನಲ್ಲಿ ಎಸ್ಸಿ ಎಸ್ಟಿ ಸಮುದಾಯದವರೇ ಬಹುಸಂಖ್ಯೆಯಲ್ಲಿದ್ದಾರೆ. ಜೀವನೋಪಾಯಕ್ಕಾಗಿ ಕೂಲಿ ಅವಲಂಬಿಸಿ ಜೀವನ ನಡೆಸುವವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಇಂಥವರಿಗೆ ಸೂಕ್ತ ಆರೋಗ್ಯ ಕಲ್ಪಿಸ ಬೇಕಾದ ಅಗತ್ಯವಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯ ಈ ಕಾಲದಲ್ಲಿ ಜೀವನ ನಡೆಸುವುದೇ ಕಷ್ಟಕರ ಹೀಗಿರುವಾಗ ಆರೋಗ್ಯ ಕೆಟ್ಟರೆ ದುಬಾರಿ ಬೆಲೆ ನೀಡಿ ಔಷಧ ಖರೀದಿಸುವುದು ತೀವ್ರ ಸಂಕಷ್ಟವಾಗಿದೆ.

ಬಾಗಿಲು ತೆರೆಯದ ಜನೌಷಧ ಕೇಂದ್ರ: ಔಷಧಗಳ ಬೆಲೆ ಗಗನಕ್ಕೇರಿರುವುದನ್ನು ಮನಗಂಡಿರುವ ಕೇಂದ್ರ ಸರ್ಕಾರ ಜನೌಷಧ ಕೇಂದ್ರಗಳನ್ನು ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ಆರಂಭಿಸಿತು. ಜನೌಷಧ ಕೇಂದ್ರಗಳಲ್ಲಿ ಸುಮಾರು 1800ಕ್ಕೂ ಅಧಿಕ ಮಾದರಿಯ ಔಷಧಗಳನ್ನು ಮಾರಾಟ ಮಾಡಬೇಕೆಂಬ ನಿಯಮವಿದೆ. ಎಂಎಸ್‌ಎಲ್ ಕಂಪನಿಗೆ ಔಷಧ ಮಾರಾಟದ ಹಕ್ಕು ಹಸ್ತಾಂತರಿಸಿದೆ. ಮಾರುಕಟ್ಟೆ ಬೆಲೆಗಿಂತ ಅತಿ ಕಡಿಮೆ ಬೆಲೆಯಲ್ಲಿ ಔಷಧ ಮಾರಾಟ ಮಾಡಬೇಕು ಅನ್ನುವುದು ಜನೌಷಧ ಕೇಂದ್ರದ ಉದ್ದೇಶ.

ಹೆಚ್.ಡಿ.ಕೋಟೆಯಲ್ಲೂ ಜನೌಷಧ ಕೇಂದ್ರವಿದೆ. ಆದರೆ ಕಳೆದ ಒಂದೂವರೆ ತಿಂಗಳಿಂದ ಬಾಗಿಲು ತೆರೆದೇ ಇಲ್ಲ ಯಾರೂ ಹೇಳುವವರು, ಕೇಳುವವರಿಲ್ಲದಂತಾಗಿದೆ. ಇಲ್ಲಿನ ಜನೌಷಧ ಕೇಂದ್ರದಲ್ಲಿ ಕೇವಲ 200ರಿಂದ 250 ಬಗೆಯ ಔಷಧಗಳನ್ನು ಮಾತ್ರ ಮಾರಾಟ ಮಾಡುತ್ತಿದ್ದಾರೆ ಅನ್ನುವ ಆರೋಪ ಕೇಳಿ ಬರುತ್ತಿದೆ. ಜನೌಷಧ ಕೇಂದ್ರ ಬಾಗಿಲು ತೆರೆಯದೇ ಇರುವುದರಿಂದ ರೋಗಿಗಳು ಖಾಸಗಿ ಅಂಗಡಿಗಳಲ್ಲಿ ದುಬಾರಿ ಬೆಲೆ ನೀಡಿ ಔಷಧ ಖರೀದಿಸಬೇಕಾದ ಅನಿವಾರ್ಯತೆ ಇದೆ.

ಈ ಕುರಿತು ಹಲವಾರು ಬಾರಿ ಮಾಧ್ಯಮಗಳಲ್ಲಿ ಸುದ್ದಿಯಾಗಿದ್ದರೂ ಕ್ಯಾರೆ ಅನ್ನುವವರಿಲ್ಲ. ಕೂಡಲೇ ಸಂಬಂಧಪಟ್ಟವರು ತಾಲೂಕು ಜನೌಷಧ ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕಾಗಿದೆ.

ಸ್ಕ್ಯಾನಿಂಗ್ ಯಂತ್ರ ಇದೆ ತಜ್ಞರಿಲ್ಲ: ಹೆಚ್.ಡಿ.ಕೋಟೆ ತಾಲೂಕು ಕೇಂದ್ರ ಸ್ಥಾನದ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ವ್ಯವಸ್ಥೆ ಇರಲಿಲ್ಲ. ಮಾಧ್ಯಮ ಪ್ರತಿನಿಧಿಗಳು ಶಾಸಕ ಅನಿಲ್ ಚಿಕ್ಕಮಾದು ಅವರ ಗಮನ ಸೆಳೆದ ಹಿನ್ನೆಲೆಯಲ್ಲಿ ಒಂದೂವರೆ ವರ್ಷದ ಹಿಂದೆ ಸಾರ್ವಜನಿಕ ಆಸ್ಪತ್ರೆಗೆ ನೂತನ ಸ್ಕ್ಯಾನಿಂಗ್ ಯಂತ್ರ ಮಂಜೂರು ಮಾಡಿಸಲಾಯಿತು. ತಜ್ಞರೊಬ್ಬರನ್ನು ನಿಯೋಜನೆಗೊಳಿಸದೇ ಇರುವುದರಿಂದ ಸ್ಕ್ಯಾನಿಂಗ್ ಯಂತ್ರ ಇದ್ದೂ ಉಪಯೋಗಕ್ಕೆ ಬಾರದೆ ತುಕ್ಕು ಹಿಡಿಯಲಾರಂಭಿಸಿದೆ.

ದುಬಾರಿ ಬೆಲೆ ನೀಡಿ ಸ್ಕ್ಯಾನ್ ಮಾಡಿಸಬೇಕು: ತಾಲೂಕಿನಲ್ಲಿ ಬಹುಸಂಖ್ಯೆಯಲ್ಲಿ ಕೂಲಿ ಕಾರ್ಮಿಕರಿದ್ದು ದಿನಕ್ಕೆ 200–300 ರೂ.ಗೆ ಕೂಲಿ ಮಾಡಬೇಕು. ಆದರೆ ಖಾಸಗಿಯಲ್ಲಿ ಸ್ಕ್ಯಾನ್ ಮಾಡಿಸಲು ತೀರ ಕಡಿಮೆ ಅಂದರೆ 800 ರೂ. ಬೇಕು. ಒಮ್ಮೆ ಸ್ಕ್ಯಾನ್ ಮಾಡಿಸಲು ಕೂಲಿ ಕಾರ್ಮಿಕರು 1 ವಾರದ ಪರಿಶ್ರಮ ಪಡಬೇಕು.

ಖಾಸಗಿ ಸೆಂಟರ್‌ನತ್ತ ಮುಗಿಬಿದ್ದ ರೋಗಿಗಳು: ತಾಲೂಕು ಕೇಂದ್ರ ಸ್ಥಾನದಲ್ಲಿ ಒಂದೇ ಕಡೆ ಖಾಸಗಿ ಸ್ಕ್ಯಾನಿಂಗ್ ವ್ಯವಸ್ಥೆ ಇದೆಯಾದರೂ ಅಲ್ಲಿಯೂ ಕೂಡ ಪ್ರತಿದಿನ 3 ಗಂಟೆ ನಂತರವಷ್ಟೇ ತಜ್ಞರು ಆಗಮಿಸುತ್ತಿದ್ದಾರೆ. ಇದಕ್ಕಾಗಿ ರೋಗಿಗಳು ಗಂಟೆಗಟ್ಟಲೇ ಕಾದು ಕುಳಿತಿರಬೇಕಾದ ಅನಿವಾರ್ಯತೆ ಇದೆ. 4 ಗಂಟೆಗೆಲ್ಲಾ ಸರ್ಕಾರಿ ಆಸ್ಪತ್ರೆ ವೈದ್ಯರು ಕರ್ತವ್ಯ ಮುಗಿಸಿ ನಿರ್ಗಮಿಸುವುದರಿಂದ ಸ್ಕ್ಯಾನಿಂಗ್ ರಿಪೋರ್ಟ್ ವೈದ್ಯರಿಗೆ ತೋರಿಸಲು ರೋಗಿಗಳು ಹರಸಾಹಸಪಡಬೇಕಾಗಿದೆ.

ಈ ಎಲ್ಲಾ ಅಂಶಗಳತ್ತ ಶಾಸಕರು ಹಾಗೂ ಸಂಬಂಧ ಪಟ್ಟ ಅಧಿಕಾರಿಗಳು ಗಮನ ಹರಿಸಿ ಬಡರೋಗಿಗಳ ಆರೋಗ್ಯದ ದೃಷ್ಟಿಯಿಂದ ಹಿಂದುಳಿದ ಎಚ್.ಡಿ. ಕೋಟೆ ತಾಲೂಕಿನ ಆಸ್ಪತ್ರೆಗಳ ಆರೋಗ್ಯ ಸೇವೆಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ತಾಲೂಕಿನ ಜನ ಮನವಿ ಮಾಡಿದ್ದಾರೆ.

> ಕೋಟೆ ತಾಲೂಕು ಕೇಂದ್ರದ ಸರ್ಕಾರಿ ಆಸ್ಪತ್ರೆಯಲ್ಲಿ ಬಡರೋಗಿಗಳಿಗೆ ಸರ್ಕಾರದ ಸವಲತ್ತುಗಳು ಸಮರ್ಪಕವಾಗಿ ದೊರೆಯುತ್ತಿಲ್ಲ. ಕೆಲವೊಮ್ಮೆ ಆಸ್ಪತ್ರೆಯಲ್ಲಿ ಔಷಧ ಮಾತ್ರೆಗಳೂ ಲಭ್ಯವಾಗದೆ ಖಾಸಗಿಯಲ್ಲಿ ಖರೀದಿಸಬೇಕು. ಇನ್ನು ಸ್ಕ್ಯಾನಿಂಗ್ ಮಿಷನ್ ಇದೆ ತಜ್ಞರಿಲ್ಲದೆ ಖಾಸಗಿಯಾಗಿ ಸ್ಕ್ಯಾನ್ ಮಾಡಿಬೇಕು. ಆರೋಗ್ಯಕ್ಕಾಗಿ ದುಡಿದ ಹಣವನ್ನೆಲ್ಲಾ ತೆರಬೇಕಾದ ಸ್ಥಿತಿಯಿದೆ.
>
> –ಅಂಬುಜಾಕ್ಷಿ, ಎನ್.ಬೇಗೂರು ನಿವಾಸಿ.

> ಸ್ಕ್ಯಾನಿಂಗ್ ಯಂತ್ರ ತಜ್ಞರನ್ನು ನಿಯೋಜಿಸಲು ಲಕ್ಷಾಂತರ ರೂ. ವೇತನ ನೀಡಬೇಕು. ನಾವು ಸರ್ಕಾರದ ವತಿಯಿಂದ ಗುತ್ತಿಗೆ ಆಧಾರದ ಮೇಲೆ ತಜ್ಞರನ್ನು ನಿಯೋಜಿಸಿದರೆ ಕಡಿಮೆ ಸಂಬಳ ಕೊಡುತ್ತಾರೆ ಎಂದು ಯಾರೊಬ್ಬರೂ ಕೆಲಸಕ್ಕೆ ಬರುತ್ತಿಲ್ಲ. ಹೀಗಾಗಿ ಸ್ಕ್ಯಾನಿಂಗ್ ಆರಂಭಿಸಲು ಜಿಲ್ಲಾ ಆರೋಗ್ಯಾಧಿಕಾರಿಗಳೊಡನೆ ಸಮಾಲೋಚಿಸಿ, ಆರೋಗ್ಯ ಇಲಾಖೆ ಹಿರಿಯ ಅಧಿಕಾರಿಗಳು ಹಾಗೂ ಕಮಿಷನರ್ ಜೊತೆ ಚರ್ಚೆ ಮಾಡಲಾಗಿದೆ. ಸರ್ಕಾರ ರಚನೆಯಾಗುತ್ತಿದ್ದಂತೆಯೇ ಸ್ಕ್ಯಾನಿಂಗ್ ಆರಂಭಿಸುವ ಭರವಸೆ ನೀಡಿದ್ದಾರೆ. ಇನ್ನು ಜನೌಷಧ ಕೇಂದ್ರ ಸೋಮವಾರದಿಂದ ಆರಂಭಿಸಲು ಕ್ರಮ ಕೈಗೊಳ್ಳಲಾಗಿದೆ.
>
> 
>
> – ಡಾ.ಸೋಮಣ್ಣ, ಆಡಳಿತಾಧಿಕಾರಿ, ಸಾರ್ವಜನಿಕ ಆಸ್ಪತ್ರೆ.

ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ

ಮಠಾಧೀಶರ ಮಧ್ಯ ಪ್ರವೇಶ ಖಂಡನೀಯ



ತಿ.ನರಸೀಪುರ, ಮೇ 19– ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ ಮಠಾಧೀಶರ ಮಧ್ಯ ಪ್ರವೇಶ ಖಂಡನೀಯ ಎಂದು ದಲಿತ ಸಂಘರ್ಷ ಸಮಿತಿ ಐಕ್ಯ ಹೋರಾಟ ಚಾಲನಾ ಸಮಿತಿ ತಿಳಿಸಿದೆ.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಮುಖಂಡ ಚುಂಚನಹಳ್ಳಿ ಮಲ್ಲೇಶ್, ಚುನಾವಣೆ ಸಂದರ್ಭ ಕಾಂಗ್ರೆಸ್‌ಗೆ ಮತ ನೀಡಿ ಎಂದು ಹೇಳದ ಮಠಾಧೀಶರು ಈಗ ತಮ್ಮ ಜಾತಿ ನಾಯಕರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿ ಎಂದು ಕಾಂಗ್ರೆಸ್ ವರಿಷ್ಠರ ಮೇಲೆ ಒತ್ತಡ ಹೇರುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾದದು ಎಂದರು.

70ರ ದಶಕದಿಂದಲೂ ದಲಿತ ಚಳವಳಿಗಳು ಸಕ್ರಿಯವಾಗಿದ್ದು, ಜನಸಾಮಾನ್ಯರ ಹಕ್ಕುಗಳಿಗಾಗಿ ಹೋರಾಡುತ್ತಾ ಬಂದಿದೆ. ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಜನ ವಿರೋಧಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಲು ಈ ಬಾರಿಯ ಚುನಾವಣೆಯಲ್ಲಿ ಪ್ರತಿ ಗ್ರಾಮದಲ್ಲಿ ಪ್ರಗತಿಪರ ಚಿಂತನೆಗೆ ಪೂರಕವಾದ ಪಕ್ಷ ಬೆಂಬಲಿಸುವಂತೆ ಮನವಿ ಮಾಡಿದ್ದರ ಫಲವಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ ಎಂದರು.

ಜಾತಿವಾದಿ, ಮಠಾಧೀಶರ ಮಾತಿಗೆ ಮನ್ನಣೆ ನೀಡದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯದ ರಾಜಕೀಯ ಬೆಳವಣಿಗೆ ಗಮನಿಸಿ, ಕಾಂಗ್ರೆಸ್‌ಗೆ ಹೆಚ್ಚು ಮತಗಳನ್ನು ನೀಡಿರುವ ದಲಿತ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ ಜೊತೆಗೆ ದಲಿತ ನಾಯಕರಾದ ಪರಮೇಶ್ವರ್ ಅಥವಾ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಪರಿಗಣಿಸಿ ಕ್ರಮವಾಗಿ ಸಿಎಂ ಅವಧಿ ವಿಂಗಡಿಸಿ ಸಾಮಾಜಿಕ ನ್ಯಾಯ ಒದಗಿಸುವಂತೆ ಸಮಿತಿ ಒತ್ತಾಯಿಸುತ್ತದೆ ಎಂದರು. ಈ ವೇಳೆ ಬನ್ನಹಳ್ಳಿ ಸೋಮಣ್ಣ, ಮಣಿಯಯ್ಯ, ಕಾರ್ಯ ಬಸವಣ್ಣ, ಮೆಲ್ಲಹಳ್ಳಿ ನಾರಾಯಣ, ಯರಗನಹಳ್ಳಿ ಸುರೇಶ್, ಆಲಗೂಡು ಶಿವಣ್ಣ ಹಾಜರಿದ್ದರು.

ತರಕಾರಿ ಬೆಳೆಗಳಲ್ಲಿ ನಿಖರ ಬೇಸಾಯ ತರಬೇತಿ ಕಾರ್ಯಾಗಾರ



ಹುಣಸೂರು, ಮೇ 19– ತಾಲೂಕಿನ ಬನ್ನಿಕುಪ್ಪೆ ಗ್ರಾಪಂ ವ್ಯಾಪ್ತಿಯ ಹಳೇಬೀಡು ಗ್ರಾಮದಲ್ಲಿ ಕೃಷಿ ವಿವಿ ಬೆಂಗಳೂರು, ವಿಸ್ತರಣಾ ಶಿಕ್ಷಣ ಘಟಕ, ನಾಗನಹಳ್ಳಿ ಮೈಸೂರು ಮತ್ತು ಬೈಫ್ ಸುಸ್ಥಿರ ಜೀವನಾಧಾರ ಹಾಗೂ ಅಭಿವೃದ್ಧಿ ಸಂಸ್ಥೆ, ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ "ತರಕಾರಿ ಮತ್ತು ಶುಂಠಿ ಬೆಳೆಗಳಲ್ಲಿ ನಿಖರ ಬೇಸಾಯ ತಾಂತ್ರಿಕತೆಗಳು" ಎಂಬ ವಿಷಯದ ಬಗ್ಗೆ ರೈತರಿಗಾಗಿ ಒಂದು ದಿನದ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಹಳೇಬೀಡು ಗ್ರಾಪಂ ಅಧ್ಯಕ್ಷ ಹೆಚ್.ಆರ್. ಮಹೇಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರೈತರು ಸಾಂಪ್ರದಾಯಿಕ ಕೃಷಿಯಿಂದ ವೈಜ್ಞಾನಿಕ ಕೃಷಿಗೆ ಪ್ರಾಮುಖ್ಯತೆ ನೀಡುತ್ತಿರುವುದು ಸ್ವಾಗತಾರ್ಹ. ಆದರೂ ಅತಿಯಾದ ರಾಸಾಯನಿಕಗಳ ಬಳಕೆಯಿಂದ ವಾತಾವರಣದ ಮೇಲಷ್ಟೆ ಅಲ್ಲದೆ, ಮನುಷ್ಯನ ಆರೋಗ್ಯದ ಮೇಲೆಯೂ ವ್ಯತಿರಿಕ್ತ ಪರಿಣಾಮ ಬೀರುತ್ತಿರುವುದನ್ನು ರೈತರು ಅರಿಯಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಧ್ಯಾಪಕ ಡಾ.ಸಿ.ರಾಮಚಂದ್ರ, ರೈತರು ಸಾವಯವ ಗೊಬ್ಬರಗಳನ್ನು ಹಂತ ಹಂತವಾಗಿ ಮಣ್ಣಿಗೆ ಸೇರಿಸುವುದರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದಷ್ಟೇ ಅಲ್ಲದೆ, ಮಣ್ಣಿನ ಆರೋಗ್ಯವನ್ನು ಕಾಪಾಡಬಹುದು ಎಂದರು.

ಮಣ್ಣಿನಲ್ಲಿರುವ ಉಪಯುಕ್ತ ಸೂಕ್ಷ್ಮಾಣು ಜೀವಿಗಳ ವೃದ್ಧಿಸುವಲ್ಲಿ ದ್ರವರೂಪದ ಗೊಬ್ಬರಗಳು, ಕೊಟ್ಟಿಗೆ ಗೊಬ್ಬರ ಹಾಗೂ ಎರೆಹುಳು ಗೊಬ್ಬರಗಳ ಪ್ರಾಮುಖ್ಯತೆ ತಿಳಿಸುತ್ತಾ, ರೈತರು ಮಣ್ಣಿನ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಿಸಿ, ಪರೀಕ್ಷೆ ವರದಿಯ ಆಧಾರದ ಮೇಲೆ ರಸಗೊಬ್ಬರಗಳನ್ನು ಬಳಸಬೇಕು ಎಂದು ಕರೆ ನೀಡಿದರು.

ಸಹಾಯಕ ಪ್ರಾಧ್ಯಾಪಕ ರಾಹುಲ್ ದಾಸ್ ಮಾತನಾಡಿ, ತರಕಾರಿ ಹಾಗೂ ಶುಂಠಿ ಬೆಳೆಗಳಲ್ಲಿ ಅನುಸರಿಸಬೇಕಾದ ನಿಖರ ಬೇಸಾಯ ತಾಂತ್ರಿಕತೆಗಳಾದ ಹಸಿರೆಲೆ ಗೊಬ್ಬರಗಳ ಬಳಕೆ, ಕೊಟ್ಟಿಗೆ ಗೊಬ್ಬರವನ್ನು ಜೈವಿಕ ಪೀಡೆನಾಶಕಗಳಿಂದ ಪುಷ್ಟೀಕರಣದ ವಿಧಾನ ಮತ್ತು ಬಳಕೆ, ಪ್ಲಾಸ್ಟಿಕ್ ಹೊದಿಕೆಯಿಂದಾಗುವ ಅನುಕೂಲಗಳು, ರಸಗೊಬ್ಬರಗಳ ಬಳಕೆ, ರೋಗ ನಿರೋಧಕ ಹಾಗೂ ಅಧಿಕ ಇಳುವರಿ ನೀಡುವ ತಳಿಗಳು, ಸೂಕ್ಷ್ಮ ಪೋಷಕಾಂಶಗಳ ಮಿಶ್ರಣವಾದ ತರಕಾರಿ ಮತ್ತು ಶುಂಠಿ ಸ್ಪೆಶಲ್ ಬಳಕೆಯ ಬಗ್ಗೆ ವಿವರಿಸಿದರು.

ಸಹಾಯಕ ಪ್ರಾಧ್ಯಾಪಕಿ ಡಾ.ಆರ್.ಎನ್.ಪುಷ್ಪ, ಟೊಮ್ಯಾಟೋ, ಮೆಣಸಿನಕಾಯಿ ಬೆಳೆಗಳಲ್ಲಿ ಕಂಡು ಬರುವ ಪ್ರಮುಖ ರೋಗಗಳು ಮತ್ತು ಅವುಗಳ ನಿರ್ವಹಣಾ ಕ್ರಮಗಳು ಹಾಗೂ ಶುಂಠಿ ಬೆಳೆಗೆ ಮಾರಕವಾಗಿರುವ ಗಡ್ಡೆ ಕೊಳೆರೋಗದ ನಿರ್ವಹಣಾ ಕ್ರಮಗಳು, ಗಡ್ಡೆಗಳ ಉಪಚಾರದ ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಹಳೇಬೀಡು ಗ್ರಾಮದ ಮಹದೇಶ್ವರ ಗ್ರಾಮ ಜಲನಯನ ಸಮಿತಿ ಅಧ್ಯಕ್ಷ ಸತೀಶ್, ಪರಿಕರಗಳ ವರ್ತಕರಾದ ಮರಿಸಿದ್ದ ನಾಯಕ, ಧರಣೇಶ್ ಸೇರಿದಂತೆ ಇತರರಿದ್ದರು.

ಮುಖ್ಯಮಂತ್ರಿಯಾಗಿ ಸಿದ್ದು ಅಧಿಕಾರ ಸ್ವೀಕಾರ: ವಿಶೇಷ ಪೂಜೆ



ನಂಜನಗೂಡು, ಮೇ 19– ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸುವ ಹಿನ್ನೆಲೆಯಲ್ಲಿ ಶುಕ್ರವಾರ ತಗಡೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಯಕರ್ತರು ಶ್ರೀಕಂಠೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು.

ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ 135 ಸ್ಥಾನಗಳನ್ನು ಗಳಿಸುವ ಮೂಲಕ ನಿಚ್ಚಳ ಬಹುಮತದೊಂದಿಗೆ 2ನೇ ಬಾರಿಗೆ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿರುವುದು ಸಂತಸದ ವಿಚಾರ. ಈ ಹಿಂದೆ 5 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿ ಜನತೆಗೆ ನೀಡಿದ್ದ 165 ಭರವಸೆಗಳನ್ನು ಈಡೇರಿಸಿದ್ದ ಸಿದ್ದರಾಮಯ್ಯ ಬಡವರ, ಹಿಂದುಳಿದ, ದೀನ ದಲಿತ, ಅಲ್ಪಸಂಖ್ಯಾತರ ಪರ ಹಲವು ಯೋಜನೆ ಜಾರಿಗೊಳಿಸಿದ್ದರು. ಸಿದ್ದರಾಮಯ್ಯನವರು ಈ ಬಾರಿ ಕಾಂಗ್ರೆಸ್ ಪಕ್ಷ ಚುನಾವಣಾ ಸಂದರ್ಭ ರಾಜ್ಯದ ಜನತೆಗೆ ಭರವಸೆ ನೀಡಿದ್ದ ಐದು ಗ್ಯಾರಂಟಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ವಿಶ್ವಾಸವಿದೆ. ಸಂಘಟನಾ ಚತುರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿಯಾಗಿ ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸಲಿದ್ದಾರೆ ಎಂದರು. ಈ ವೇಳೆ ಮುಖಂಡರಾದ ಇಂಧನ ಬಾಬು, ಆರ್.ಮಹದೇವ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ಕೆ.ಬಿ. ಸ್ವಾಮಿ, ಕೆ.ಎಸ್.ಗಿರೀಶ್, ಆರ್.ಮಹದೇವ್, ಸೋಮಸುಂದರ್, ಲಕ್ಷ್ಮಿ, ಶಿವಣ್ಣ ಪುರುಷೋತ್ತಮ್, ಜಗದೀಶ್, ಕುಮಾರ, ಶಿವನಾಗ, ಪ್ರಕಾಶ್, ಮಹದೇವ ಸ್ವಾಮಿ, ಸುರೇಶ್ ಬಾಬು, ಗಿರೀಶ್, ಪರಶಿವ, ಪುಟ್ಟಸ್ವಾಮಿ ಉಪಸ್ಥಿತರಿದ್ದರು.

ಉಚಿತ ಹೃದಯ ತಪಾಸಣಾ ಶಿಬಿರ



ಗಾವಡಗೆರೆ, ಮೇ 19– ಗ್ರಾಮದ ಮರಾಠ ಭವನದಲ್ಲಿ ಮೇ 21ರಂದು ಬೆಳಗ್ಗೆ 8.30 ರಿಂದ ಮಧ್ಯಾಹ್ನ 2 ಗಂಟೆ ವರೆಗೆ ಉಚಿತ ಹೃದಯ ರೋಗ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಡಾ.ಮುರಳಿರಾವ್ ಹೃದಯ ರೋಗ ತಜ್ಞರು ಮುಕ್ತ ಹೃದ್ರೋಗ ಕೇಂದ್ರ ರಾಯಚೂರು, ಭಾರತೀಯ ವೈದ್ಯಕೀಯ ಸಂಘ(ಐಎಂಎ) ಕೃಷ್ಣರಾಜನಗರ, ಶ್ರೀ ಶಿವಛತ್ರಪತಿ ಮರಾಠ ಶ್ರೇಯೋಭಿವೃದ್ಧಿ ಸಮಿತಿ ಗಾವಡಗೆರೆ, ರೋಟರಿ ಕ್ಲಬ್ ಹುಣಸೂರು ಸಂಯುಕ್ತಾಶ್ರಯದಲ್ಲಿ ನಡೆಯುವ ಶಿಬಿರದಲ್ಲಿ ಉಚಿತವಾಗಿ ಬಿಪಿ, ಶುಗರ್, ಇಸಿಜಿ, ಎಕೋ ಸೇರಿದಂತೆ ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ನುರಿತ ತಜ್ಞ ವೈದ್ಯರಿಂದ ಉಚಿತವಾಗಿ ತಪಾಸಣೆ ಮಾಡಲಾಗುವುದು. ಆಸಕ್ತರು ಮೊದಲೇ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಮೊ.9900927259, 9911068227, 7899126590 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಕೆ.ವೆಂಕಟೇಶ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ



ಪಿರಿಯಾಪಟ್ಟಣ, ಮೇ 19– ಕ್ಷೇತ್ರದ ಹಿರಿಯ ಕಾಂಗ್ರೆಸ್ ಮುಖಂಡರೂ ಆದ ಶಾಸಕ ಕೆ.ವೆಂಕಟೇಶ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಪಿರಿಯಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಟಿಸ್ವಾಮಿ ಒತ್ತಾಯಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ವೆಂಕಟೇಶ್ ಸೌಮ್ಯ ಸ್ವಭಾವದ ಮುತ್ಸದ್ದಿ ರಾಜಕಾರಣಿ. ಜನತಾ ಪರಿವಾರದ ಹಿನ್ನೆಲೆಯುಳ್ಳ ಇವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪರಮಾಪ್ತರು. ಇವರು 1980ರಲ್ಲಿ ತಾಲೂಕು ಬೋರ್ಡ್ ಅಧ್ಯಕ್ಷರಾಗುವ ಮೂಲಕ ರಾಜಕಾರಣ ಆರಂಭಿಸಿದರು. ತಮ್ಮ 42 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ 9 ಚುನಾವಣೆಗಳನ್ನು ಎದುರಿಸಿ 6 ಬಾರಿ ಶಾಸಕರಾಗಿ, ಒಮ್ಮೆ ಸಚಿವರಾಗಿ, ಒಮ್ಮೆ ಬಿಡಿಎ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಈ ಬಾರಿಯ ಚುನಾವಣೆಯಲ್ಲಿ 20 ಸಾವಿರ ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ಆದ್ದರಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿರುವ ಇವರನ್ನು ಸಿದ್ದರಾಮಯ್ಯ ಸರ್ಕಾರದಲ್ಲಿ ಮಂತ್ರಿ ಮಾಡಬೇಕು ಎಂದು ಒತ್ತಾಯಿಸಿದರು.

ಕೆಪಿಸಿಸಿ ಸದಸ್ಯ ಅನಿಲ್‌ಕುಮಾರ್ ಮಾತನಾಡಿ, 2013ರ ಸಿದ್ದರಾಮಯ್ಯ ಸರ್ಕಾರದಲ್ಲಿ ಕೆ.ವೆಂಕಟೇಶ್‌ಗೆ ಅನ್ಯಾಯವಾಗಿದೆ. ಈ ಬಾರಿ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಅವರನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಬೇಕು ಎಂದರು.

ಪುರಸಭಾ ಸದಸ್ಯ ಮಂಜುನಾಥ್ ಮಾತನಾಡಿ, ಮೈಸೂರು, ಮಂಡ್ಯ, ಹಾಸನ ಸೇರಿದಂತೆ ಹಳೇ ಮೈಸೂರು ಪ್ರಾಂತ್ಯದ ಒಕ್ಕಲಿಗ ಸಮಾಜದ ಪ್ರಭಾವಿ ನಾಯಕರಾದ ಕೆ. ವೆಂಕಟೇಶ್ ಅವರ ಮುತ್ಸದಿತನಕ್ಕೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಸಚಿವ ಸ್ಥಾನ ಕಲ್ಪಿಸಬೇಕು. ಈ ಹಿಂದೆ ರಾಮಕೃಷ್ಣ ಹೆಗಡೆ ಸರ್ಕಾರದಲ್ಲಿ ಕೇವಲ ಶಾಸಕರಾಗಿದ್ದುಕೊಂಡೇ ರಾಜ್ಯದಲ್ಲಿಯೇ ಹೆಚ್ಚು ಜನತಾ ಮನೆಗಳನ್ನು ತರುವ ಮೂಲಕ ಬಡ ಜನತೆಗೆ ಆಶ್ರಯ ಕಲ್ಪಿಸಿದ್ದರು. ನಂತರ ಕಾವೇರಿ ನದಿ ಸ್ಥಳೀಯ ಮಟ್ಟದಲ್ಲಿ ಸದ್ಬಳಕೆ ಆಗಬೇಕು, ರೈತರ ಕೃಷಿಗೆ ಹಾಗೂ ತಾಲೂಕಿನ ಎಲ್ಲರೂ ಕಾವೇರಿ ನೀರನ್ನು ಕುಡಿಯಬೇಕು ಎಂಬ ಮಹದಾಸೆಯಿಂದ ತಾಲೂಕಿನಲ್ಲಿ ಮುತ್ತಿನ ಮುಳುಸೋಗೆ ಗ್ರಾಮದ ಬಳಿ ಕಾವೇರಿ ನದಿಯಿಂದ 150 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಗೊಳಿಸಿದ್ದಾರೆ. ಕರಡಿಲಕ್ಕನ ಕೆರೆ ಏತ ನೀರಾವರಿ ಯೋಜನೆ ಜಾರಿಗೊಳಿಸಿ ಅನ್ನದಾತರಲ್ಲಿ ವಿಶ್ವಾಸ ಮೂಡಿಸುವ ಮೂಲಕ ತಾಲೂಕಿನಲ್ಲಿ ರೈತರಿಗೆ ಗಂಗೆ ತಂದ ಭಗೀರಥ ಎನಿಸಿದ್ದಾರೆ. ತಾಲೂಕಿನಲ್ಲಿ ಅನೇಕ ಪದವಿ ಕಾಲೇಜುಗಳು, ಗ್ರಾಮಾಂತರ ಪ್ರದೇಶದ ಪ್ರಮುಖ ಸ್ಥಳಗಳಿಗೆ ಪದವಿ ಪೂರ್ವ ಕಾಲೇಜು, ಐಟಿಐ, ಡಿಪ್ಲೊಮಾ ಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ್ದಾರೆ. ಇನ್ನುಳಿದಂತೆ ಆರೋಗ್ಯ ಕ್ಷೇತ್ರದಲ್ಲಿ ಪಟ್ಟಣದ ಪ್ರಮುಖ ಭಾಗದಲ್ಲಿ 100 ಹಾಸಿಗೆಯುಳ್ಳ ಹೈಟೆಕ್ ಆಸ್ಪತ್ರೆ, ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಉಪ ಆರೋಗ್ಯ ಕೇಂದ್ರಗಳ ಸ್ಥಾಪನೆ ಸೇರಿದಂತೆ ಅನೇಕ ಗುರುತರ ಐತಿಹಾಸಿಕ ಅಭಿವೃದ್ಧಿ ಕೆಲಸಗಳನ್ನು ಮಾಡಿರುವ ಇವರ ಸೇವೆ ಅನನ್ಯ. ರಾಜ್ಯ ಮಟ್ಟದಲ್ಲಿಯೂ ಇವರ ಸೇವೆ ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಇವರನ್ನು ಸಚಿವರನ್ನಾಗಿ ಮಾಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಪುರಸಭಾ ಮಾಜಿ ಅಧ್ಯಕ್ಷ ಪಿ.ಎಸ್.ವಿಷಕಂಠಯ್ಯ, ಸದಸ್ಯರಾದ ಪಿ.ಎಸ್. ರವಿ, ಶ್ಯಾಂ, ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮತ್ ಜಾನ್ ಬಾಬು, ಮುಖಂಡರಾದ ತಮ್ಮಣ್ಣಯ್ಯ, ಪಿ.ಮಹದೇವ್, ಎಂ. ಮಂಜು, ಚನ್ನಕಲ್ ಶೇಖರ್, ಪಿ.ಪಿ.ಪುಟ್ಟಯ್ಯ, ಡಿ.ಎ.ಜವರಪ್ಪ, ರಾಜಶೇಖರ್, ಸುರೇಶ್, ಚಿಕ್ಕೇಗೌಡ, ಪುಟ್ಟರಾಜು, ಅಬ್ದುಲ್ ವಾಜೀದ್ ಸೇರಿದಂತೆ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

DRC CINEMAS

ದೂ : 4240422/4241800

ಸ್ಕ್ರೀನ್ 1	ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಡೇರ್‌ಡೆವಿಲ್ ಮುಸ್ತಫಾ (ಕ): ಬೆ.10.05ಕ್ಕೆ, ಸಂ.6.50ಕ್ಕೆ, ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಮ.1.10ಕ್ಕೆ, ಚಾರ್ಲಿ ನಂಬರ್ 10 (ಕ): ಸಂ.4.05ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.10ಕ್ಕೆ.
ಸ್ಕ್ರೀನ್ 3	ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, ಪಿಚ್ಚೈಕಾರನ್2 (ತ): ಮ.1.20ಕ್ಕೆ, ಸಂ.4.25ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.7.30ಕ್ಕೆ, ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ): ಸಂ.9.55ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, ಪಿಚ್ಚೈಕಾರನ್ 2(ತ): ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕರುಂಗಾ ಪಿಯಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಘವೇಂದ್ರ ಸ್ಟೋರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಸಿ ಕ ಭಾಯಿ ಕಿಸಿ ಕಿ ಜಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವೀರಂ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಸ್ಟಡಿ (ತೆ)	4 ಪ್ರದರ್ಶನಗಳು
ರಾಜ್‌ಕಮಲ್	
ಫಾಸ್ಟ್ ಎಕ್ಸ್ (ಇಂ) 2 ಪ್ರದರ್ಶನಗಳು ದಿ ಕೇರಳ ಸ್ಟೋರಿ(ಹಿಂ)	2 ಪ್ರದರ್ಶನಗಳು
ಸಂಗಂ	
ಶ್ರೀಮಂತ (ಕ)	4 ಪ್ರದರ್ಶನಗಳು
ಲಿಡೋ	
ಪಿಎಸ್–2 (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಏಜೆಂಟ್ (ತೆ)	4 ಪ್ರದರ್ಶನಗಳು
ಪ್ರಭಾ	
ಸುಮನ್ (ಕ)	4 ಪ್ರದರ್ಶನಗಳು

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ


ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ
ಎರಡನೇ ಬಾರಿಗೆ ಪ್ರಮಾಣವಚನ ಸ್ವೀಕರಿಸಲಿರುವ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯರವರಿಗೆ
ಹಾಗೂ
2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ
ಚಾಮರಾಜ ಕ್ಷೇತ್ರದ ಜನಪ್ರಿಯ ಶಾಸಕರಾಗಿ ಆಯ್ಕೆಯಾಗಿರುವ
ಸನ್ಮಾನ್ಯ ಶ್ರೀ ಕೆ.ಹರೀಶ್‌ಗೌಡರವರಿಗೆ
ಹೃತ್ಪೂರ್ವಕ
ಅಭಿನಂದನೆಗಳು
ದಿನೇಶ್
ಕಾಂಗ್ರೆಸ್ ಮುಖಂಡರು
ಅಧ್ಯಕ್ಷರು, ದೇವರಾಜ ಮಾರುಕಟ್ಟೆ
ಸುಜೀತ್ ಕುಮಾರ್
ಕಾಂಗ್ರೆಸ್ ಮುಖಂಡರು
ಮಂಜುನಾಥ್
ಕಾಂಗ್ರೆಸ್ ಯುವ ಮುಖಂಡರು
ರವಿ ರಾಜಕೀಯ
ಕಾಂಗ್ರೆಸ್ ಮುಖಂಡರು
ಕಾರ್ತಿಕ್ ಕೆಕೆ
ಕಾಂಗ್ರೆಸ್ ಯುವ ಮುಖಂಡರು
ಭಾಸ್ಕರ್ ಸಿ.
ಕಾಂಗ್ರೆಸ್ ಯುವ ಮುಖಂಡರು